ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallmmanudi@gmail.com E-paper: www.mallmmanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy

VOLUME - 13 ಸಂಪುಟ–13 | ISSUE - 34 ಸಂಚಿಕೆ– 34 | PAGE- 8 ಪುಟ–8 | ಮಂಗಳವಾರ 11.03.2025 | RS.2/- ಬೆಲೆ 2/–

# ಜಿಲ್ಲಾಸ್ಪತ್ರೆಗಳಲ್ಲಿ ಗುಣಮಟ್ಟದ ಔಷಧಿ ಸರಬರಾಜಿಗೆ ಕ್ರಮ: ದಿನೇಶ್ ಗುಂಡೂರಾವ್



ಮಲ್ಲಮ ನುಡಿ ವಾರ್ತೆ

ಬೆಂಗಳೂರು:ಮಾ.10: ಜಿಲ್ಲಾಸ್ಪತ್ರೆಗಳಲ್ಲಿ ಗುಣಮಟ್ಟದ ಔಷಧಿ ಒದಗಿಸಲು ಸರ್ಕಾರ ನಿಯಮ ಜಾರಿ ಮಾಡಿದೆ. ಹೆಚ್ಚು ಬೇಡಿಕೆ ಇರುವ ಔಷಧಿಗಳನ್ನು ಆಸ್ಪತ್ರೆಗಳಿಗೆ ಪೂರೈಕೆ ಮಾಡುವುದಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವಿಧಾನಪರಿಷತ್ತಿನ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ತಳವಾರ ಸಾಬಣ್ಣ ಪ್ರಶ್ನಿಸಿದ ಅವರು, ಜಿಲ್ಲಾ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇದೆ. ತೀವ್ರರೋಗಗ–ಕ್ಕೆ ಒಳಗಾದ ರೋಗಿಗಳಿಗೆ ಔಷಧಿ ಸಿಗುತ್ತಿಲ್ಲ. ಬಡವರು ಸರ್ಕಾರಿ ಆಸ್ಪತ್ರೆಗಳಿಗೆ ಬರುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಕಳಪೆ ಔಷಧಿ ಸರಬರಾಜು ಆಗುತ್ತಿದೆ. ಈ ಬಗ್ಗೆ ಕ್ರಮ ಆಗಬೇಕು ಎಂದು ಆಗ್ರಹಿಸಿದರು. ಪ್ರಶ್ನೆಗೆ ಉತ್ತರಿಸಿದ ಸಚಿವ ದಿನೇಶ್ ಗುಂಡೂರಾವ್ ಅವರು, ಔಷಧಿ ಗುಣಮಟ್ಟದ ಬಗ್ಗೆ ಇಲಾಖೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನಮ್ಮಲ್ಲಿ ಸರಬರಾಜು ಆಗುವ ಔಷಧಿ ಬಗ್ಗೆ ನಾವೇ ತಪಾಸಣೆ ಮಾಡುತ್ತಿದ್ದೇವೆ. ಇಡೀ ದೇಶದಲ್ಲಿ ಕಳಪೆ ಔಷಧಿಗಳ ಸಮಸ್ಯೆ ಇದೆ. ಕಳಪೆ ಔಷಧಿ ತಡೆಗೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಏಖಒಖಅಐ ಅವರು ಔಷಧಿ ಗುಣಮಟ್ಟದ ಬಗ್ಗೆ ವರದಿ ಕೊಟ್ಟಿರುತ್ತಾರೆ. ಆದರೂ ಖರೀದಿ ಮಾಡಿದ ಮೇಲೆ, ಸಪ್ಲೈ ಆದ ಮೇಲೆ ನಾವು ಕ್ವಾಲಿಟಿ ಚೆಕ್ ಮಾಡಿಸುತ್ತೇವೆ. ಮುಂದಿನ ದಿನಗಳಲ್ಲಿ ಕಂಪನಿಗಳಿಗೆ ಹೋಗಿ ನಾವೇ ಔಷಧಿ ಗುಣಮಟ್ಟದ ಪರಿಶೀಲನೆಗೆ ನಿರ್ಧಾರ ಮಾಡಲಾಗಿದೆ. ಇದಕ್ಕಾಗಿ ನಿಯಮಗಳ ಬದಲಾವಣೆಗೆ ಹಣಕಾಸು ಇಲಾಖೆಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು. ಔಷಧಿ ಖರೀದಿಗೆ ಟೆಂಡರ್‌ದಾರರು ಮುಂದೆ ಬರುತ್ತಿಲ್ಲ. ಹೀಗಾಗಿ ಸ್ಥಳೀಯವಾಗಿಯೇ ಔಷಧಿ ಖರೀದಿಗೆ ಸೂಚನೆ ನೀಡಲಾಗಿದೆ. ಸಾಕಷ್ಟು ಹಣವನ್ನ ಔಷಧಿ ಖರೀದಿಗೆ ಆಸ್ಪತ್ರೆಗಳಿಗೆ ನೀಡಲಾಗಿದೆ. ಬೇಡಿಕೆ ಅನುಗುಣವಾಗಿ ಔಷಧಿ ಕೊಡಲು ಆಗುತ್ತಿಲ್ಲ. ಈ ವರ್ಷ 1,084 ಡ್ರಗ್ ಖರೀದಿಗೆ ನಿರ್ಧಾರ ಮಾಡಲಾಗಿದೆ. ಬೇಡಿಕೆ ಇರುವ ಡ್ರಗ್‌ಗಳನ್ನ ಖರೀದಿಗೆ ಮುಂದಾಗಿದ್ದೇವೆ. ಔಷಧಿ ಸರಿಯಾಗಿ ಸರಬರಾಜು ಆಗಬೇಕು. ಈ ನಿಟ್ಟಿನಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಟೆಂಡರ್ ಪ್ರಕ್ರಿಯೆ ಸರಳೀಕೃತ ಮಾಡುತ್ತಿದ್ದೇವೆ. ತಮಿಳುನಾಡಿನ ವ್ಯವಸ್ಥೆ ಸರಿಯಾಗಿದೆ. ಅದರಂತೆ ನಿಯಮ ಸರಳೀಕರಣ ಮಾಡಿದ್ದೇವೆ. ಔಷಧಿ ಕೊರತೆ ನೀಗಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು. ಕಳಪೆ ಔಷಧಿ ಬಗ್ಗೆ ಕೇಂದ್ರಕ್ಕೆ ಪತ್ರ ಬರೆದಿದ್ದೇವೆ. ಔಷಧಿ ಕಂಪನಿಗಳು ಬೇರೆ ರಾಜ್ಯದವರು. ಹೀಗಾಗಿ ಕ್ರಮಕೈಗೊಳ್ಳಲು ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಬಾಣಂತಿಯ ಸಾವು ತಡೆಗೂ ಬಜೆಟ್‌ನಲ್ಲಿ ಹಣ ಒದಗಿಸಲಾಗಿದೆ. ರಾಜ್ಯದಲ್ಲಿ ಮೊದಲ ಬಾರಿಗೆ ಡ್ರಗ್ ರೀ ಕಾಲ್ ಪಾಲಿಸಿ ತರುತ್ತಿದ್ದೇವೆ ಎಂದರು.

## ಮಹಿಳೆಯರಿಂದ ಮಹಿಳೆಯರಿಗಾಗಿ ಜಿಲ್ಲಾಡಳಿತದಿಂದ ವಿಶೇಷ ಮಹಿಳಾ ದಿನಾಚರಣೆ




ಮಲ್ಲಮ್ಮ ನುಡಿ ವಾರ್ತೆ

ಬೀದರ:ಮಾ.10: ಮಹಿಳೆ ಜಗತ್ತಿನ ಅದ್ಭುತ ಶಕ್ತಿಯಾಗಿದ್ದು, ಸರಕಾರಿ ಸೇವೆ ಮಾಡುವ ಮಹಿಳೆಯರು ಕುಟುಂಬ ಹಾಗೂ ಕಚೇರಿ ಎರಡನ್ನು ಸರಿದೂಗಿಸಿಕೊಂಡು ಹೋಗುತ್ತಾರೆಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅಭಿಪ್ರಾಯಪಟ್ಟರು.

ಇಂದು ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾಡಳಿತದಿಂದ ಏರ್ಪಡಿಸಲಾದ ವಿಶೇಷ ಮಹಿಳಾ ದಿನಾಚರಣೆಯಲ್ಲಿ ಅವರು ಮಾತನಾಡುತ್ತಾ, ವೇದಿಕೆಯಲ್ಲಿ ಎಲ್ಲರೂ ಮಹಿಳೆಯರೇ ಸ್ಥಾನವನ್ನು ಅಲಂಕರಿಸಿರುವುದಕ್ಕೆ ಹರ್ಷ ವ್ಯಕ್ತಪಡಿಸಿ ಮುಂಬರುವ ಎಲ್ಲ ದಿನಮಾನಗಳಲ್ಲಿ ಎಲ್ಲ ಕಾರ್ಯಕ್ರಮಗಳಲ್ಲಿ ಶೇ.50 ರಷ್ಟು ಮಹಿಳೆಯರು ವೇದಿಕೆಯಲ್ಲಿ ಉಪಸ್ಥಿತರಿರಬೇಕೆಂದರು.

ಕೆಲಸಮಾಡುವ ಮಹಿಳೆಯರು ಕಚೇರಿಗೆ ಬರುವ ಮುನ್ನ ಮನೆಯಲ್ಲಿಯ ಎಲ್ಲ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿ ಕಚೇರಿಗೆ ಹಾಜರಾಗುತ್ತಾರೆ. ಸರಕಾರಿ ಸೇವೆಯ ಮಾಸಿಕ ವೇತನ ಆರ್ಥಿಕತೆಯ ದೃಷ್ಟಿಯಿಂದ

(2ನೇ ಪುಟ ನೋಡಿ)

## ಅಂತರರಾಜ್ಯ ಕಾಪರ್ ವೈರ್ ಕಳ್ಳರ ಬಂಧನ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಮಾ.10:ಗೂಗಲ್ ಮ್ಯಾಪ್ ಬಳಿಸಿ ಸೋಲಾರ್ ಪ್ಲ್ಯಾಂಟ್‌ಗೆ ಬಳಸುತ್ತಿದ್ದ ಕಾಪರ್ ವೈರ್ ಕಳ್ಳತನ ಮಾಡ್ತಿದ್ದ ಇಬ್ಬರು ಖತರ್ನಾಕ್ ಅಂತರರಾಜ್ಯ ಖದೀಮರನ್ನು ಬಂಧಿಸುವಲ್ಲಿ ಕಲಬುರಗಿ ಪೋಲಿಸರು ಯಶಸ್ವಿಯಾಗಿದ್ದಾರೆ.

ತೆಲಂಗಾಣ ಮೂಲದ ಪೋಲಾ ನಾಗೇಶ್ ಮತ್ತು ಯರಕುಲಿ ರಮೇಶ್ ಬಂಧಿತ ಆರೋಪಿಗಳಾಗಿದ್ದು, ಚಿತ್ತಾಪುರ ತಾಲೂಕಿನ ನಾಲವಾರ ಗ್ರಾಮದ ಹೊರವಲಯದಲ್ಲಿ ಸೋಲಾರ್ ಪ್ಲಾಂಟ್ ನಲ್ಲಿ 7 ಸಾವಿರ ಮೀಟರ್ ಕಾಪರ್ ವೈರ್ ಕದ್ದು ಎಸ್ಕೇಪ್ ಆಗಿದ್ದರು. ಈ ಕುರಿತು ಪ್ರಕರಣ ದಾಖಲಿಸಿ ಕೊಂಡ ವಾಡಿ ಪೋಲಿಸರು ಕಾರ್ಯಚರಣೆ ನಡೆಸಿ ಆರೋಪಿಗಳ ಹೆಡೆಮುರಿ ಕಟ್ಟುವಲ್ಲಿ ಸಫಲರಾಗಿದ್ದಾರೆ

ಈ ಇಬ್ಬರು ಖದೀಮರು ಗೂಗಲ್ ಮ್ಯಾಪ್ ಮೂಲಕ ಸೋಲಾರ ಫ್ಲ್ಯಾಂಟ್ ಸರ್ಚ್ ಮಾಡಿ, ಸ್ಥಳಕ್ಕೆ ಹೋಗಿ ಬೆಲೆ ಬಾಳುವ ಕಾಪರ್ ವೈರ್ ಕಳ್ಳತನ ಮಾಡಿ ಮಾರಾಟ ಮಾಡ್ತಿದ್ದರು. ಈ ಹಿಂದೆ ಸೇಡಂ ಠಾಣಾ ವ್ಯಾಪ್ತಿಯಲ್ಲೂ ಇದೆ ಗ್ಯಾಂಗ್ ಕಳ್ಳತನ ಮಾಡಿರುವುದು ವಿಚಾರಣೆ ವೇಳೆ ಬಯಲಾಗಿದೆ.

ಕೊನೆಗೂ ಇಬ್ಬರು ಖದೀಮರನ್ನ ಬಂಧಿಸುವಲ್ಲಿ ವಾಡಿ ಠಾಣೆ ಪೊಲೀಸರು ಯಶಸ್ವಿಯಾಗಿದ್ದು, ಬಂಧಿತರಿಂದ 6 ಲಕ್ಷ 06 ಸಾವಿರ ಮೌಲ್ಯದ ವಸ್ತು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಎಸ್ ಪಿ ಅಡ್ಡೂರು ಶ್ರೀನಿವಾಸಲು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

## ಬಾಲ ಭವನ ಮಕ್ಕಳ ಪ್ರತಿಭೆ ಹೊರ ತರುವ ವೇದಿಕೆ: ಕೆ.ವಿ. ಪ್ರಭಾಕರ್



ಮಲ್ಲಮ ನುಡಿ ವಾರ್ತೆ

ಕೊಪ್ಪಳ:ಮಾ.10:ಪ್ರತಿಯೊಂದು ಮಗುವಿನಲ್ಲಿ ತನ್ನದೇ ಆದ ಪ್ರತಿಭೆ ಅಡಗಿದ್ದು, ಬಾಲ ಭವನವು ಮಕ್ಕಳೊಳಗಿನ ಪ್ರತಿಭೆ ಹೊರತರುವ ವೇದಿಕೆಯಾಗಿದೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಗೆಗಾರರಾದ ಕೆ.ವಿ.ಪ್ರಭಾಕರ್ ಹೇಳಿದರು.

ಅವರು ಭಾನುವಾರ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ರಾಜ್ಯ ಬಾಲ ಭವನ ಸೊಸೈಟಿ (ರಿ)ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲ ಭವನ ಸಮಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕೊಪ್ಪಳ ಇವರ ಸಹಯೋಗದೊಂದಿಗೆ ಏರ್ಪಡಿಸಿದ್ದ 2025ರ ಮಕ್ಕಳ ವಿವಿಧ ಸ್ಪರ್ಧೆಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ಕ್ರಿಯಾಶೀಲತೆ, ಸೃಜನಶೀಲತೆ ಇರುವುದು ಮಣ್ಣಿನಲ್ಲೇ ಹೊರತು ಮೊಬೈಲ್‌ನಲ್ಲಿ ಅಲ್ಲ. ಮಗುವಿಗೆ

(2ನೇ ಪುಟ ನೋಡಿ)

## ವಾರದಲ್ಲಿ ಬಗರ್‌ಹುಕ್ಕುಂ ಸಮಿತಿ ರಚನೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಮಾ. 10: ರಾಜ್ಯದಲ್ಲಿ ಬಾಕಿ ಇವರು ಬಗರ್ ಹುಕ್ಕುಂ ಸಮಿತಿಗಳನ್ನು ಇನ್ನೊಂದು ವಾರದಲ್ಲಿ ರಚಿಸುವ ಭರವಸೆಯನ್ನು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನಸಭೆಯಲ್ಲಿಂದು ನೀಡಿದರು. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಡಾ. ಶೈಲೇಂದ್ರ ಬೆಲ್ದಾಳೇ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಇದುವರೆಗೂ 185 ಬಗರ್ ಹುಕ್ಕಂ ಸಮಿತಿಗಳನ್ನು ರಚನೆ ಮಾಡಿದ್ದೇವೆ. 13 ಸಮಿತಿಗಳ ರಚನೆ ಮಾತ್ರ ಬಾಕಿ ಇದೆ ಇವುಗಳನ್ನು

(2ನೇ ಪುಟ ನೋಡಿ)

## ಬಸ್‌ನಲ್ಲಿ 3.14 ಲಕ್ಷ ರೂ. ಚಿನ್ನಾಭರಣ ಕಳವು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮಾ.10:ಮಹಿಳೆಯೊಬ್ಬರು ಬಸ್ ಹತ್ತುವ ವೇಳೆ ಅವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 3,14,500 ರೂ.ಮೌಲ್ಯದ 37 ಗ್ರಾಂ.ಬಂಗಾರದ ಆಭರಣಗಳು ಕಳವಾದ ಘಟನೆ ನಗರದಲ್ಲಿ ನಡೆದಿದೆ. ಇಲ್ಲಿನ ಓಂ ನಗರದ ಶಾಲಿನಿ ಕೇದರನಾಥ ಮಡಿವಾಳ ಎಂಬುವವರೆ ಚಿನ್ನಾಭರಣ ಕಳೆದುಕೊಂಡಿದ್ದಾರೆ.

ಇವರು ಮಕ್ಕಳೊಂದಿಗೆ ಓಂ ನಗರದಿಂದ ಖರ್ಗೆ ಸರ್ಕಲ್ ಹತ್ತಿರವಿರುವ ಬಸ್ ನಿಲ್ದಾಣದಿಂದ ಸೇಡಂಗೆ ಹೋಗುವ ಬಸ್ ಹತ್ತಿದ್ದಾರೆ. ಬಸ್ ತುಂಬಾ ರಶ್ ಇದ್ದುದ್ದರಿಂದ ಬಸ್ ಹತ್ತಲು ಆಗದೆ ಕೆಳಗೆ ಇಳಿದಿದ್ದಾರೆ. ನಂತರ ವ್ಯಾನಿಟಿ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿ ಇರಿಸಿದ್ದ 2,97,500 ರೂ. ಮೌಲ್ಯದ 35 ಗ್ರಾಂ.ಬಂಗಾರದ ತಾಳಿ ಚೈನ, 8,500 ರೂ.

(2ನೇ ಪುಟ ನೋಡಿ)

## ಕಲ್ಯಾಣ ಕರ್ನಾಟಕ ಶಿಕ್ಷಣ ಮತ್ತು ಉದ್ಯೋಗ ಸಂವಿಧಾನದ 371 (ಜೆ) ಸಮರ್ಪಕ ಜಾರಿಗೆ ಅಧಿಕಾರಿಗಳು ಬದ್ಧರಾಗಬೇಕು: ಸಚಿವ ಪ್ರಿಯಾಂಕ್ ಖರ್ಗೆ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಮಾ. 10: ಕಲ್ಯಾಣ ಕರ್ನಾಟಕ ಭಾಗದ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಸಂವಿಧಾನದ ಅನುಚ್ಛೇದ 371 (ಜೆ) ಅಡಿ ಶಿಕ್ಷಣ ಮತ್ತು ಉದ್ಯೋಗ–ಕ್ಕೆ ಕಲ್ಪಿಸಿರುವ ಮೀಸಲಾತಿ ನಿಯಮಗಳ ಸಮರ್ಪಕ ಜಾರಿ ಮತ್ತು ಅನುಷ್ಠಾನಕ್ಕೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹೆಚ್ಚು ಆಸಕ್ತಿ ವಹಿಸಬೇಕು. ಈ ವಿಷಯದಲ್ಲಿ ಅನಾದರ, ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ವಹಿಸಲಾಗುವುದು. ಪ್ರಗತಿ ಪರಿಶೀಲನಾ ಸಭೆಗಳಿಗೆ ಇಲಾಖಾ ಮುಖ್ಯಸ್ಥರು ಹಾಗೂ ಕಾರ್ಯದರ್ಶಿಗಳಿಗಿಂತ ಮೇಲ್ಪಟ್ಟ ಜವಾಬ್ದಾರಿಯುತ ಅಧಿಕಾರಿಗಳು ಖುದ್ದಾಗಿ ಹಾಜರಾಗಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು 371 (ಜೆ) ಅಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ಮತ್ತು ಸಚಿವ ಸಂಪುಟ ಉಪಸಮಿತಿಯ ವರದಿಗಳ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಭಿವೃದ್ಧಿಯಲ್ಲಿ ತಾರತಮ್ಯ ಹೋಗಲಾಡಿಸುವ ಮಹತ್ವಾಕಾಂಕ್ಷೆಯೊಂದಿಗೆ ಸಂವಿಧಾನದ 371 (ಜೆ) ಅನುಚ್ಛೇದಕ್ಕೆ ತಿದ್ದುಪಡಿ ತಂದು ಕಲ್ಪಿಸಲಾಗಿರುವ ಸಂವಿಧಾನಾತ್ಮಕ ಹಕ್ಕು ಮತ್ತು ಸೌಕರ್ಯಗಳ ಜಾರಿಗೆ ಅಧಿಕಾರಿಗಳು ಅನಾಸಕ್ತಿ ತೋರುತ್ತಿರುವುದನ್ನು ಗಮನಿಸಲಾಗುತ್ತಿದೆ. ಅನೇಕ ಬಾರಿ ನೆನಪೋಲೆ, ಸುತ್ತೋಲೆ ಕಳುಹಿಸಿದರೂ ಕೆಲ ಇಲಾಖೆಗಳ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸದೇ ನಿರ್ಲಕ್ಷಿಸುತ್ತಿರುವುದನ್ನು ಸಚಿವ ಸಂಪುಟ ಉಪಸಮಿತಿ ಗಂಭೀರವಾಗಿ ಪರಿಗಣಿಸಿದೆ. ಇನ್ನು ಮುಂದೆ ಪ್ರತಿ 15 ದಿನಗಳಿಗೊಮ್ಮೆ ಪ್ರಗತಿ ಪರಿಶೀಲನೆ ಸಭೆಗಳನ್ನು ಆಯ್ದ ಇಲಾಖೆಗಳೊಂದಿಗೆ ನಡೆಸಲಾಗುವುದು. ಸಭೆಗೆ ಕಡ್ಡಾಯವಾಗಿ ಸರ್ಕಾರದ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರ ಹಂತದ ಅಧಿಕಾರಿಗಳು ಭಾಗವಹಿಸಬೇಕು. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುವ ಪೊಲೀಸ್ ಮತ್ತು ಇತರೆ ಇಲಾಖೆಗಳು ಕೂಡಲೇ ನೇಮಕಾತಿ ಆದೇಶಗಳನ್ನು ಅಭ್ಯರ್ಥಿಗಳಿಗೆ ನೀಡಿ ಸೇವೆಗೆ ಹಾಜರುಪಡಿಸಿಕೊಳ್ಳಬೇಕು.

(2ನೇ ಪುಟ ನೋಡಿ)

## ಸಾರ್ವಜನಿಕರಿಗೆ ಸಂಚರಿಸಲು ಸುಗಮ ರಸ್ತೆ ನೀಡಲು ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಮಾ.10: ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ಫುಟ್ ಪಾತ್ ಮೇಲೆ ಅಂಗಡಿಗಳಿದ್ದರೆ ಮತ್ತು ಪುರಸಭೆ ಸ್ಥಳದಲ್ಲಿ ಅನಧಿಕೃತವಾಗಿ ಶೇಡಗಳನ್ನು ನಿರ್ಮಿಸಿದರೆ ಕೂಡಲೇ ತೆರವುಗೊಳಿಸಬೇಕೆಂದು 2024 ಜುಲೈ 4ಕ್ಕೆ ಪಟ್ಟಣದ ಪುರಸಭೆ ಸಭಾಂಗಣದಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮದಲ್ಲಿ ಆಗಿನ ಜಿಲ್ಲಾಧಿಕಾರಿಗಳಾದ ಡಾ. ಗೋವಿಂದ ರೆಡ್ಡಿ ಸೂಚಿಸಿದರು. ಅವರ ನಿರ್ದೇಶನದಂತೆ ಅಧಿಕಾರಿಗಳು ತೆರವುಗೊಳಿಸಿದರು. ಆದರೆ ಮತ್ತೆ ಯಥಾ ಸ್ಥಿತಿಯಾಗಿ ಫುಟ್ ಪಾತ ಮೇಲೆ ಸ್ಕ್ರಾಪ್ ಅಂಗಡಿ, ಇಂಟ್, ಅನಧಿಕೃತವಾಗಿ ಮರಳು ಮಾರಾಟ ಮಾಡಿ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತುಕೊಂಡಿದ್ದಾರೆ ಎಂದು ವಾಹನ ಸವಾರರು ತಿಳಿಸಿದ್ದಾರೆ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ತಿಳಿಸಿದ್ದಾರೆ.

ಒಂದನೇ ಪುಟದಿಂದ

## ಅಧಿಕಾರಿಗಳು ಬದ್ಧರಾಗಬೇಕು: ಸಚಿವ ಪ್ರಿಯಾಂಕ್ ಖರ್ಗೆ

ಸ್ಥಳೀಯ ಮತ್ತು ಉಳಿಕೆ ಮಾತೃವೃಂದದ ಸಂಯುಕ್ತ ಜೇಷ್ಠತಾ ಪಟ್ಟಿಯನ್ನು ಎಲ್ಲಾ ಇಲಾಖೆಗಳು ಹೊರಡಿಸಬೇಕು. ಈ ವಿಷಯದಲ್ಲಿ ನ್ಯಾಯಾಲಯದ ಆದೇಶ ಸ್ಪಷ್ಟವಾಗಿದೆ. ಮಾಸಾಂತ್ಯದೊಳಗೆ ಆದೇಶ ಹೊರಡಿಸಿ ಗೊಂದಲ ನಿವಾರಿಸಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಸೂಚಿಸಿದರು. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದ ಹುದ್ದೆಗಳ ನೇಮಕಾತಿ ಹಾಗೂ ಮುಂಬಡ್ತಿಗೆ ಸಂಬಂಧಿಸಿದಂತೆ 2023 ರ ಸುತ್ತೋಲೆ ಮಾತ್ರ ಜಾರಿಯಲ್ಲಿದೆ. ಅದಕ್ಕೂ ಹಿಂದಿನ ಎಲ್ಲಾ ಹಳೆಯ ಆದೇಶಗಳನ್ನು ಹಿಂಪಡೆಯಲಾಗಿದೆ. ಅನಗತ್ಯವಾಗಿ ಸ್ಪಷ್ಟೀಕರಣ, ಮಾರ್ಗದರ್ಶನ ಕೋರಿ ಪತ್ರ ಬರೆದು ಕಾಲಹರಣ ಮಾಡಬಾರದು. ಶಾಲಾಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯೊಂದರಲ್ಲಿಯೇ ನೇರ ನೇಮಕಾತಿಗೆ ಸೇರಿದ ಸುಮಾರು 12 ಸಾವಿರ ಹಾಗೂ ಮುಂಬಡ್ತಿಗೆ ಮೀಸಲಿಟ್ಟ ಸುಮಾರು 9 ಸಾವಿರ ಹುದ್ದೆಗಳು ಖಾಲಿ ಇವೆ. ಈಗಾಗಲೇ 5267 ಶಿಕ್ಷಕರ ನೇಮಕಾತಿಗೆ ಕ್ರಮವಹಿಸಲಾಗುತ್ತಿದೆ. ಉಳಿದ 6 ಸಾವಿರ ಹುದ್ದೆಗಳಿಗೂ ನೇರ ನೇಮಕಾತಿ ಮಾಡಿಕೊಳ್ಳಬೇಕು. ಯಾವುದೇ ಇಲಾಖೆಯು ಕಲ್ಯಾಣ ಕರ್ನಾಟಕ ಭಾಗದ ಖಾಲಿ ಹುದ್ದೆಗಳ ನೇಮಕಾತಿಗೆ ಮುನ್ನ ಆರ್ಥಿಕ ಇಲಾಖೆಯ ಸಹಮತಿ ಪಡೆಯುವ ಅಗತ್ಯವಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶವೂ ಕೂಡ ಇದೆ. ಶಿಕ್ಷಣ, ಆರೋಗ್ಯ, ಪೊಲೀಸ್, ಸಾರಿಗೆ, ಇಂಧನ ಸೇರಿದಂತೆ ಅಧಿಕ ಸಂಖ್ಯೆಯಲ್ಲಿ ಖಾಲಿ ಹುದ್ದೆಗಳನ್ನು ಹೊಂದಿರುವ ಇಲಾಖೆಗಳು ನೇಮಕಾತಿಗೆ ತ್ವರಿತ ಕ್ರಮ ವಹಿಸಬೇಕು. ಕಲ್ಯಾಣ ಕರ್ನಾಟಕ ಭಾಗದ ನೇಮಕಾತಿ, ಮುಂಬಡ್ತಿಗೆ ಸಂಬಂಧಿಸಿದ ನ್ಯಾಯಾಲಯ ಪ್ರಕರಣಗಳು ತ್ವರಿತ ವಿಲೇವಾರಿಗೆ ಕಾನೂನು ಸಚಿವರು ಹಾಗೂ ಅಡ್ವೋಕೇಟ್ ಜನರಲ್ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಲಾಗುವುದು ಎಂದರು. ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಸರ್ಕಾರವು ಕಲ್ಯಾಣ ಕರ್ನಾಟಕ ಭಾಗಕ್ಕೆ ಹೊಸ ಇಂಜಿನಿಯರಿಂಗ್ ಕಾಲೇಜುಗಳು, ವಸತಿ ಶಾಲೆ, ಹಾಸ್ಟೆಲ್‌ಗಳನ್ನು ಮಂಜೂರು ಮಾಡಿದೆ. ಅದಕ್ಕನುಗುಣವಾಗಿ ಹುದ್ದೆಗಳನ್ನು ಸೃಜಿಸಿ ನೇಮಕಾತಿಗೆ ಕ್ರಮವಹಿಸಬೇಕು. ಕಾಲಮಿತಿಯೊಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಅಗತ್ಯವಿರುವ ಎಲ್ಲಾ ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ಕ್ರಮವಹಿಸಬೇಕು. 371 (ಜೆ) ಅಡಿ ಹೊರಡಿಸಿರುವ ಆದೇಶಗಳ ಜಾರಿ ಮತ್ತು ಸಚಿವ ಸಂಪುಟ ಉಪಸಮಿತಿ ಸಭೆಗೆ ಗೈರು ಹಾಜರಾಗುವ ಇಲಾಖೆಗಳ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದರು.ಪೌರಾಡಳಿತ ಮತ್ತು ಹಜ್ ಸಚಿವ ರಹೀಂಖಾನ್ ಸೇರಿದಂತೆ ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಧಿಕಾರಿಗಳು, ಸರ್ಕಾರದ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು ಮತ್ತಿತರರು ಸಭೆಯಲ್ಲಿ ಹಾಜರಿದ್ದರು.

## ಪ್ರತಿಭೆ ಹೊರ ತರುವ ವೇದಿಕೆ: ಕೆ.ವಿ. ಪ್ರಭಾಕರ್

ಊಟ ಮಾಡಿಸುವಾಗಲೂ ತಾಯಂದಿರು ಮೊಬೈಲ್‌ನಲ್ಲಿ ತೋರಿಸುವುದರಿಂದ ಬೆಳೆಯುತ್ತಾ ಬೆಳೆಯುತ್ತಾ ಮಕ್ಕಳು ಮೊಬೈಲ್‌ಗೇ ಅಂಟಿಕೊಳ್ಳುತ್ತಾರೆ. ಇದು ಆರೋಗ್ಯಕರ ಬೆಳವಣಿಗೆಯಲ್ಲ. ಮಕ್ಕಳು ಸ್ವತಂತ್ರವಾಗಿ ಆಲೋಚಿಸುವುದನ್ನು ಕಲಿತಾಗ ಅವರಲ್ಲಿ ಸೃಜನಶೀಲತೆ ಅರಳುತ್ತದೆ. ಸ್ವಂತಕ್ಕೆ ಆಟದ ಸಾಮಾನುಗಳನ್ನು ಸೃಷ್ಟಿಸಿಕೊಳ್ಳುವುದು ಮಕ್ಕಳ ಮೊದಲ ಸೃಜನಶೀಲ ಕ್ರಿಯೆಯಾಗಿದ್ದು, ಪೋಷಕರು ಮಕ್ಕಳಲ್ಲಿ ಸ್ವಂತಿಕೆ ಬೆಳೆಸಲು ಸಹಕರಿಸಬೇಕು. ಮನೆಯಿಂದ ಹೊರಗೆ ಮಕ್ಕಳು ಆಟಕ್ಕೆ ಇಳಿದಾಗ ಕೈಗೆ ಸಿಕ್ಕ ಸಾಮಾಗ್ರಿಗಳೇ ಅವರ ಆಟದ ವಸ್ತುಗಳಾಗುತ್ತವೆ. ಕೇವಲ ನಾಲ್ಕು ಗೋಡೆ ಮಧ್ಯೆ ಕುಳ್ಳಿರಿಸಿ ಪ್ಲಾಸ್ಟಿಕ್ ಆಟದ ವಸ್ತುಗಳು, ಮೊಬೈಲ್‌ಗಳ ಗೀಳು ಹಚ್ಚಿಕೊಳ್ಳುವುದರಿಂದ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಕುಂಟಿತಗೊಳ್ಳುತ್ತದೆ. ನಾವೆಲ್ಲಾ ಆಡುವಾಗ ಪ್ಲಾಸ್ಟಿಕ್ ವಸ್ತುಗಳ ಹಾವಳಿಯಾಗಲಿ, ಮೊಬೈಲ್‌ಗಳ ಚಾಳಿಯಾಗಲಿ ಇರಲಿಲ್ಲ. ಹೀಗಾಗಿ ನಮಗೆ ಪುಸ್ತಕಗಳು, ಮಣ್ಣಿನ ವಸ್ತುಗಳು ಹೆಚ್ಚು ಹತ್ತಿರವಾದವು. ಕೆಳಗೆ ಕುಳಿತಿರುವ ಮಕ್ಕಳುಗಳು ಮುಂದಿನ ದಿನಗಳಲ್ಲಿ ಇಲ್ಲಿ ಮೇಲೆ ಕೂರುವಂತಾಗಬೇಕು ಎಂದರೆ ಪುಸ್ತಕಗಳ ಒಡನಾಟ ಮುಖ್ಯ. ಇರದಿಂದ ಓದು, ಬರಹದ ಜೊತೆಗೆ ಗ್ರಹಿಕೆಯೂ ಉತ್ತಮಗೊಳ್ಳುತ್ತದೆ, ಜೊತೆಗೆ ಗ್ರಹಿಕೆಯೂ ವೃದ್ಧಿಯಾಗುತ್ತದೆ ಎಂದರು. ಮಕ್ಕಳಿಗೆ ಪೋಷಕರೇ ಪ್ರಥಮ ಗುರು. ಆದ್ದರಿಂದ ಮಕ್ಕಳು ಪೋಷಕರ ಮಾತನ್ನು ಕೇಳಿಸಿಕೊಳ್ಳಬೇಕು. ಮಕ್ಕಳು ದೊಡ್ಡವರಾದ ಮೇಲೆ ಪೋಷಕರನ್ನು ಅಷ್ಟೇ ಜವಾಬ್ದಾರಿಯಿಂದ, ಪ್ರೀತಿಯಿಂದ ನೋಡಿಕೊಳ್ಳಬೇಕು. ಆಟೋಚಾಲಕರ ಮಕ್ಕಳು, ಪಂಕ್ಚರ್ ಅಂಗಡಿಯವರ ಮಕ್ಕಳೆಲ್ಲಾ ಈಗ ಉನ್ನತ ಶಿಕ್ಷಣದಲ್ಲಿ ಚಿನ್ನದ ಪದಕ ಪಡೆಯುತ್ತಿದ್ದಾರೆ. ತಂದೆ ತಾಯಿಗೆ ಇದಕ್ಕಿಂತ ಖುಷಿಯ ಸಂಗತಿ ಬೇರೆ ಇಲ್ಲ. ಆದ್ದರಿಂದ ಮಕ್ಕಳು ಪೋಷಕರ ಶ್ರಮ, ಪ್ರೀತಿ, ಕಾಳಜಿಯನ್ನು ನೆನಪಿಟ್ಟುಕೊಳ್ಳಬೇಕು ಎಂದು ಕರೆ ನೀಡಿ, ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯುವಂತೆ ಮಕ್ಕಳಿಗೆ ಶುಭ ಹಾರೈಸಿದರು. ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಮಾತನಾಡಿ, ಮಕ್ಕಳನ್ನೆ ಆಸ್ತಿಯನ್ನಾಗಿ ಮಾಡುವ ಮನೋಭಾವನ್ನು ಇಟ್ಟುಕೊಂಡಾಗ ಮಾತ್ರ ಮಕ್ಕಳ ಭವಿಷ್ಯ ರೂಪಿಸಲು ಸಾಧ್ಯವಾಗಿದೆ. ಎಲ್ಲಾ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ಮಕ್ಕಳ ಶಿಕ್ಷಣದಡಿ ಕೇವಲ ಶಿಕ್ಷಕರ ಪಾತ್ರ ಅಷ್ಟೇ ಅಲ್ಲದೇ ಪೋಷಕರ ಜವಾಬ್ದಾರಿಯೂ ಹೆಚ್ಚಾಗಿದೆ. ಮಕ್ಕಳಿಗೆ ಮೋಬೈಲ್‌ನಿಂದ ಆದಷ್ಟು ದೂರವಿಡಬೇಕು. ಮಕ್ಕಳಲ್ಲಿ ಅನೇಕ ಪ್ರತಿಭೆಗಳು ಅಡಗಿರುತ್ತವೆ. ಕೆಲ ಮಕ್ಕಳು ಅವಕಾಶ ವಂಚಿತರಾಗಿ ತಮ್ಮ ಪ್ರತಿಭೆಗಳನ್ನು ಕಳೆದುಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಬಾಲ ಭವನವು ಮಕ್ಕಳ ಪ್ರತಿಭೆಗಳ ಪ್ರದರ್ಶನಕ್ಕೆ ಅವಕಾಶಗಳನ್ನು ನೀಡುತ್ತಿದೆ. ನಮ್ಮ ಸರ್ಕಾರವು ಬಜೆಟ್‌ನಲ್ಲಿ ಕಲ್ಯಾಣ ಕರ್ನಾಟಕ ಭಾಗಕ್ಕೆ 5 ಸಾವಿರ ಕೋಟಿ ರೂ.ಗಳನ್ನು ನೀಡಿದ್ದು, ಇದರಲ್ಲಿ ಶೇ.25ರಷ್ಟನ್ನು ಶಿಕ್ಷಣಕ್ಕಾಗಿ ಮೀಸಲಿರಿಸುವ ಮೂಲಕ ಶಿಕ್ಷಣಕ್ಕೆ ಹೆಚ್ಚು ಪ್ರಮುಖ್ಯತೆ ನೀಡಿದೆ. ಮಕ್ಕಳನ್ನು ಭವಿಷ್ಯದ ನಾಗರಿಕರನ್ನಾಗಿ ಮಾಡುವ ಜಬಾವ್ದಾರಿ ಎಲ್ಲರ ಮೇಲಿದ್ದು, ಇದಕ್ಕಾಗಿ ಶ್ರಮಿಸೋಣ ಎಂದು ಹೇಳಿದರು.

ರಾಜ್ಯ ಬಾಲ ಭವನ ಸೊಸೈಟಿಯ ಅಧ್ಯಕ್ಷರಾದ ಬಿ.ಆರ್.ನಾಯ್ಡು ಅವರು ಮಾತನಾಡಿ, ಮಕ್ಕಳಿಗೆ ಓದುವ ಕುರಿತು ಒತ್ತಡ ನೀಡದೇ, ಸೃಜನಾತ್ಮಕ ಕಲೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸದರೆ, ಅವರಿಗೆ ಓದುವುದರಲ್ಲಿ ಆಸಕ್ತಿ ತಾನಾಗಿಯೇ ಬರುತ್ತದೆ. ಮಕ್ಕಳನ್ನು ವಿವಿಧ ಸ್ಪರ್ಧೆ, ಕಲೆ, ಹಾಗೂ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬೇಕು. ಈ ಹಿನ್ನೆಲೆಯಲ್ಲಿ ಬಾಲ ಭವನವು ಯಾವಾಗಲೂ ಮಕ್ಕಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸದಾ ಸಿದ್ಧವಿದೆ ಎಂದರು. ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಅವರು ಮಾತನಾಡಿ, ಸಿಸಿಗಳನ್ನು ಯಾವ ರಿತಿ ಬೆಳೆಸುತ್ತೇವೆ, ಅದೇ ರೀತಿ, ಮಕ್ಕಳನ್ನು ಅಂಗನವಾಡಿ ಹಂತದಲ್ಲಿಯೇ ಆಡ ಹಾಗೂ ಇತರೆ ಕಲಿಕೆ ನೀಡುವುದರ ಮೂಲಕ ಬೆಳೆಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಸುಸಜ್ಜಿದ ವ್ಯವಸ್ಥೆಗಳನ್ನು ಸರ್ಕಾರವು ಹಮ್ಮಿಕೊಳ್ಳುತ್ತಿದೆ. ಮಕ್ಕಳಲ್ಲಿನ ಪ್ರತಿಭೆಗಳನ್ನು ಗುರುತಿಸಲು ಪ್ರೋತ್ಸಾಹಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದು ಹೇಳಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, 2025–26ನೇ ಸಾಲಿನ ನಮ್ಮ ರಾಜ್ಯದ ಬಜೆಟ್‌ನಲ್ಲಿ ರಾಜ್ಯ ಸರ್ಕಾರವು 94 ಸಾವಿರ ಕೋಟಿಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ನೀಡಿದೆ. ಕಳೆದ ಬಾರಿಯ ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಕಡಿಮೆಯಾಗಿದ್ದು, ಇದಕ್ಕೆ ವಿಚಾರಿಸಿದಾಗ, ಬಹಳಷ್ಟು ಮಕ್ಕಳು ಶಾಲೆಗೆ ಬಾರದೇ ಇರುವುದು ಕಂಡುಬಂದಿದೆ. ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವಂತಹ ಕೆಲಸವಾಗುತ್ತಿದ್ದು, ಇದಕ್ಕೆ ಪೋಷಕರು ಸಹಕರಿಸುವುದರ ಜೊತೆಗೆ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಬೇಕು. ಜಿಲ್ಲೆಯಲ್ಲಿ ಯಾವುದೇ ರೀತಿಯ ಬಾಲ್ಯವಿವಾಹಗಳು ನಡೆಯಬಾರದು. ಇತ್ತೀಚೆಗೆ ಮೂಡನಂಬಿಕೆಯ ಕಾರಣ ಚಿಕ್ಕ ಮಗುವಿಗೆ ಅಗರಬತ್ತಿಯಿಂದ ಸುಟ್ಟಿರುವುದರಿಂದ ಆ ಮಗು ಸಾವನಪ್ಪಿರುವುದು ಕಂಡುಬಂದಿದೆ. ಇಂತಹ ಪ್ರಕರಣಗಳು ಆಗದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದರು. ಸ್ವಚ್ಛ ಭಾರತ್ ಯೋಜನೆಯಡಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಳ್ಳಬೇಕು. ಯಾವುದೇ ರೀತಿಯ ಬಯಲು ಶೌಚಕ್ಕೆ ಅವಕಾಶ ನೀಡಬಾರದು. ಈ ಬಗ್ಗೆ ಮಕ್ಕಳು ತಮ್ಮ ಮನೆಗಳಲ್ಲಿ ಮತ್ತು ಅಕ್ಕಪಕ್ಕದವರಿಗೆ ಶೌಚಾಲಯ ನಿರ್ಮಿಸಲು ತಿಳುವಳಿಕೆ ನೀಡಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಗಣ್ಯರಾದ ಗಿರೀಶ್ ಕೋಟೆ, ನಟರಾಜ್, ಲಕ್ಷ್ಮೀ ನಾರಾಯಣ, ಗೂಳಪ್ಪ ಹಲಗೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಹಾಗೂ ಕೊಪ್ಪಳ ಜಿಲ್ಲಾ ಬಾಲಭವನ ಸಮಿತಿ ಕಾರ್ಯದರ್ಶಿ ಪರಶುರಾಮ ವಾಯ್. ಶೆಟ್ಟೆಪ್ಪನವರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ನಿರೂಪಣಾಧಿಕಾರಿ ಗಂಗಪ್ಪ ಸೇರಿದಂತೆ ವಿವಿಧ ತಾಲ್ಲೂಕಿಗಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮತ್ತು ಸಂಗೀತ ಶಿಕ್ಷಕರು, ಶಾಲಾ ಮಕ್ಕಳು ಉಪಸ್ಥಿತರಿದ್ದರು.

## ಚಿನ್ನಾಭರಣ ಕಳವು

ಮೌಲ್ಯದ 1 ಗ್ರಾಂ.ಬಂಗಾರದ ಸರಮ 5,800 ರೂ.ಮೌಲ್ಯದ 1 ಗ್ರಾಂ.ಬಂಗಾರದ 4 ಗುಂಡುಗಳು ಸೇರಿ 3.14 ಲಕ್ಷ ರೂ. ಮೌಲ್ಯದ 37 ಗ್ರಾಂ.ಚಿನ್ನಾಭರಣ ಕಳವಾಗಿರುವುದು ಗಮನಕ್ಕೆ ಬಂದಿದೆ.ಈ ಸಂಬಂಧ ಅವರು ಎಂ.ಬಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

## ಜಿಲ್ಲಾಡಳಿತದಿಂದ ವಿಶೇಷ ಮಹಿಳಾ ದಿನಾಚರಣೆ

ಪರಿಗಣಿಸಲಾಗುತ್ತದೆಯಾದರೂ ಅವರ ಕೌಟುಂಬಿಕ ಮನೆಗೆಲಸ ಲೆಕ್ಕಕ್ಕೆ ಬರುವುದಿಲ್ಲ. ಅಡುಗೆ, ಮನೆಗೆಲಸ ಮಾಡಿ ಕಚೇರಿಗೆ ಬರುವ ಮಹಿಳೆಯರ ಸೇವೆ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮಹಿಳೆಯರು ಮನೆಯಲ್ಲಿ ಗಂಡು, ಹೆಣ್ಣು ಮಕ್ಕಳಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡದೆ ಸರಿಸಮಾನವಾಗಿ ಪರಿಗಣಿಸಿದರೆ ಮುಂಬರುವ ದಿನಮಾನಗಳಲ್ಲಿ ಪ್ರತಿ ಕ್ಷೇತ್ರದಲ್ಲಿ ಶೇ.50 ರಷ್ಟು ಮಹಿಳಾ ಪ್ರತಿನಿಧಿಗಳನ್ನು ಕಾಣಬಹುದಾಗಿದೆಯೆಂದು ತಿಳಿಸಿದರು.

ಇಡೀ ರಂಗಮಂದಿರ ತುಂಬೆಲ್ಲ ಮಹಿಳೆಯರೇ ಭಾಗಿಯಾಗಿದ್ದು ವಿಶೇಷವಾಗಿತ್ತು. ಮುಕ್ತವಾಗಿ ಚರ್ಚೆಗಳು ನಡೆದವು. ಮಹಿಳಾ ದಿನಾಚರಣೆ ನಿಮಿತ್ತ ಜಿಲ್ಲಾಧಿಕಾರಿಗಳು ಕೇಕ್ ಕಟ್ ಮಾಡಿದರು.

ಈ ಕಾರ್ಯಕ್ರಮದಲ್ಲಿ ಹಂಸಾ ಗಿರೀಶ ಬದೋಲೆ, ಶೈನಿ ಪ್ರದೀಪ ಗುಂಟಿ, ಗೀತಾ ಶಿವಕುಮಾರ ಶೀಲವಂತ, ಬೀದರ ವಿಶ್ವವಿದ್ಯಾಲಯದ ಕುಲಸಚಿವರಾದ ಸುರೇಖಾ, ಜಿಲ್ಲಾ ಸಹಕಾರ ಸಂಘಗಳ ಉಪನಿರ್ದೇಶಕರಾದ ಮಂಜುಳಾ ಸಿ.ಎಸ್. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಶಿಂಧು ಎಸ್. ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರಾದ ಸುರೇಖಾ ಮುನ್ನಳ್ಳಿ, ಹುಮನಾಬಾದ ತಹಸೀಲ್ದಾರ ಅಂಜುಮ, ಹುಮನಾಬಾದ ಕಾರ್ಯನಿರ್ವಾಹಕ ಅಧಿಕಾರಿಗಳಾದ ದೀಪಿಕಾ ನಾಯರ, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳಾದ ಸುವರ್ಣಾ, ಹಿ.ವ.ಕಲ್ಯಾಣ ಇಲಾಖೆಯ ಸುಜಾತಾ, ಮೀನುಗಾರಿಕೆ ಇಲಾಖೆಯ ಜಾನವಿ, ಅಂಚೆ ಇಲಾಖೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಗಲಾ ಭಾಗವತ, ಎಡಿಎಲ್‌ಆರ್ ಗಳಾದ ಶ್ವೇತಾ, ರಾಜೇಶ್ವರಿ, ಸಾಹಿತಿಗಳಾದ ಪಾರ್ವತಿ ಸೋನಾರೆ, ಸ್ತ್ರೀ ರೋಗ ತಜ್ಞರಾದ ಉಮಾ ದೇಶಮುಖ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಮಹಿಳಾ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಯ ಮಹಿಳ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಬಗರ್‌ಹುಕ್ಕುಂ ಸಮಿತಿ ರಚನೆ

ಇನ್ನೊಂದು ವಾರದಲ್ಲಿ ರಚನೆ ಮಾಡುತ್ತೇವೆ ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅತಿ ಹೆಚ್ಚು ಬಗರ್ ಹುಕ್ಕುಂ ಸಮಿತಿಗಳನ್ನು ರಚಿಸಲಾಗಿದೆ .ಈ ಹಿಂದೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಬಗರ್ ಹುಕ್ಕಂ ಸಮಿತಿಗಳನ್ನು ರಚಿಸಿರಲಿಲ್ಲ ಎಂದರು.ಬೀದರ್‌ನ 7 ವಿಧಾನಸಭಾ ಕ್ಷೇತ್ರಗಳಲ್ಲೂ ಸಮಿತಿ ರಚನೆಯಾಗಿಲ್ಲ. ಇಲ್ಲಿ ಇನ್ನೊಂದು ವಾರದಲ್ಲಿ ಸಮಿತಿ ರಚನೆ ಮಾಡುತ್ತೇವೆ ಎಂದರು.

ಬಗರ್ ಹುಕ್ಕುಂ ಸಮಿತಿಗೆ ಸಂಬಂಧಿಸಿದಂತೆ ಸುತ್ತೋಲನೆಗಳನ್ನು ಸರ್ಕಾರ ಹೊರಡಿಸಿದೆ. ಈ ಸುತ್ತೋಲೆಯಲ್ಲಿ ಸಮಗ್ರ ಹಾಗೂ ಸ್ಪಷ್ಟವಾದ ಮಾಹಿತಿಗಳಿವೆ. ಆದರೆ ಬಗರ್‌ಹುಕ್ಂ ಸಮಿತಿ ಕೆಲಸ ಮಾಡುತ್ತದೆ ಎಂದು ಹೇಳಿದರು.

ಬಗರ್‌ಹುಕ್ಕುಂ ಸಮಿತಿ ಅರ್ಜಿ ಹಾಕಿ ಅರ್ಜಿ ವಿಲೇವಾರಿಯಾಗದೆ ಇದ್ದರೆ ಅಂತಹವರನ್ನು ಒಕ್ಕಲೆಬ್ಬಿಸುವಂತಿಲ್ಲ. ಅವರ ಬೆಳೆ ನಾಶ ಮಾಡುವಂತಿಲ್ಲ ಅಧಿಕಾರಿಗಳು ಈ ರೀತಿ ನಡೆಸಿಕೊಂಡರೆ ಮಾಹಿತಿ ಕೊಡಿ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದು ಸಚಿವರು ಹೇಳಿದರು.

## ಒತ್ತಡ ಮುಕ್ತ ಜೀವನಕ್ಕೆ ಕ್ರೀಡೆ ಸಹಕಾರಿ:ಡಿಸಿ ಜಾನಕಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.10– ಮಹಿಳೆಯ ಕ್ರೀಡಾ ಮನೋಭಾವ ಕೇವಲ ಕ್ರೀಡಾಕೂಟದ ಒಂದು ದಿನಕ್ಕೆ ಸೀಮಿತವಾಗದೆ, ಕ್ರೀಡಾ ಚಟುವಟಿಕೆ ನಿತ್ಯ ಬದುಕಿನ ಭಾಗವಾಗಬೇಕು ಎಂದು ಜಿಲ್ಲಾಧಿಕಾರಿ ಕೆ.ಎಂ. ಜಾನಕಿ ಹೇಳಿದರು. ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಸೋಮವಾರ ಜಿಲ್ಲಾ ಕ್ರೀಡಾಂಗಣದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಮಹಿಳಾ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕ್ರೀಡೆಯಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಲಾಭವಾಗುತ್ತದೆ. ಮಹಿಳೆಯರ ಕೆಲಸಗಳ ಒತ್ತಡ ಮುಕ್ತ ಜೀವನಕ್ಕೆ ಇದು ಸಹಕಾರಿ. ಎಲ್ಲ ವಯಸ್ಸಿನ ಮಹಿಳೆಯರು ತಮ್ಮ ಆಸಕ್ತದಾಯಕ ಕ್ರೀಡೆಯಲ್ಲಿ ಭಾಗವಹಿಸಿ ಇತರರಿಗೆ ಪ್ರೇರಣೆಯಾಗಬೇಕು ಎಂದು ಹೇಳಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ್ ಕುರೇರ ಕ್ರೀಡಾ ಜ್ಯೋತಿ ಬೆಳಗಿಸಿ ಮಾತನಾಡಿ, ಮಹಿಳೆಯರು ದೈಹಿಕ ಚಟುವಟಿಕೆಗಳನ್ನು ಕೇವಲ ಕ್ರೀಡಾಕೂಟಗಳಿಗೆ ಸೀಮಿತಗೊಳಿಸದೆ, ಪ್ರತಿದಿನ ವ್ಯಾಯಾಮ, ವಾಕಿಂಗ್ ಮುಂತಾದವುಗಳ ಮೂಲಕ ಸದೃಢ ಜೀವನ ಶೈಲಿ ರೂಪಿಸಿಕೊಳ್ಳಬೇಕು. ಇದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಉತ್ತಮವಾಗಿರುತ್ತದೆ. ಎಲ್ಲಾ ಮಹಿಳೆಯರು ತಮ್ಮ ದೈನಂದಿನ ಕಾರ್ಯಗಳಿಂದ ಸ್ವಲ್ಪ ಸಮಯವನ್ನು ಕ್ರೀಡೆಗೆ ಮೀಸಲಿಟ್ಟರೆ ಉತ್ತಮ ಸಾಧನೆ ಮಾಡಬಹುದು ಎಂದರು.

ಕ್ರೀಡಾ ಪ್ರತಿಜ್ಞಾವಿಧಿಯನ್ನು ಗೋಪವ್ವ ಖೋಡಕಿ ಬೋಧಿಸಿದರು. ಕ್ರೀಡಾಕೂಟದಲ್ಲಿ 18 ರಿಂದ 35 ವರ್ಷ ವಯಸ್ಸಿನ ಮತ್ತು ಮುಕ್ತವಯಸ್ಸಿನ ಮಹಿಳೆಯರಿಗೆ ಗುಂಪು ಹಾಗೂ ವೈಯಕ್ತಿಕ ಸ್ಪರ್ಧೆಗಳನ್ನು ನಡೆಸಲಾಯಿತು. ವಿಜೇತರಿಗೆ ಪ್ರಶಸ್ತಿ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಪ್ರಭಾಕರ ಕವಿತಾಳ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಿಂದ ಬಂದಿದ್ದ ಮಹಿಳಾ ಸ್ಪರ್ಧಾಳುಗಳು ಉಪಸ್ಥಿತರಿದ್ದರು.

## ಬಹು ಚರ್ಚಿತ "ಸತ್ಯ ಶರಣರು ಸತ್ಯ ಶೋಧ" ಸಂಶೋಧನಾ ಗ್ರಂಥ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ ಬೀದರ. ಮಾ. 10 : ಜಸ್ಟೀಸ್ ಸನ್ಮಾನ್ಯ ಶ್ರೀ ಶಿವರಾಜ ಪಾಟೀಲ ಭಾರತ ದೇಶದ ಉಚ್ಚ ನ್ಯಾಯಾಲಯ ಗೌರವಾನ್ವಿತ ವಿಶ್ರಾಂತ ನ್ಯಾಯಾಧೀಶರು ಅಮೃತ ಹಸ್ತದಿಂದ ಬಿಡುಗಡೆಗೊಂಡಿತ್ತು. ಬಿಡುಗಡೆ ಗೊಳಿಸಿದ ಮೇಲೆ ಮಾತನಾಡಿದ ಜಸ್ಟೀಸ್ ಶಿವರಾಜ ಪಾಟೀಲರು, ಈ ಸಂಶೋಧನಾ ಗ್ರಂಥ ಪೂಜ್ಯ ಬೆಲ್ದಾಳ ಶರಣರು ಒಂಬತ್ತು ವರ್ಷಗಳ ಶ್ರಮ ವಹಿಸಿದ ತಪಶ್ಚರ್ಯ ಗ್ರಂಥ, ಇಂತಹ ಗ್ರಂಥ ಎಲ್ಲರಿಗೂ ಬರೆಯಲು ಆಗಲ್ಲ ಇದಕ್ಕೆ ದೈವೀ ಶಕ್ತಿ ಬೇಕು, ಬಸವಣ್ಣನವರೆ ವಚನ ಸಾಹಿತ್ಯದ ಮೇಲೆ ಆಗುತ್ತಿರುವ ಆಕ್ರಮಗಳಿಗೆ ಉತ್ತರಿಸಲು ಪೂಜ್ಯ ಬೆಲ್ದಾಳ ಶರಣರನ್ನು ಆಯ್ಕೆ ಮಾಡಿದ್ದಾರೆ.

ಇನ್ನು ಮುಂದೆ ವಚನ ಸಾಹಿತ್ಯ ಸಂಶೋಧನೆ ಮಾಡುವವರಿಗೆ ಇದು ಆಕಾರ ಗ್ರಂಥವಾಗಲಿದೆ. ನಾನು ನ್ಯಾಯಾಧೀಶರಾಗಿ,ಇವಾಗ ವಿಶ್ರಾಂತ ನ್ಯಾಯಾಧೀಶ ನನ್ನ ನ್ಯಾಯಕ್ಕೆ ಯಾವುದೇ ಸಾಂವಿಧಾನಿಕ ಮಾನ್ಯತೆ ಇರಲ್ಲ ಆದರೆ ನೈತಿಕ ಬೆಂಬಲ ಇರುತ್ತದೆ, ಆದರಿಂದ ನಾನು ಈ ಪುಸ್ತಕದ ನನ್ನ ಜಡ್ಜ್‌ಮೆಂಟ್ ಘೋಷಿಸುತ್ತೇನೆ, ಇದು ಜಗದ ಕಂಡರಿಯದ ಅಸತ್ಯದ ಮೇಲೆ ಸತ್ಯದ ಮೌಲಿಕ ಗ್ರಂಥ , ಪೂಜ್ಯರು ಶರಣರಿಗೆ ಕೊಟ್ಟ ನ್ಯಾಯ ಆಗಿದೆ, ಇದು ಕೇವಲ ಕೈತೊಳೆದುಕೊಂಡು ಓದುವ ಗ್ರಂಥ ಅಲ್ಲ ಸಂಪೂರ್ಣ ಸ್ನಾನ ಮಾಡಿ, ಹಣೆಗೆ ಒತ್ತಿಕೊಂಡು ನಮಸ್ಕರಿಸಿ, ಪ್ರಾಂಜಲ ಮನಸ್ಸಿನಿಂದ ಓದುವ ಗ್ರಂಥ, ಅದಕ್ಕಾಗಿ ಪೂಜ್ಯರಿಗೆ ನನ್ನ ವತಿಯಿಂದ ಸಮಾಜದ ವತಿಯಿಂದ ಕೃತಜ್ಞತೆ ಸಲ್ಲಿಸುತ್ತಾ, ಚಿರಋಣಿ ಯಾಗಿರುತ್ತೇವೆ ಎಂದು ನಿಮ್ಮ ಪಾದಕ್ಕೆ ನಮಸ್ಕರಿಸಿ ಹೇಳುತ್ತೇನೆ ಎಂದು ಘೋಷಿಸಿದರು. ಮಾನ್ಯ ಸಚಿವ ಮಹಾದೇವಪ್ಪ ಅವರ ಬಗ್ಗೆ ಮಾತಾಡುತ್ತಾ ಜಸ್ಟಿಸ್ ಪಾಟೀಲರು ಹೇಳಿದ್ದು, ಮಹಾದೇವಪ್ಪ ಕೊರಳಲ್ಲಿ ಇರುವ ಚೈನ್ ಪದಕದಲ್ಲಿ ಇರುವ ಒಂದು ಕಡೆ ಬುದ್ಧ ಮತ್ತೊಂದು ಕಡೆ ಬಸವಣ್ಣನವರ ಫೋಟೋ ಕಂಡು ಬೆರಗಾದೆ, ಅವರ ಬಸವ ಅಭಿಮಾನಕ್ಕೆ ಶರಣು ಎಂದು ಹೇಳಿದ್ದಾರೆ.

ಕಾರ್ಯಕ್ರಮದ ದೀಪ ಪ್ರಜ್ವಲಿಸಿದ ಸನ್ಮಾನ್ಯ ಡಾ ಹೆಚ್ ಸಿ ಮಹಾದೇವಪ್ಪ ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡುತ್ತಾ, ಪೂಜ್ಯ ಡಾ ಸಿದ್ದರಾಮ ಶರಣರು ರಚಿಸಿದ ಸಂಶೋಧನಾ ಗ್ರಂಥ ಬಸವ ತತ್ವ ಸಿದ್ದಾಂತ ಅಧ್ಯಯನ ಮಾಡುವವರಿಗೆ ಮಾರ್ಗದರ್ಶಕ ದರ್ಶಕ ಗ್ರಂಥ ಆಗಿ ಹೊರ ಹೊಮ್ಮಲಿ ಎಂದು ಹೇಳಿದರು. ಜಗತ್ತು ದೇಶದಲ್ಲಿ ನೈತಿಕತೆ ಅಧೋಗತಿಗೆ ಹೋಗುತಿದೆ, ಮೌಢ್ಯ ಮೌಢ್ಯಾಚರಣೆ ಜಾತಿಯತೆ ಇಂದ ಧರ್ಮ ನಾರುತ್ತಿದೆ, ಇಂತಹ ಸಮಯದಲ್ಲಿ ದೇಶಕ್ಕೆ ಅಲ್ಲದೆ ಜಗತ್ತಿಗೆ ಬಸವ ತತ್ವ ಸಿದ್ದಾಂತ ಅಗತ್ಯ ಆಗಿದೆ. ಬಸವಣ್ಣನವರ ವಚನ ಚಳುವಳಿಯ ಫಲಶೃತಿ ವಚನಗಳನ್ನು ಜನರ ಬಾಗಿಲಿಗೆ ಮುಟ್ಟಿಸಲು ನಾವೆಲ್ಲರೂ ಎಡವಿದೆ, ವಚನಗಳು ಜನರ ಮನೆ ಮನಗಳಿಗೆ ಮುಟ್ಟಿಸುವ ಕೆಲಸ ನಾವೆಲ್ಲರೂ ಮಾಡೋಣ, ದೇಶದಲ್ಲಿ ಸಾಮಾಜಿಕ ಸಾಮರಸ್ಯ ತರೋಣ ಎಂದು ಹೇಳಿದರು. ಸತ್ಯ ಶರಣರು ಸತ್ಯ ಶೋಧ ಸಂಶೋಧನಾ ಗ್ರಂಥ ಸರಕಾರದ ವತಿಯಿಂದ ಮುದ್ರಣ ಮಾಡಿ ಎಲ್ಲಾ ಗ್ರಂಥಾಲಯ ಶಾಲಾ ಕಾಲೇಜುಗಳಿಗೆ ಮುಟ್ಟಿಸು ಹಾಗೆ ಮಾಡಬೇಕೆಂದು ಜಸ್ಟಿಸ್ ಶಿವರಾಜ ಪಾಟೀಲ ಅವರ ಬೇಡಿಕೆಗೆ ಸಚಿವರು ಸಮ್ಮತಿ ಸೂಚಿಸಿದ್ದಾರೆ, ಹಾಗು ತ್ವರಿತಗತಿಯಲ್ಲಿ ಮುದ್ರಣ ಮಾಡುತ್ತೇವೆ ಎಂದು ಹೇಳಿದರು.

ಸಾನಿಧ್ಯ ವಹಿಸಿದ್ದ ಪೂಜ್ಯ ಡಾ ಶರದಚಂದ್ರ ಮಹಾಸ್ವಾಮೀಜಿ ಕುಂದೂರು ಮಠ ಮೈಸೂರು ಹಾಗು ಸಂಸ್ಕೃತ ವಿದ್ವಾಂಸರು ಮಾತನಾಡಿ, ಇದು ಅದ್ಭೂತ ಗ್ರಂಥ ,ಪೂಜ್ಯ ಬೆಲ್ದಾಳ ಶರಣರು ಭಾರತ ದೇಶ ತುಂಬಾ ಸುತ್ತಾಡಿ ಎಲ್ಲಾ ವೇದ ಆಗಮಗಳು ಉಪನಿಷತ್ತು ಸಂಗ್ರಹಿಸಿ ಸುಮಾರು ವರ್ಷ ಅಧ್ಯಯನ ಮಾಡಿದ ಫಲಶೃತಿ ಸಂಶೋಧನಾ ಗ್ರಂಥ ಹೊರಹೊಮ್ಮಿದೆ. ಇದು ವಚನ ಸಾಹಿತ್ಯ ಅಧ್ಯಯನಕ್ಕೆ, ಬಸವ ತತ್ವ ಸಿದ್ದಾಂತಗಳ ಮೇಲೆ ಮಾಡಿದ್ದ ಆಪಾದನೆಗಳಿಗೆ, ಲಿಂಗಾಯತ ಧರ್ಮ ದಾಖಲೆಗಳ ಮುಖಾಂತರ ಉತ್ತರ ನೀಡುತ್ತಾ, ಶರಣರ ವಚನಗಳು ಸ್ವತಂತ್ರ ಅನುಭವಗಳು , ಯಾವುದೇ ಪ್ರಾಚೀನ ಸಂಸ್ಕೃತ ಗ್ರಂಥಗಳ ಕಾಪಿ ಅಲ್ಲ, ಯಾವುದೇ ಧರ್ಮಗಳ ಆಚರಣೆ ಅನುಕರಣೆ ಅಲ್ಲ, ಇವು ಜಗತ್ತಿನ ಹೊಸ ವಿಚಾರಗಳು ಸಿದ್ಧಾಂತಗಳು ಎಂದು ಹೇಳಿದರು.

ಗ್ರಂಥ ರಚಿಸಿದ ಪೂಜ್ಯ ಬೆಲ್ದಾಳ ಶರಣರು ಮಾತಾಡುತ್ತಾ, ಈ ಗ್ರಂಥ ನನ್ನ 75 ವರ್ಷದ ಅಧ್ಯಯನದ ಶ್ರಮದ ಗ್ರಂಥ. ಈ ಗ್ರಂಥದಲ್ಲಿ ಎಲ್ಲಾ ಪುರಾವೆ ಸಮೇತ ಸತ್ಯ ಹೊರಹಾಕಿದ್ದು, ಬಸವಾದಿ ಶರಣರ ಅನುಭಾವದ ವಚನಗಳು ಸ್ವತಂತ್ರ, ಬಸವಣ್ಣನವರಿಗೆ ಗುರು ಯಾರು ಇದ್ದಿಲ್ಲ, ಜಾತವೇದ ಮುನಿ ಅನ್ನುವ ವ್ಯಕ್ತಿ ಹುಟ್ಟೆ ಇಲ್ಲ, ಬಸವಣ್ಣನವರ ಗುರು ದೇವರು ಪರಮಾತ್ಮ ಶ್ರೀಗುರುವೆ ಗುರು. ವೇದ ಉಪನಿಷತ್ತು ಆಗಮಗಳಲ್ಲಿ ಬಸವ ತತ್ವ ಸಿದ್ದಾಂತ ಯಾವುದೇ ಕುರುಹು ಇಲ್ಲ, ಇದೆ ಎಂದು ಹೇಳುವವರು ಶುದ್ಧ ಸುಳ್ಳು ಹೇಳುತ್ತಿದ್ದಾರೆ ಅದಕ್ಕೆ ಪುರಾವೆ ಇಲ್ಲ. ವೀರಶೈವ ಆಗಮಗಳೂ ಖೊಟ್ಟಿ ಎಂದು ಸಾಬೀತಾಗಿದೆ, ಶೈವ ಆಗಮಗಳು ಕೂಡ ಬಸವಣ್ಣನವರ ನಂತರದಲ್ಲಿ ಬರೆದಿದ್ದು, ವೀರಶೈವ ಆಗಮಗಳು ಸೃಷ್ಟಿ ಮಾಡಿ ಅದರಲ್ಲಿ ಶರಣರ ಪಂಚಾಚಾರ, ಶಟಸ್ಥಲ, ಅಷ್ಟಾವರಣ ಸೇರಿಸಿ, ಇವೆಲ್ಲ ಶರಣರ ಮೊದಲೇ ಇದ್ದವು ಎಂದು ತೋರಿಸಲು ಕುತಂತ್ರ ಮಾಡಿದ್ದಾರೆ ಎಂದು ನುಡಿದರು. ಸಿದ್ಧಾಂತ ಶಿಖಾಮಣಿ ಗ್ರಂಥ ಕೂಡ ಬಸವಾದಿ ಶರಣರ ಕಾಲ ನಂತರ ಸೃಷ್ಟಿ ಮಾಡಿದ್ದ ಸಂಸ್ಕೃತ ಗ್ರಂಥ, ನಾನು ಮೂಲ ಸಿದ್ದಾಂತ ಶಿಖಾಮಣಿ ಹುಡುಕಿ ತೆಗೆದಿದ್ದೇನೆ, ಗ್ರಂಥ ಬಸವ ಸ್ತೋತ್ರದಿಂದ ಅಂದರೆ " ಓಂ ಶ್ರೀಗುರು ಬಸವ ಲಿಂಗಾಯ ನಮಃ" ಎಂದು ಬರೆದು ಪ್ರಾರಂಭ ಮಾಡುತ್ತಾರೆ, ಆದರಿಂದ ಸಿದ್ಧಾಂತ ಶಿಖಾಮಣಿ ಬಸವ ಪೂರ್ವ ಗ್ರಂಥ ಅಲ್ಲ. ಬಸವಣ್ಣನವರಿಗೆ ದೀಕ್ಷೆ ಕೊಟ್ಟಿದ್ದವರು ವೀರಶೈವ ಗುರುಗಳು ಅನ್ನೋದು ಶುದ್ಧ ಸುಳ್ಳು, ಇಷ್ಟಲಿಂಗ ಸಂಶೋಧನೆ ಮಾಡಿದ್ದೇ ಬಸವಣ್ಣನವರು. ಜಗತ್ತಿನಲ್ಲಿ ಪ್ರಥಮ ಇಷ್ಟಲಿಂಗ ದೀಕ್ಷೆ ನೀಡಿದ್ದು ಮಹಿಳೆಗೆ ತನ್ನ ಹಿರಿಯ ಸಹೋದರಿ ಅಕ್ಕ ನಾಗಾಂಬಿಕೆ ದೇವಿಯವರಿಗೆ. ಆದರಿಂದ ಇಷ್ಟಲಿಂಗ ಜನಕ ಬಸವಣ್ಣ. ಈ ಗ್ರಂಥ ಓದಿ ಯಾರಾದರೂ ಪುರಾವೆ ಸಹಿತ ಚರ್ಚೆಗೆ ಬಂದರೆ ಮನಪೂರ್ವಕ ಸ್ವಾಗತ್ತಿಸುತ್ತೇನೆ, ಸುಳ್ಳು ಮಾತುಗಳಿಗೆ ಒಪ್ಪುವುದಿಲ್ಲ ಎಂದು ಮನ ಬಿಚ್ಚಿ ಮಾತನಾಡಿದರು. ಸ್ವಾಗತ ಭಾಷಣ ಶ್ರೀಕಾಂತ ಸ್ವಾಮಿ ಬೀದರ ಮಾಡಿದರು, ನಿರೂಪಣೆ ಪೂಜ್ಯ ಮಾತೆ ಸತ್ಯದೇವಿ ಮಾತಾಜಿ ಬಸವ ಮಹಾಮನೆ ನೆರವೇರಿಸಿದ್ದರು, ವೇದಿಕೆ ಮೇಲೆ ಪೂಜ್ಯ ಜಗದ್ಗುರು ಡಾ ಚನ್ನಬಸವಾನಂದ ಮಹಾಸ್ವಾಮೀಜಿ ಕುಂಬಳಗೋಡು ಪೀಠ ಬೆಂಗಳೂರು, ಪೂಜ್ಯ ಡಾ ಗಂಗಾಂಬಿಕೆ ಅಕ್ಕ, ಸನ್ಮಾನ್ಯ ಶ್ರೀ ಅರವಿಂದ ಜತ್ತಿ ಅಧ್ಯಕ್ಷರು ಬಸವ ಸಮಿತಿ ಬೆಂಗಳೂರು, ಶ್ರೀ ಕೃಷ್ಣಪ್ಪ ಮಾಲಿಕರು ಬಸವ ಟಿವಿ ಬೆಂಗಳೂರು ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330. Editor: Ramesh Reddy, Office Ph. No: +91 9449732000.

## ಡಾ.ಮೀನಾ ಚಂದಾವರಕರ ಅಭಿಪ್ರಾಯ: ದೇಶದ ಅಭಿವೃದ್ಧಿಯಲ್ಲಿ ವೈದ್ಯ ಕ್ಷೇತ್ರದ ಮಹಿಳೆಯರ ಪಾತ್ರ ಅನನ್ಯ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.10–ದೇಶದ ಸಮಗ್ರಅಭಿವೃದ್ಧಿಯಲ್ಲಿವೈದ್ಯಕೀಯ ಕ್ಷೇತ್ರದ ಮಹಿಳೆಯರ ಪಾತ್ರ ಅನನ್ಯವಾಗಿದ್ದು,ಮಹಿಳೆಯರಿಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಟ್ಟರೆ ಮಾತ್ರ ದೇಶದ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ವಿಜಯಪುರದಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತಕುಲಪತಿ ಡಾ.ಮೀನಾ ಚಂದಾವರಕರ ಹೇಳಿದರು.

ನಗರದ ಬಿವಿವಿ ಸಂಘದ ಎಸ್.ನಿಜಲಿಂಗಪ್ಪವೈದ್ಯಕೀಯ ಮಹಾವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಹಿಳಾ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿದ ಅವರು,ಮಹಿಳೆ ಹಲವಾರು ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದು ಅಗ್ರಸ್ಥಾನ ಪಡೆದುಕೊಂಡಿದ್ದಾಳೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಎಸ್.ನಿಜಲಿಂಗಪ್ಪವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ, ಬಿವಿವಿ ಸಂಘದಲ್ಲಿ ಮಹಿಳೆಯರಿಗೆ ಸಮಾನತೆ ಮತ್ತು ನ್ಯಾಯದ ತತ್ವಗಳನ್ನು ಬೆಳೆಸುವ ಪೂರಕ ವಾತಾವರಣವನ್ನು ಕಲ್ಪಿಸಿಕೊಡಲಾಗಿದೆ. ನಮ್ಮ ವೈದ್ಯಕೀಯ ಕಾಲೇಜು ವೈದ್ಯಕೀಯ ಶಿಕ್ಷಣ ನೀಡುವ ಜೊತೆಗೆ ಮಹಿಳೆಯರಲ್ಲಿ ಆತ್ಮ ವಿಶ್ವಾಸ, ಸ್ವಾಯತ್ತತೆ ಮತ್ತು ನಾಯಕತ್ವದ ಗುಣಗಳನ್ನು ವೃದ್ಧಿಸಲು ಸಹಾಯ ಮಾಡುತ್ತಿದೆ ಎಂದರು.

ಗೌರವ ಅತಿಥಿ ಡಾ.ಆಶಾಲತಾ ಮಲ್ಲಾಪೂರ ಮಾತನಾಡಿ, ಮಹಿಳೆಯರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶ ಕಲ್ಪಿಸಿಕೊಟ್ಟರೆ ಮಾತ್ರ ದೇಶ ವೈದ್ಯಕೀಯ ಕ್ಷೇತ್ರದಲ್ಲಿ ಸಮಗ್ರ ಅಭಿವೃದ್ಧಿಯನ್ನು ಸಾಧಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ಮಹಿಳಾ ವೈದ್ಯರು ಹಾಗು ವಿದ್ಯಾರ್ಥಿನಿಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿ ಒಕ್ಕೂಟದ ಉಪಾಧ್ಯಕ್ಷೆ ಡಾ. ಮಂಜುಳಾ ಪಾಟೀಲ,ಮಹಿಳಾ ವಿದ್ಯಾರ್ಥಿ ಪ್ರತಿನಿಧಿ ಅನುಷಾ ಮತ್ತು ವಿವಿಧ ವಿಭಾಗದ ಮಹಿಳಾ ವೈದ್ಯಶಿಕ್ಷಕರು,ಮಹಿಳಾ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

# ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದ 'ಹುಚ್ಚರ ಸಂತೆ' ನಾಟಕ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ವಾ.10–ಧಾರವಾಡದ ಟೂರಿಂಗ್ ಟಾಕೀಸ್‌ದಿಂದ ನವನಗರದ ಡಾ.ಬಿ.ಆರ್.ಅಂಬೇಡ್ಕರ್‌ಭವನದಲ್ಲಿ ಏರ್ಪಡಿಸಿದ್ದ 'ಹುಚ್ಚರ ಸಂತೆ' ನಾಟಕ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲುವಂತೆ ಮಾಡಿತು.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಪ್ರದರ್ಶನಗೊಂಡಿರುವ ನಾಟಕ ಜನಮನ್ನಣೆಗಳಿಸಿದ್ದು,ನಾಟಕತಂಡ ತನ್ನ 200ನೇ ಪ್ರದರ್ಶನ ಸಂಭ್ರಮಾಚರಣೆಯನ್ನು ನಗರದಲ್ಲಿ ನೆರವೇರಿಸಿತು.

ಅಂಬೇಡ್ಕರ್ ಭವನ ಭರ್ತಿಯಾಗಿ ಜನ ನಿಂತುಕೊಂಡೇ ನಾಟಕವನ್ನು ವೀಕ್ಷಿಸಿದರು. ಶುದ್ಧ ಹಾಸ್ಯಭರಿತ ಸಾಮಾಜಿಕ ನಾಟಕವಾಗಿರುವುದರಿಂದ ಪ್ರೇಕ್ಷಕರು ನಾಟಕ ವೀಕ್ಷಣೆಗೆ ಮಕ್ಕಳನ್ನು ಕರೆ ತಂದಿದ್ದರು. ಸಿದ್ದ, ಬಡ್ಡಿಮಗ ಪಾತ್ರಧಾರಿಗಳು ಒಂದಾದ ನಂತರ ಒಂದರಂತೆ ಹರಿಬಿಡುತ್ತಿದ್ದ ನಗೆ ಚಟಾಕಿಗಳು ಪ್ರೇಕ್ಷಕರು ನಕ್ಕು ನಲಿಯುವಂತೆ ಮಾಡಿತು.

ಹಿರಿಯ ರಂಗಕರ್ಮಿ ಉಮೇಶ ತೇಲಿ ಅವರು ಸಿದ್ದನ ಪಾತ್ರದಲ್ಲಿ ನಟಿಸಿದ್ದು, ಅವರ ಕುತಂತ್ರಿ ಪಾತ್ರ ಪ್ರೇಕ್ಷಕರಿಗೆ ಅತ್ಯಾಪ್ತವಾಯಿತು. ಬಡ್ಡಿಮಗ ಪಾತ್ರದಲ್ಲಿ ಸಿದ್ದಾರ್ಥ ಪುರದಣ್ಣವರ, ಪ್ರಶಾಂತ ಹುಡೇದ, ಕಮಲಾಕ್ಷಿ ಪಾತ್ರದಲ್ಲಿ ಸುಕನ್ಯಾ, ಕಾಮಾಕ್ಷಿ ತಂದೆಯ ಪಾತ್ರದಲ್ಲಿ ಪ್ರೇಮನಾಥ ನಿರ್ಗಟ್ಟಿ ಅವರು ಅಭಿನಯಸಿ ಪ್ರೇಕ್ಷಕರನ್ನು ರಂಜಿಸಿದರು. ನಾಟಕದ ಪ್ರತಿ ಪಾತ್ರಧಾರಿಗಳೂ ಮನೋಜ್ಞವಾಗಿ ಅಭಿಯನಿಸಿ ಪ್ರೇಕ್ಷಕರ ಮನಸ್ಸುಗೆದ್ದರು. ವಿನೀತ್ ಕಟ್ಟಿ ಹಾಗೂ ಶಿವರಾಜ ಪಾಟೀಲ ನಾಟಕ ಪ್ರದರ್ಶನದ ಉಸ್ತುವಾರಿ ವಹಿಸಿಕೊಂಡಿದ್ದರು.

ರಂಗಭೂಮಿಗೆ ಪ್ರೋತ್ಸಾಹ: ನಾಟಕ ಪ್ರದರ್ಶನ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ರಂಗಭೂಮಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಗಬೇಕಿದೆ. ಹವ್ಯಾಸಿ ರಂಗಭೂಮಿ ಕಲಾವಿದರು ತಾವು ಕಷ್ಟದಲ್ಲಿದ್ದರೂ ಜನರನ್ನು ರಂಜಿಸುವ ಮಹತ್ವದ ಕಾರ್ಯ ಮಾಡುತ್ತಾರೆ. ಇಂಥ ನಾಟಕಗಳಿಗೆ ಪ್ರೋತ್ಸಾಹ ಸಿಗುವ ಕೆಲಸವಾಗಬೇಕೆಂದು ಆಶಿಸಿದರು.

ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆಣ್ಣವರ ಮಾತನಾಡಿ, ಇಂಥ ನಾಟಕಗಳಿಗೆ ಪ್ರೋತ್ಸಾಹ ಹೆಚ್ಚು ಪ್ರೋತ್ಸಾಹ ಸಿಗಬೇಕು. ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ನಾಟಕ ವೀಕ್ಷಣೆ ಮಾಡಿದದು ಖುಷಿಯ ವಿಚಾರ ಎಂದರು.

ನಗರದ ಶ್ರೀದಿಗಂಬರೇಶ್ವರ ಮಠದ ಬಸವರಾಜಪ್ಪನವರು, ಬಳ್ಳಾರಿ ಜಿಲ್ಲೆ ಕುರಗೋಡಿನ ಪಿಎಸ್‌ಐ ಸುಪ್ರೀತ್ ಪಾಟೀಲ ವೇದಿಕೆಯಲ್ಲಿದ್ದರು.

## ನಾಳೆ ಬೆಳಕೇರಾ ಬೆಟ್ಟದ ರೇವಣ್ಣಸಿದ್ದೇಶ್ವರರ ಮಹಾರಥೋತ್ಸವ





ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:–ತಾಲೂಕಿನ ಬೆಳಕೇರಾ ಬೆಟ್ಟದ ಶ್ರೀ ರೇವಣಸಿದ್ದೇಶ್ವರ 16ನೇ ಜಾತ್ರಾ ಮಹೋತ್ಸವ ಇಂದಿನಿಂದ ಆರಂಭವಾಗಿ ಮಾರ್ಚ್ 12ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರಗಲಿವೆ ಎಂದು ಪಂಚ ಕಮಿಟಿ ಅವರು ತಿಳಿಸಿದ್ದಾರೆ. ಇಂದು ಬೆಳಿಗ್ಗೆ ಜಗತ್ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಮೂರ್ತಿಗೆ ರುದ್ರಾಭಿಷೇಕ ಗ್ರಾಮದ ಶ್ರೀ ನಂದಿ ಬಸವೇಶ್ವರ ದೇವಸ್ಥಾನದಿಂದ ಕಳಸ ಹಾಗೂ ಪಲ್ಲಕ್ಕಿ ಮೆರವಣಿಗೆ ಮತ್ತು ಬೆಳಗ್ಗೆ 10 ಗಂಟೆಗೆ ಪಂಚಾಚಾರ್ಯರ ಧ್ವಜಾರೋಹಣ ಹಾಗೂ ರಥದ ಕಳಸರೋಹಣ ಜರುಗುವುದು. ನಾಳೆ ಬೆಳಿಗ್ಗೆ 7 ಗಂಟೆಗೆ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಮೂರ್ತಿಗೆ ಸಂಗೀತ, ರುದ್ರಾಭಿಷೇಕ, ಬೆಳಿಗ್ಗೆ 9 ಘಂಟೆಗೆ ಜಂಗಿ ಕುಸ್ತಿ, ಮಧ್ಯಾಹ್ನ 3:00 ಗಂ–ಟೆಗೆ ಧರ್ಮಸಭೆ ನಂತರ 4 ಗಂಟೆಗೆ ಶ್ರೀ ಜಗದ್ಗುರು ರೇವಣಸಿದ್ದೇಶ್ವರರ ಭವ್ಯ ಪಲ್ಲಕ್ಕಿ ಉತ್ಸವ ಹಾಗೂ ಸಾಯಂಕಾಲ 5:30ಕ್ಕೆ ಮಹಾರಥೋತ್ಸವ ಜರುಗುತ್ತದೆ. ರಾತ್ರಿ 8: 30ಕ್ಕೆ ನಗೆ ಹಬ್ಬ ಕಾರ್ಯಕ್ರಮ ಜರುಗುತ್ತವೆ ಎಂದು ಬೆಟ್ಟದ ಶ್ರೀ ಜಗದ್ಗುರು ರೇವಣ್ಣಸಿದ್ದೇಶ್ವರ್ ಜಾತ್ರಾ ಮಹೋತ್ಸವ ಸೇವಾ ಸಮಿತಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಳೆಯ ದಿನಪತ್ರಿಕೆಗಳ ವಿಲೇವಾರಿಗೆ ದರಪಟ್ಟಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಮಾರ್ಚ್10–ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಸಂಬಂಧಪಟ್ಟಂತೆ ವಿಶ್ವೇಶ್ವರಯ್ಯ ಗೋಪುರ ಕೇಂದ್ರ ಕಟ್ಟಡದ ಅಡಿಟೋರಿಯಂನಲ್ಲಿ ಶೇಖರಿಸಿರುವ ಹಳೆಯ ದಿನಪತ್ರಿಕೆಗಳ ವಿಲೇವಾರಿ ಮಾಡಲು ಮೊಹರಾದ ಲಕೋಟೆಯಲ್ಲಿ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತಿದಾರರು ನಮೂನೆಯಲ್ಲಿ ತಮ್ಮ ದರಪಟ್ಟಿಯನ್ನು ದಿನಾಂಕ 11–03–2025ರಂದು ಮಂಗಳವಾರ ಸಂಜೆ 5.00 ಗಂಟೆಯೊಳಗೆ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ. ನಂ.17, ವಾರ್ತಾ ಸೌಧ, ಕೇಂದ್ರ ಕಚೇರಿ, ಭಗವಾನ್ ಮಹಾವೀರ ರಸ್ತೆ (ಇನ್ ಫೆಂಟ್ರಿ ರಸ್ತೆ), ಬೆಂಗಳೂರು–560 001 ಇವರಿಗೆ ಸಲ್ಲಿಸಲು ಸೂಚಿಸಿದ (ಲಕೋಟೆ ಮೇಲೆ ಹಳೆದ ದಿನಪತ್ರಿಕೆಗಳ ವಿಲೇವಾರಿಗಾಗಿ ದರಪಟ್ಟಿ ಎಂದು ನಮೂದಿಸುವುದು), ಇ.ಎಂ.ಡಿ. ರೂ.10,000/–ಗಳನ್ನು ಪಾವತಿಸಿ ಈ ಕಚೇರಿಯಿಂದ ರಸೀದಿ ಪಡೆದು ಅದನ್ನು ದರಪಟ್ಟಿಯ ಜೊತೆಗೆ ಲಗತ್ತಿಸುವುದು. ದರಪಟ್ಟಿಯ ಲಕೋಟೆಗಳನ್ನು ದಿನಾಂಕ 12–03–2025 ರಂದು ಮಧ್ಯಾಹ್ನ 3.00 ಗಂಟೆಗೆ ತೆರೆಯಲಾಗುವುದು. ಯಾವುದೇ ದರಪಟ್ಟಿಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ಇವರು ಕಾಯ್ದಿರಿಸಿಕೊಂಡಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಆಡಳಿತಾಧಿಕಾರಿಗಳು, ಆಡಳಿತ ಶಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕೇಂದ್ರ ಕಚೇರಿ, ಬೆಂಗಳೂರು ಇವರಿಂದ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂ. 9611544144 /ದೂರವಾಣಿ ಸಂ: 080–22028063/99 ರ ಮೂಲಕ ಸಂಪರ್ಕಿಸಬಹುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಡಿ.ಡೊಳ್ಳಿನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀ ಗುರು ಗಂಗಾಧರ ಬಕ್ಕಪ್ರಭುಗಳ ಮಹಾದ್ವಾರ ಲೋಕಾರ್ಪಣೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ತಾಲೂಕಿನ ಕರಕನಳ್ಳಿ ಗ್ರಾಮದ ಶ್ರೀ ಗುರು ಗಂಗಾಧರ ಬಕ್ಕ ಪ್ರಭುಗಳ ದೇವಾಲಯದ ಬೃಹತ್ ಮಹಾದ್ವಾರ ಲೋಕಾರ್ಪಣೆ ಖ್ಯಾತ ಉದ್ಯಮಿ ಮೋಹನದಾಸ್ ಮಾದನಶೆಟ್ಟಿ ಲೋಕಾರ್ಪಣೆಗೊಳಿಸಿದರು. ದಿವಂಗತ ಶಶಿರೇಖಾ ಮೋಹನದಾಸ್ ಮಾದನಶೆಟ್ಟಿ ರವರ ಸ್ಮರಣಾರ್ಥ ಸುಮಾರು 80 ಲಕ್ಷಗಳ ರೂಪಾಯಿಗಳ ಬೃಹತ್ ಮಹಾದ್ವಾರ ಇದಾಗಿದೆ. ಶ್ರೀ ಬಕ್ಕಪ್ರಭುಗಳ ಅನುಗ್ರಹದಿಂದ ನಮ್ಮ ಪರಿವಾರಕ್ಕೆ ಯಾವುದೇ ಕುಂದು ಕೊರತೆ ಬರದಂತೆ ಅವರ ಆಶೀರ್ವಾದ ಸದಾ ನಮ್ಮ ಮೇಲೆ ಇದೆ, ಭಕ್ತಿಯಿಂದ ಸ್ಮರಣೆ ಮಾಡಿದಾಗ ಮಾತ್ರ ದೇವರ ಕರುಣೆ ಸಿಗುತ್ತದೆ ಎಲ್ಲರೂ ನಿರಂತರ ಧ್ಯಾನದಿಂದ ನಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಾಗ ಮಾತ್ರ ನಮ್ಮ ಎಲ್ಲ ವ್ಯವಹಾರಗಳಲ್ಲಿ ಯಶಸ್ಸು ಸಾಧ್ಯವಾಗುತ್ತದೆ ಇದಕ್ಕೂ ಮುನ್ನ ಮಾದನಶೆಟ್ಟಿ ಪರಿವಾರದಿಂದ ದೇವಸ್ಥಾನದಲ್ಲಿ ಸಕಲ ವಿಧಿ ವಿಧಾನಗಳಿಂದ ವಿಶೇಷ ಅಭಿಷೇಕ ಪೂಜೆ ಸಲ್ಲಿಸಿ ಲೋಕಾರ್ಪಣೆಗೊಳಿಸಲು ಸಜ್ಜುಗೊಳಿಸಿದ್ದರು. ಪ್ರಮುಖರಾದ ಗೋಪಾಲ ರೆಡ್ಡಿ ನಿರ್ಣಾ, ಅಶೋಕ ರೆಡ್ಡಿ ಪೊಲೀಸ ಪಾಟೀಲ, ಜಗನ್ನಾಥ ರೆಡ್ಡಿ ಮತಾಟಿ ರಾಜಪ್ಪ ಮುತ್ಯ, ಶಿವಪುತ್ರ ಮಾಲಿಪಾಟೀಲ್ ಪ್ರಭ ನೆಲವಾಳ, ನಾಗಪ್ಪ ಮಕಾಜಿ, ಅಶೋಕ ಸೇವತ್ಕರ್, ಬಸಯ್ಯಸ್ವಾಮಿ, ಪ್ರಭು ಘಾಟೋಳ್ಳಿ ಭೀಮಶಾ ಬುಡ್ಡಾ, ಬಕ್ಕಯ್ಯ ಸ್ವಾಮಿ, ಜಗನ್ನಾಥ ಗಾರಿ ಹಾಗೂ ಭಕ್ತಾದಿಗಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.




ಬಸವಕಲ್ಯಾಣ :– ಇಲ್ಲಿನ ಶ್ರೀ ಗಾನಯೋಗಿ ಶಿವಯೋಗಿ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ 111ನೇ ಜಯಂತಿ ಉತ್ಸವ ನಿಮಿತ್ಯ ಸಂಗೀತ ಸಮ್ಮೇಳನ. ಕಾರ್ಯಕ್ರಮವನ್ನು ಮೌನೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡ ಸಮಾರಂಭದಲ್ಲಿ ಕಾಂಗ್ರೆಸ್ ಪಕ್ಷದ ಯುವ ನಾಯಕರಾದ ಗಿರೀಶ್ ತಾಂಬೋಳೆ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ನಿವೃತ್ತ ಉಪನಿರ್ದೇಶಕರಾದ ಬಸವರಾಜ್ ವಿ. ವರವಟ್ಟೆ.ವಿಶ್ವಕರ್ಮದ ಹಿರಿಯ ಮುಖಂಡರಾದ ಹರಿಶ್ಚಂದ್ರ ಪಂಚಾಳ. ಹಿರಿಯ ಕಲಾವಿದ ಧೂಳಪ್ಪಾ ಮುಡಬಿ. ರಾಜಕುಮಾರ ಹೂಗಾರ. ದೊಡ್ಡಪ್ಪ ಅಪ್ಪಾ ಬಿ. ಎಡ್. ಮಹಾವಿದ್ಯಾಲಯದ ಪ್ರಾಚಾರ್ಯರಾದ ರಾಚಯ್ಯ ಸ್ವಾಮಿ ಮಠಪತಿ. ಕಲಾವಿದರಾದ ಜಗದೀಶ ಎಸ್. ನಗನೂರ್ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾ ಅಧ್ಯಕ್ಷರಾದ ಮಾರ್ಥಂಡ್ ಜೋಶಿ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಇದೇ ವೇಳೆ ಪ್ರಾರ್ಥನೆ ಗೀತೆ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಸಂಗೀತ ಶಾಲೆಯ ಮಕ್ಕಳಿಂದ ನಡೆಯಿತು. ಸಾಥ್ ರಮೇಶ್ ಗರುಡುಕರ್ ನೀಡಿದರು. (ಮಲ್ಲಮ್ಮ ನುಡಿ ಚಿತ್ರ)

## ಸರ್ಕಾರಿ ಶಾಲೆಯ ಮುಂಭಾಗದ ನಾಲೆ ರೀಪೆರಿ ಯಾವಾಗ?



(ವರದಿ.ಡಿ.ಕೆ. ಪ್ರಹ್ಲಾದ)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಮಾ 10 ಇಲ್ಲಿನ ತಿಪುರಾಂತಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಂಭಾಗದಲ್ಲಿ ರಸ್ತೆಯ ನೀರು ಹರಿಯಲು ವ್ಯವಸ್ಥೆ ಇರದ ಕಾರಣ ಶಾಲೆಯ ಪಕ್ಕದಲ್ಲಿ ನೀರು ಶೇಖರಣೆಯಾಗಿ ಗಬ್ಬುನಾರುತ್ತಿದ್ದು ಸೊಳ್ಳೆನಾಯಿ ಹಂದಿಗಳ ಆಶ್ರಯ ತಾಣವಾಗಿದೆ ಆ ನೀರು ಹರಿಯಲು ವ್ಯವಸ್ಥೆ ಮಾಡಬೇಕೆಂದು ಸಂಬಂಧ ಪಟ್ಟ ಇಲಾಖೆಯ ಗಮನಕ್ಕೂ ತರಲಾಗಿದೆ ಅಲ್ಲದೆ ಬಿಸಿ ಊಟದ

ನಂತರ ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ತೊಂದರೆ–ಯಾಗುತ್ತಿದು ನೀರಿನ ವ್ಯವಸ್ಥೆ ಅಥವಾ ಬೊರವೇಲ ರೀಪೆರಿ ಮಾಡಿಸಲು ಕೊರಲಾಗಿದೆ. ಇಲ್ಲಿಯವರೆಗೆ ಸಮಸ್ಯೆ ಬಗ್ಗೆ ಹರದಿಲ ಎಂದು ಸಾರ್ವಜನಿಕರ ಕೋರಿಕೆ ಯಾಗಿದೆ.

ಸಂಬಂಧ ಪಟ್ಟ ಇಲಾಖೆಯು ಎಷ್ಟುರ ಮಟ್ಟಿಗೆ ಸಮಸ್ಯೆ ಬಗೆಹರಿಸುತ್ತಾರೂ ಕಾದು ನೋಡೊಣಾ.

## ವಿಧಾನಸಭೆಯಲ್ಲಿ ವಿಧೇಯಕಗಳ ಅಂಗೀಕಾರ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಮಾರ್ಚ್ 10–ಕರ್ನಾಟಕ ಗಿರವಿದಾರರ (ತಿದ್ದುಪಡಿ) ಅಧಿನಿಯಮ 2025, ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೆಧ (ತಿದ್ದುಪಡಿ) ಅಧಿನಿಯಮ 2025, ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ಅಧಿನಿಯಮ 2025) ವಿಧೇಯಕಗಳನ್ನು ಸಹಕಾರ ಸಚಿವ ಕ್ಯಾತ್ಸಂದ್ರ ಎನ್ ರಾಜಣ್ಣ ಅವರು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ವಿಧಾನಸಭೆಯಲ್ಲಿ ಕೋರಿದರು. ವಿಧಾನಸಭೆಯ ಸದಸ್ಯರು ಮೂರು ವಿಧೇಯಕಗಳನ್ನು ಪರ್ಯಾಲೋಚಿಸಿ ವಿಧೇಯಕಗಳಿಗೆ ಒಮ್ಮತದ ಬೆಂಬಲ ವ್ಯಕ್ತಪಡಿಸಿದ ನಂತರ ವಿಧೇಯಕಗಳು ಅಂಗೀಕೃತವಾಯಿತು.

## ಸ್ವಯಂ ಪ್ರೇರಿತವಾಗಿ ಸಂಗೊಳ್ಳಿ ರಾಯಣ್ಣನ ವೃತ್ತ ತೆಗೆದ ಗ್ರಾಮಸ್ಥರು...




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ತಾಲೂಕಿನ ರಾಂಪುರ ಗ್ರಾಮದ ರಸ್ತೆ ಪಕ್ಕದಲ್ಲಿ ಸಂಗೊಳ್ಳಿ ರಾಯಣ್ಣನ ವೃತ್ತ ಸ್ಥಾಪಿಸಲಾಯಿತ್ತು. ಸಾರ್ವಜನಿಕರ ಓಡಾಟ–ಕ್ಕೆ ತೊಂದರೆಯಾಗುತ್ತಿದೆ ಎಂದು ಗ್ರಾಮಸ್ಥರು ಗ್ರಾಮ ಪಂಚಾಯತ್ ಅಧಿಕಾರಿಗಳಿಗೆ ದೂರು ಸಲ್ಲಿಸಿದ ಅನ್ವಯ ತಹಶೀಲ್ದಾರ್ ಮಂಜುನಾಥ್ ಪಂಚಾಳ್ ಮಾರ್ಚ್ 6 ರಂದು ಗ್ರಾಮಕ್ಕೆ ಭೇಟಿ ನೀಡಿ ಶಾಂತಿ ಸುವ್ಯವಸ್ಥೆ ಕಾಪಾಡಲು ಸಭೆ ಮಾಡಿದರು. ಶಾಂತಿ ಸುವ್ಯವಸ್ಥೆ ಮನಗೊಂಡು ಗ್ರಾಮಸ್ಥರು ಸ್ವಯಂ ಪ್ರೇರಿತವಾಗಿ ಮಾರ್ಚ್ 9 ರಂದು ರಾಂಪುರ ಗ್ರಾಮದಲ್ಲಿರುವ ಸಂಗೊಳ್ಳಿ ರಾಯಣ್ಣನ ವೃತ್ತ ತೆರುವುಗೊಳಿಸಿದ್ದಾರೆ.

## ಕೌಶಲ್ಯವನ್ನು ಉದ್ಯೋಗವಾಗಿ ಅಥವಾ ಉದ್ಯಮವನ್ನಾಗಿ ಮಾಡಿಕೊಳ್ಳಿ : ಬಾಬುರಾವ ಮೇಲಿನಮನಿ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಮಾ 10 ಕೌಶಲ್ಯವನ್ನು ರೂಡಿಸಿಕೊಂಡು ಅದನ್ನು ಉದ್ಯೋಗವಾಗಿ ಅಥವಾ ಉದ್ಯಮವನ್ನಾಗಿ ಮಾಡಿಕೊಳ್ಳಬಹುದು. ಎಂದು ಮುಖ್ಯ ಅತಿಥಿಗಳಾಗಿ ರಾಜ್ಯ ಪ್ರಶಸ್ತಿ ಪುರಸ್ಕೃತ ಕಲಾವಿದರಾದ ಬಾಬುರಾವ್ ಮೇಲಿನಮನಿ ಹೇಳಿದರು.

ತಾಲೂಕಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ ಸ್ಕ್ರೀನ್ ಪ್ರಿಂಟಿಂಗ್ ಎಂಬ ಮುದ್ರಣ ಕಲೆಯ ಕಾರ್ಯಗಾರದಲ್ಲಿ ಮಾತನಾಡಿ

ಬ್ಲಾಕ್ ಲೆಸ್ ಡೇ ರಾಷ್ಟ್ರೀಯ ಶಿಕ್ಷಣ ನೀತಿಯ ಒಂದು ಭಾಗವಾಗಿದೆ. ವಿದ್ಯಾರ್ಥಿಗಳಿಗೆ ಕಲಿಕೆ ಹೊರೆಯಾಗದಂತೆ, ಮನೋರಂಜನಾತ್ಮಕವಾಗಿ ಅದು ಜೀವನದಾಸರೆಯಾಗುವಂತೆ ರೂಪಿಸುವ ವಿದ್ಯಮಾನವೇ ಈ ಬ್ಯಾಗ ಲೆಸ್ ಡೇ. ಇದರ ಅಂಗವಾಗಿ ನವೋದಯದಲ್ಲಿ 6 ರಿಂದ 8 ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಸ್ಕ್ರೀನ್ ಪ್ರಿಂಟಿಂಗ್ ಎಂಬ ಮುದ್ರಣ ಕಲೆಯ ಕೌಶಲ್ಯವನ್ನು ಕಲಿಸಿಕೊಡುವ ಕಾರ್ಯಗಾರವನ್ನು ನಡೆಸಲಾಯಿತು. ಈ ಕಾರ್ಯಗಾರದ ಪರಿಣಿತರಾದ ಬಾಬುರಾವ್ ಮೇಲಿನಮನಿ, ಉಮೇಶ್ ಕಟ್ಟಿಮನಿ ಇವರುಗಳು ಈ ಕೌಶಲ್ಯದ ವಿವಿಧ ಹಂತಗಳನ್ನು ಪ್ರತ್ಯಕ್ಷ ಕರಣದ ಮೂಲಕ ಮಕ್ಕಳಿಗೆ ತೋರಿಸಿ, ಪ್ರಾಯೋಗಿಕವಾಗಿ ಅದನ್ನು ತಯಾರಿಸುವ ಕೆಲಸವನ್ನು ಮಕ್ಕಳಿಗೆ ಕೊಡಲಾಗಿತ್ತು. ವಿದ್ಯಾರ್ಥಿಗಳು ಈ ಕಲೆಯನ್ನು ಖುಷಿಖುಷಿಯಾಗಿ ಕಲಿತು ತಾವೇ ಮಾಡಿದ ಸ್ಕ್ರೀನ್ ಪ್ರಿಂಟಿಂಗ್ ಮಾದರಿಗಳನ್ನು ನೆರೆದ ವಿದ್ಯಾರ್ಥಿಗಳ ಮುಂದೆ ಪ್ರದರ್ಶನ ಮಾಡಿದರು. ವಿದ್ಯಾಲಯದ ಪ್ರಾಚಾರ್ಯರಾದ ಡಾ. ಭಾವನಾ ಋಷಿ ಅವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ

ಸುರೇಂದ್ರ, ಶಿಕ್ಷಕಿಯರಾದ ಅನಿತಾ ಸೌಮ್ಯ ಧನ್ಯ ಹಾಗೂ ಸುರೇಂದ್ರಬಾಲಾಜಿ ಪಿಕೆ ಸೇರಿದಂತೆ ಅನೇಕರು ಭಾಗವಹಿಸಿದ್ದರು. ವಿದ್ಯಾಲಯದ ಕಲಾ ಶಿಕ್ಷಕರಾದ ಲಕ್ಷ್ಮಿಕಾಂತ ದುದ್ದಣಗಿ ಸ್ವಾಗತಿಸಿದರು. ಸಂಗೀತ ತಂಡ ಪ್ರಾರ್ಥನೆ. ಧರ್ಮಣ ಚಿಟ್ಟಾ ವಂದಿಸಿದರು.

# 15ರಂದು ಅಕಾಡೆಮಿಯ ವಾರ್ಷಿಕ ಗೌರವ ಪ್ರಶಸ್ತಿ ಹಾಗೂ ತಜ್ಞ ಪ್ರಶಸ್ತಿ ಪ್ರದಾನ: ಗೊಲ್ಲಹಳ್ಳಿ ಶಿವಪ್ರಸಾದ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 10 : ಈ ತಿಂಗಳ 15ರಂದು ಶನಿವಾರ ಬೆಳಿಗ್ಗೆ 11.30 ಗಂಟೆಗೆ ನಗರದ ಡಾ.ಚನ್ನಬಸವ ಪಟ್ಟದ್ದೇವರ ರಂಗಮಂದಿರದಲ್ಲಿ 2023ಹಾಗೂ 2024ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ಹಾಗೂ ತಜ್ಞ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ ಎಂದು ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಗೊಲ್ಲಹಳ್ಳಿ ಶಿವಪ್ರಸಾದ ತಿಳಿಸಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಟಿ ಉದ್ದೇಶಿಸಿ ಮಾತನಾಡಿದ ಅವರು, ಈ ಹಿಂದೆ ಗದಗ, ಚಿತ್ರದುರ್ಗ, ಮೈಸುರು, ಚಾಮರಾಜನಗರ ಇತ್ಯಾದಿ ಜಿಲ್ಲೆಗಳಲ್ಲಿ ಜಾನಪದ ಉಳಿಸಿ ಬೆಳೆಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. 2023–24ನೇ ಸಾಲಿನ ಹಾಗೂ 2024–25ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭ ಜರುಗುತ್ತಿರುವುದರಿಂದ ಇದರಲ್ಲಿ ಪ್ರತಿ ವರ್ಷ ತಲಾ 30 ಜನ ಕಲಾವಿದರಿಗೆ ತಲಾ 25 ಸಾವಿರ



ಮತ್ತು ತಜ್ಞ ಪ್ರಶಸ್ತಿಗೆ 50 ಸಾವಿರ ನಿಗದಿಗೊಳಿಸಲಾಗಿದ್ದು, ಅದರಲ್ಲಿ ಸಹ ಐದು ಜನರಿಗೆ ಹಾಗೂ ಪುಸ್ತಕ ಬಹುಮಾನಕ್ಕೂ ಸಹ 50 ಸಾವಿರ ನಿಗದಿ ಮಾಡಲಾಗಿದೆ. ಅಲ್ಲಿ ಇಬ್ಬರಿಗೆ ಬಹುಮಾನ ನೀಡಲಾಗುತ್ತದೆ ಎಂದು ವಿವರಿಸಿದರು. ಬೆಳಿಗ್ಗೆ ಮೆರವಣಿಗೆ ಕಾರ್ಯಕ್ರಮ ಹಾಗೂ ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ. ಮಧ್ಯಾಹ್ನ 2 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ. ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ ಖಂಡ್ರೆ ಸಮಾರಂಭ ಉದ್ಘಾಟಿಸುವರು. ಹಿಂದುಳಿದ ವರ್ಗಗಳ ಕಲ್ಯಾಣ ಮಂತ್ರಿಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ ತಂಗಡಗಿ ಪ್ರಶಸ್ತಿ ಪ್ರದಾನ ಮಾಡುವರು. ರಾಜ್ಯದ ಪೌರಾಡಳಿತ ಸಚಿವ ರಹಿಮ್ ಖಾನ್ ಅಧ್ಯಕ್ಷತೆ ವಹಿಸುವರು. ಸಂಸದ ಸಾಗರ ಖಂಡ್ರೆ ಪುಸ್ತಕ ಬಿಡುಗಡೆ ಮಾಡುವರು. ತಾನು ಪ್ರಾಸ್ತಾವಿಕ ಮಾತನಾಡಲಿದ್ದು, ಔರಾದ್ ಶಾಸಕ ಪ್ರಭು ಚವ್ಹಾಣ, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಹುಮನಾಬಾದ್ ಶಾಸಕ ಡಾ.ಸಿದ್ಧಲಿಂಗಪ್ಪ ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ, ಶಶೀಲ.ಜಿ.ನಮೋಷಿ, ಭೀಮರಾವ ಪಾಟೀಲ, ಡಾ.ಎಂ.ಜಿ ಮುಳೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ.ಬಿ.ನಾರಾಯಣರಾವ, ನಗರ ಸಭೆ ಅಧ್ಯಕ್ಷ ಮಹಮ್ಮದ್ ಗೌಸ್, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಗಿರೀಶ ದಿಲಿಪ ಬದೋಲೆ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪ್ರದಿಪ ಗುಂಟಿ, ಅಕಾಡೆಮಿಯ ಸದಸ್ಯರು ಹಾಗೂ ಕಾರ್ಯಕ್ರಮದ ಸಂಚಾಲಕರಾದ ವಿಜಯಕುಮಾರ ಸೋನಾರೆ ಸೇರಿದಂತೆ ಇತರೆ ಸದಸ್ಯರು, ಜಿಲ್ಲೆಯ ಇತರೆ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಆದ ಕಾರಣ ಜಿಲ್ಲೆಯ ಎಲ್ಲ ಕನ್ನಡಪರ ಸಂಘಟನೆಗಳು, ದಲಿತಪರ ಸಂಘಟನೆಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಶಿವಪ್ರಸಾದ ಕೋರಿದರು.

ಅಕಾಡೆಮಿಯ ಸದಸ್ಯ ಸಂಚಾಲಕ ವಿಜಯಕುಮಾರ ಸೋನಾರೆ ಮಾತನಾಡಿ, ಜಾನಪದವನ್ನು ಉಳಿಸಿ ಬೆಳೆಸುವುದಕ್ಕಾಗಿ ಹಾಗೂ ಮುಂದಿನ ಪೀಳಿಗೆಗೆ ತಿಳಿಸುವುದಕ್ಕಾಗಿ ಈ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಕಾರ್ಯಕ್ರಮಕ್ಕೆ ರಾಜ್ಯದ ಹಲವು ಜಿಲ್ಲೆಗಳಿಂದ ಕಲಾವಿದರು ಆಗಮಿಸುತ್ತಿದ್ದಾರೆ. ಅವರೆಲ್ಲರಿಗೂ ಊಟ ವಸತಿ ಹಾಗೂ ಗೌರವ ಸಂಭಾವನೆ ನೀಡಲಾಗುತ್ತಿದೆ. ಕಾರ್ಯಕ್ರಮದಲ್ಲಿ ಜಾನಪದ ಶೈಲಿಯ ಆಹಾರದ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ರಾಮ ಶಿಂಧೆ ಹಾಜರಿದ್ದರು.

# ಅರಶದ್ ಅಲಿ ಒಡನಾಟ ಸ್ಮರಿಸಿದ ಸಚಿವ ರಹೀಂಖಾನ್



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 10 : ಹೃದಯಾಘಾತದಿಂದ ನಿಧನರಾದ ವಿಧಾನ ಪರಿಷತ್ ಮಾಜಿ ಸದಸ್ಯ ಕಾಜಿ ಅರಶದ್ ಅಲಿ ಅವರ ನಗರದ ನಿವಾಸಕ್ಕೆ ಪೌರಾಡಳಿತ ಹಾಗೂ ಹಜ್ ಸಚಿವ ರಹೀಂಖಾನ್ ಭಾನುವಾರ ಭೇಟಿ ನೀಡಿದರು.

ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ ಅವರು, ಕಾಜಿ ಅರಶದ್ ಅಲಿ ಅವರೊಂದಿಗಿನ ತಮ್ಮ ಒಡನಾಟವನ್ನು ಸ್ಮರಿಸಿದರು.

ಅರಶದ್ ಅಲಿ ಅವರು ತಮಗೆ ಮಾರ್ಗದರ್ಶನ ಮಾಡುತ್ತಿದ್ದರು. ಪತ್ರಕರ್ತರಾಗಿ, ವಿಧಾನ ಪರಿಷತ್ ಸದಸ್ಯರಾಗಿ ಅವರು ಜಿಲ್ಲೆಗೆ ನೀಡಿದ ಕೊಡುಗೆ ಅಪಾರ. ಕರ್ನಾಟಕ ಪಶು ವೈದ್ಯಕೀಯ ವಿಶ್ವವಿದ್ಯಾಲಯ, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಸ್ಥಾಪನೆಯಲ್ಲಿ ಅವರ ಪಾತ್ರ ಮುಖ್ಯವಾಗಿದೆ ಎಂದು ತಿಳಿಸಿದರು. ಅರಶದ್ ಅಲಿ ಅವರ ಪುತ್ರ ಕಾಜಿ ಮೊಯಿದ್ ಅಲಿ, ಸಹೋದರ ಕಾಜಿ ಅಲಿಯೊದ್ದಿನ್ (ಅಲಿಬಾಬಾ), ನಗರಸಭೆ ಅಧ್ಯಕ್ಷ ಮಹಮ್ಮದ್ ಗೌಸ್, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಮೃತರಾವ್ ಚಿಮಕೋಡೆ, ನಗರಸಭೆ ಮಾಜಿ ಸದಸ್ಯ ಮನ್ಸೂರ್ ಅಹಮ್ಮದ್ ಖಾದ್ರಿ, ಫಹೀಮ್ ಶೇರಿಕಾರ್ ಇದ್ದರು.

# ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾಗಿ ಸಂಜಯ್ ಜಾಗೀರದಾರ್

ಮಲ್ಲಮ್ಮ ನುಡಿ ವಾರ್ತೆ



ಬೀದರ.ಮಾ.10: ಕರ್ನಾಟಕ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮ ನಿಯಮಿತದ ಉಪಾಧ್ಯಕ್ಷರಾಗಿ ಸಂಜಯ್ ಜಾಗೀರದಾರ್ ಅವರನ್ನು ರಾಜ್ಯ ಸರ್ಕಾರ ನೇಮಿಸಿದೆ. ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಹಾಗೂ ವಕ್ಫ್ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಎಸ್. ಏಜಾಸ್ ಪಾಷ ಈ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಈ ನೇಮಕವು ಮುಂದಿನ ಆದೇಶದವರೆಗೆ ಜಾರಿಯಲ್ಲಿರಲಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ. ಜಾಗೀರದಾರ್, ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದಾರೆ. ಎರಡೂವರೆ ದಶಕದಿಂದ ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ವಿದ್ಯಾರ್ಥಿ ಕಾಂಗ್ರೆಸ್, ಯುವ ಘಟಕ, ಜಿಲ್ಲಾ ಘಟಕ, ಕೆಪಿಸಿಸಿಯ ವಿವಿಧ ಹುದ್ದೆಗಳಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರ ಪಕ್ಷ ನಿಷ್ಠೆಗೆ ಈಗ ಉನ್ನತ ಹುದ್ದೆ ಒಲಿದಿದೆ.

ತಮ್ಮನ್ನು ನಿಗಮಕ್ಕೆ ನೇಮಕಗೊಳಿಸಿದ್ದಕ್ಕೆ ಜಾಗೀರದಾರ್ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಸಚಿವರಾದ ಕೆ.ಜೆ. ಜಾರ್ಜ್, ಪ್ರಿಯಾಂಕ್ ಖರ್ಗೆ, ಈಶ್ವರ ಖಂಡ್ರೆ, ರಹೀಂಖಾನ್, ಮಾಜಿ ಸಚಿವ ರಾಜಶೇಖರ ಪಾಟೀಲ ಹುಮನಾಬಾದ್, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ, ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲೆಯ ಎಲ್ಲ ಮುಖಂಡರಿಗೆ ಕೃತಜ್ಞತೆ ತಿಳಿಸಿದ್ದಾರೆ.

# ಮಣ್ಣಿಗೆ, ಮದುವೆಗೆ ಹೋದಲ್ಲೆಲ್ಲ ಅಮರ ಖಂಡ್ರೆ ನಮ್ಮನ್ನು ಜೈಲಿಗೆ ಹಾಕುವುದಾಗಿ ಹೆದರಿಸುತ್ತಿದ್ದಾರೆ: ಡಿ.ಕೆ ಸಿದ್ರಾಮ ಆರೋಪ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 10 : ನಾನು ಮದುವೆಗೆ ಹೋಗಲಿ, ಮಣ್ಣಿಗೆ ಹೋಗಲಿ ಎಲ್ಲ ಕಡೆ ಅವನನ್ನು ಜೈಲಿಗೆ ಹಾಕಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಹಾಗೇ ಹೇಳುವವರು ಸಾಚಾ ಇರಬೇಕಲ್ಲ. ಬಿಎಸ್ಎಸ್‌ಕೆ ಮೇಲೆ ಖಂಡ್ರೆ ಪರಿವಾರ ಮೇಲೆ ಬಂದಿದೆ ಎಂಬುದನ್ನು ಅವರು ಮರೆಯಬಾರದು ಎಂದು ಎನ್ಎಸ್ಎಸ್‌ಕೆ ಅಧ್ಯಕ್ಷ ಡಿ.ಕೆ. ಸಿದ್ರಾಮ ಹೇಳಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್ಎಸ್ಎಸ್‌ಕೆ ಸದ್ಯ ಜಿಲ್ಲೆಯಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ. ಈಗಲೂ ಎಲ್ಲ ಯಂತ್ರಗಳು ಸುಸ್ಥಿತಿಯಲ್ಲಿವೆ. ಉತ್ತಮ ಕಾರ್ಮಿಕರಿದ್ದಾರೆ. ಸಾಲದ ಹೊರೆ ಬಿಟ್ಟರೆ ಬೇರೇನೂ ಸಮಸ್ಯೆ ಇಲ್ಲ. ಆದರೆ, ರಾಜಕೀಯ ಕಾರಣಕ್ಕಾಗಿ ಸಂಸ್ಥೆ ಹಾಳುಗೆಡವಲು ಯತ್ನಿಸುತ್ತಿದ್ದಾರೆ ಎಂದು ಆರೋಪ ಮಾಡಿದರು. ರಾಜಕೀಯ ದುರುದ್ದೇಶದಿಂದ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಮರ್ ಖಂಡ್ರೆಯವರು ನನಗೆ ನಿತ್ಯ ಕಾಟ ಕೊಡುತ್ತಿದ್ದಾರೆ. ಶನಿವಾರವಿರಲಿ, ಭಾನುವಾರವಿರಲಿ ಅಧಿಕಾರಿಗಳನ್ನು ಕಳಿಸಿ ಅವರ ಮೂಲಕ ಮಾನಸಿಕ ಹಿಂಸೆ ಕೊಡುತ್ತಿದ್ದಾರೆ ಎಂದು ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ (ಎನ್ಎಸ್ಎಸ್‌ಕೆ) ಅಧ್ಯಕ್ಷ ಡಿ.ಕೆ. ಸಿದ್ರಾಮ ಆರೋಪಿಸಿದರು.

ವೈಯಕ್ತಿಕ ಹಗೆತನಕ್ಕೆ ಸಂಸ್ಥೆ ಹಾಳು ಮಾಡುತ್ತಿದ್ದಾರೆ. ಪ್ರಸಕ್ತ ಸಾಲಿನ ಕಬ್ಬು ನುರಿಸುವ ಹಂಗಾಮು ಮುಗಿದಿದ್ದು, ?20



ಕೋಟಿ ನಿವ್ವಳ ಆದಾಯ ಬಂದಿದೆ. ಕಾರ್ಖಾನೆಗೆ ಕಬ್ಬು ಪೂರೈಸಿದ ರೈತರ ?59 ಕೋಟಿ ಕೊಡಬೇಕಿದೆ. ರೈತರಿಗೆ ಪಾವತಿಸಿದ ನಂತರ ಮಿಕ್ಕುಳಿದ ಹಣದಲ್ಲಿ ಸಾಲ ತೀರಿಸುತ್ತೇವೆ. ರೈತರ ಹಿತಕ್ಕಾಗಿ ಜೈಲಿಗೆ ಹೋಗಲು ಸಿದ್ಧ. ನಾನು ಯಾವುದೇ ಅವ್ಯವಹಾರ ಮಾಡಿಲ್ಲ. ಎಂಜಿಎಸ್ಎಸ್‌ಕೆ ಮೇಲೂ ಸಾಲ ಇದೆ. ಅವರಿಗೆ ಯಾರೂ ಕೇಳುತ್ತಿಲ್ಲ. ಸಾಲಕ್ಕಾಗಿ ನಮ್ಮ ಬಳಿ 400 ಜನ ಕಳಿಸಿ, ಹೆದರಿಸಿದ್ದಾರೆ. ಬರುವ ಅಕ್ಟೋಬರ್‌ನಲ್ಲಿ ಎನ್ಎಸ್ಎಸ್‌ಕೆಗೆ ಚುನಾವಣೆ ನಡೆಯಲಿದೆ. ಹೆದರಿಸಿ ನಾಗಮಾರಪಳ್ಳಿ ಅವರ ಪೆನಾಲ್ ಸೋಲಿಸಲು ಷಡ್ಯಂತ್ರ ನಡೆದಿದೆ. ಆದರೆ, ಅದಕ್ಕಾಗಿ ಚಿಲ್ಲರೆ ರಾಜಕಾರಣ ಮಾಡಬಾರದು ಎಂದರು. ?669 ಕೋಟಿ ಸಾಲಕ್ಕೆ ?809 ಕೋಟಿ ಮೌಲ್ಯದ ಆಸ್ತಿ ಭದ್ರತೆಯಾಗಿ ನೀಡಿದ್ದರೂ ವಿನಾಕಾರಣ ಹೆದರಿಸಿ ಸಂಸ್ಥೆ ಎನ್ಎಸ್ಎಸ್‌ಕೆ ಹಾಳುಗೆಡವಲಾಗುತ್ತಿದೆ. ಗೋದಾಮಿನ ಕೀ ತೆಗೆದುಕೊಂಡು ರೈತರ ಬಾಕಿ ಸಾಲ ಪಾವತಿಸಲು ಆಗುವುದಿಲ್ಲ. ರೈತರು ಹಾಗೂ ಕಾರ್ಖಾನೆಯ ವಿರುದ್ಧ ನಿರ್ಣಯ ಕೈಗೊಂಡರೆ, ಕಿರುಕುಳದಿಂದ ಕಾರ್ಖಾನೆ ಮುಚ್ಚಿಹೋದರೆ ಅದಕ್ಕೆ ಅವರೇ ಹೊಣೆ. ಅವಕಾಶ ಕೊಟ್ಟರೆ ಪ್ರತಿವರ್ಷ ?20 ಕೋಟಿ ಸಾಲ ಮರುಪಾವತಿಸುವೆ. ಉಸ್ತುವಾರಿ ಸಚಿವರು ಮಧ್ಯಸ್ಥಿಕೆ ವಹಿಸಬೇಕು ಎಂದರು.

ಡಬಲ್ ಗೇಮ್, ಟ್ರಿಪಲ್ ಗೇಮ್ ರಾಜಕಾರಣ ಮಾಡಿ ಡಿಸಿಸಿ ಬ್ಯಾಂಕ್, ನಾರಂಜಾ ಕಾರ್ಖಾನೆ ಹಾಳಾಗಬಾರದು. ?1 ಸಾವಿರ ಕೋಟಿ ರಾಜ್ಯ ಸರ್ಕಾರದಿಂದ ತಂದರೆ ಇವುರೆಡೂ ಸಂಸ್ಥೆಗಳನ್ನು ಉಳಿಸಬಹುದು. ಸಹಕಾರ ಸಚಿವರೂ ಆದ ಕೇಂದ್ರ ಗೃಹಸಚಿವ ಅಮಿತ್ ಶಾ ವರು ಕೇಂದ್ರದಿಂದ ಸಾಲ ಕೊಡಲು ಮುಂದೆ ಬಂದಿದ್ದಾರೆ. ಆದರೆ, ರಾಜ್ಯ ಸರ್ಕಾರ ಒಪ್ಪಿಗೆ ಕೊಡಬೇಕಿದೆ ಎಂದರು. ಖಂಡ್ರೆ ಪರಿವಾರದವರೇ ಮಂತ್ರಿ, ಎಂಪಿ, ಡಿಸಿಸಿ ಬ್ಯಾಂಕ್ ಅಧ್ಯಕ್ಷರಿದ್ದಾರೆ. ಹೀಗಿದ್ದರೂ ಎಲ್ಲ ಹಾಳಾಗುತ್ತಿದೆ. ಡಿಸಿಸಿ ಬ್ಯಾಂಕಿನಲ್ಲಿ ದಿವಂಗತ ಗುರುಪಾದಪ್ಪ ನಾಗಮಾರಪಳ್ಳಿ ಅವರ ಮೂರ್ತಿ ಎದುರು ನಿತ್ಯ ದೀಪ ಉರಿಯುತ್ತಿತ್ತು. ಅದನ್ನು ತೆಗೆದು ಹಾಕಿದ್ದಾರೆ. ಒಂದು ದಿನವೂ ಕಸ ಹೊಡೆಯುತ್ತಿಲ್ಲ. ದೇವರು ನಿಮಗೆ ಮಾಫಿ ಮಾಡಲ್ಲ ಎಂದರು. ಉಮಾಕಾಂತ ನಾಗಮಾರಪಳ್ಳಿ ಅವರು ರಾಜಕೀಯಕ್ಕೆ ಬರುವುದು ಗ್ಯಾರಂಟಿ. ನಾಗಮಾರಪಳ್ಳಿ ಪರಿವಾರದ ಒಂದು ಕುಡಿ ಬೆಳೆಯಬೇಕೆಂಬ ತುಡಿತ ಜಿಲ್ಲೆಯ ಜನತೆಗಿದೆ. ಸಮಯ ಬಂದಾಗ ರಾಜಕೀಯ ಪ್ರವೇಶಿಸುವುದು ಘೋಷಿಸುತ್ತಾರೆ ಎಂದು ಎನ್ಎಸ್ಎಸ್‌ಕೆ ಅಧ್ಯಕ್ಷ ಡಿ.ಕೆ. ಸಿದ್ರಾಮ ಹೇಳಿದರು. ನಾಗಮಾರಪಳ್ಳಿ ಬೆಂಬಲಿಗರು ಇತ್ತೀಚೆಗೆ ಭಾಲ್ಕಿಯಲ್ಲಿ ಭರ್ಜರಿಯಾಗಿ ಜನ್ಮದಿನ ಆಚರಿಸಲು ಯೋಜನೆ ರೂಪಿಸಿದ್ದರು. ಆದರೆ, ಉಮಾಕಾಂತ ಅವರ ಮನವಿ ಮೇರೆಗೆ ಕೈಬಿಟ್ಟಿದ್ದಾರೆ. ನಾಗಮಾರಪಳ್ಳಿ ಕುಟುಂಬಕ್ಕಾಗಿ ನಾನು ಜೀವ ಕೊಡಲು ಸಿದ್ಧ. ಇನ್ನು, ಭಾಲ್ಕಿ ಕ್ಷೇತ್ರ ಅವರಿಗೆ ಬಿಟ್ಟುಕೊಡುವುದಿಲ್ಲವೇ ಎಂದರು.

ಬಿಎಸ್ಎಸ್‌ಕೆ ಹರಾಜು ಪ್ರಕ್ರಿಯೆ ತಡೆಯಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ, ಸುಭಾಷ ಗಂಗಾ ನಂತರ ಬಿಎಸ್ಎಸ್‌ಕೆಯನ್ನು ಬಸವರಾಜ ಎಂಬುವರಿಗೆ ಕೊಟ್ಟಿದ್ದಾರೆ. ಈ ಬಗ್ಗೆ ಡಿಸಿಸಿ ಬ್ಯಾಂಕಿನಲ್ಲಿ ಗೊತ್ತುವಳಿ ಅಂಗೀಕರಿಸಲಾಗಿದೆ. ಲೇಔಟ್ ನಿರ್ಮಿಸಿ, ನಿವೇಶನಗಳನ್ನು ಮಾಡಿ ಮಾರಾಟಕ್ಕೆ ಸಿದ್ಧತೆ ನಡೆಸಲಾಗಿದೆ ಎಂದು ಎನ್ಎಸ್ಎಸ್‌ಕೆ ಅಧ್ಯಕ್ಷ ಡಿ.ಕೆ. ಸಿದ್ರಾಮ ಆರೋಪಿಸಿದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಮರ್ ಖಂಡ್ರೆ ಅವರನ್ನು ಸಚಿವರು ನಿಯಂತ್ರಿಸಬೇಕು. ಇಲ್ಲವಾದರೆ ಅವರಿಗೆ ಕೆಟ್ಟ ಹೆಸರು ಬರುತ್ತದೆ. ಅವರ ರಾಜಕೀಯಕ್ಕೂ ಕುತ್ತು ಬರುತ್ತದೆ ಎಂದು ಎಚ್ಚರಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಉಮಾಕಾಂತ ನಾಗಮಾರಪಳ್ಳಿ ಮಾತನಾಡಿ, ರಾಜಕೀಯ ನಿಂತ ನೀರಲ್ಲ. ಚುನಾವಣೆ ಸಮೀಪಿಸಿದಾಗ ಅದರ ಬಗ್ಗೆ ಸೂಕ್ತ ನಿರ್ಧಾರಕ್ಕೆ ಬರುವೆ ಎಂದರು. ಡಿಸಿಸಿ ಬ್ಯಾಂಕ್ ಪರಿಸ್ಥಿತಿ ಸದ್ಯ ಸರಿಯಿಲ್ಲ. ರೈತರಿಗೆ ಸಾಲ ಕೊಡುತ್ತಿಲ್ಲ. ಚಿನ್ನಾಭರಣಗಳ ಮೇಲಿನ ಸಾಲ ಕೊಡುವ ವ್ಯವಸ್ಥೆ ಸರಿಯಿಲ್ಲ. ಹಿರಿಯರು ಕಟ್ಟಿದ ಸಂಸ್ಥೆ ಹಾಳಾಗುತ್ತಿದೆ. ನಾನು ಸೇರಿದಂತೆ ನಮ್ಮ ಪೆನಾಲ್‌ನವರು ಸಂಪೂರ್ಣ ಬೆಂಬಲ ಕೊಡುತ್ತಿದ್ದರೂ ಬ್ಯಾಂಕಿನ ಹಿತಕ್ಕಾಗಿ ಯಾವುದೇ ಸೂಕ್ತ ನಿರ್ಧಾರ ಕೈಗೊಳ್ಳುತ್ತಿಲ್ಲ ಎಂದು ಡಿಸಿಸಿ ಬ್ಯಾಂಕಿನ ನಿರ್ದೇಶಕ ಉಮಾಕಾಂತ ನಾಗಮಾರಪಳ್ಳಿ ಆರೋಪಿಸಿದರು. ನಾನು ಬ್ಯಾಂಕಿನ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾಗ ಬ್ಯಾಂಕ್ ನಿರಂತರವಾಗಿ ಆದಾಯದ ಹಾದಿಯಲ್ಲಿತ್ತು. ಈಗ ಅದಿಲ್ಲ. ಬ್ಯಾಂಕ್ ಮೇಲೆ ?118 ಕೋಟಿ ಸಾಲ ಆಗಿದೆ. ರಾಜಕೀಯ ದುರುದ್ದೇಶದಿಂದ, ನನ್ನ ಹೆಸರಿಗೆ ಕಪ್ಪು ಚುಕ್ಕೆ ತರಲು ಯತ್ನಿಸಲಾಗುತ್ತಿದೆ. ಉಸ್ತುವಾರಿ ಸಚಿವರು ಸಹಕಾರಿ ಕ್ಷೇತ್ರದಲ್ಲಿ ಪ್ರವೇಶಿಸಿ ರಾಜಕೀಯ ಬೆರೆಸಬಾರದು. ಇತ್ತೀಚೆಗೆ ನಡೆದ ಚುನಾವಣೆ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ನನ್ನ ಮೇಲೆ ಎಫ್ಐಆರ್ ದಾಖಲಿಸಿದ್ದರು ಎಂದು ಆರೋಪಿಸಿದರು.

ಎನ್ಎಸ್ಎಸ್‌ಕೆ ಉಪಾಧ್ಯಕ್ಷ ಬಾಲಾಜಿ ಚಂದ್ರಶೇಖರ, ನಿರ್ದೇಶಕರಾದ ರಾಜಕುಮಾರ ಕಣಜಿ, ಸಂಗಮೇಶ ಪಾಟೀಲ, ಸೀತಾರಾಮ ನಾಗಶೆಟ್ಟಿ, ಸಿದ್ರಾಮಪ್ಪ, ವೀರಶೆಟ್ಟಿ ಪಟ್ನೆ, ಝರೆಪ್ಪ ಮಮದಾಪುರೆ, ಶೋಭಾವತಿ, ಶರಣಪ್ಪ, ಶಶಿ ಪಾಟೀಲ ಹಾಜರಿದ್ದರು.

# 26ರಂದು ಚೌಡಾರ ಕೆರೆ ಸತ್ಯಾಗ್ರಹ ನೆನಪಿಗಾಗಿ ಬಹಿರಂಗ ಸಮಾವೇಶ: ದೇವೇಂದ್ರ ಸೋನಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 10 : 1927 ರ ಮಾರ್ಚ್ 20 ರಂದು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಚೌಡಾರ್ ಕೆರೆಯ ನೀರು ಕುಡಿಯಲು ಉಪಯೋಗಿಸುವ ಕುರಿತು ದೊಡ್ಡ ಸತ್ಯಾಗ್ರಹ ಮಾಡಿದ್ದರು. ಈ ಇತಿಹಾಸವನ್ನು ಸ್ಮರಿಸಲು ಹಾಗೂ ಸಾಮಾಜಿಕ ಸಬಲೀಕರಣ ಮಾಡಲು ಇದೇ ತಿಂಗಳ 26 ರಂದು ಸಾಯಂಕಾಲ 5 ಗಂಟೆಗೆ ನಗರದ ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಬಹಿರಂಗ ಸಭೆ ಆಯೋಜಿಸಲಾಗಿದೆ ಎಂದು ಸೇನೆಯ ಗೌರವಾಧ್ಯಕ್ಷರಾದ ದೇವೇಂದ್ರಕುಮಾರ ಸೋನಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಡಾ. ಬಾಬಾ ಸಾಹೇಬ್ ಅವರ ಅವಿರತ ಹೋರಾಟ ಮತ್ತು ತ್ಯಾಗವನ್ನು ಸ್ಮರಿಸುವ ದಿನ ಇದಾಗಿದೆ. ಈ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು, ಸಾಹಿತಿಗಳು, ಕಲಾವಿದರು ಹಾಗೂ ವಿವಿಧ ಸಂಘಟನೆಗಳ ಪ್ರಮುಖರು ಆಗಮಿಸುತ್ತಿದ್ದಾರೆ. ಸಮಾಜದಲ್ಲಿರುವ ಮೌಢ್ಯಾಚರಣೆ, ಅಸಮಾನತೆ ಹೋಗಲಾಡಿಸಲು ಎಲ್ಲರೂ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

ಸೇನೆಯ ಅಧ್ಯಕ್ಷರಾದ ಭರತನಾಗ್ ಕಾಂಬಳೆ ಮಾತನಾಡಿ, ಚೌಡಾರ್ ಕೆರೆ ಸತ್ಯಾಗ್ರಹ ದಿನದ ಸ್ಮರಣೆಗಾಗಿ ಹಮ್ಮಿಕೊಂಡ ಈ ಕಾರ್ಯಕ್ರಮಕ್ಕೆ ಪೂಜ್ಯ ಸಿದ್ಧಬಸವದೇವರು ಯಮಕನಕರಡಿ ಆಗಮಿಸುತ್ತಿದ್ದಾರೆ. ಜೊತೆಗೆ ಸೇನೆಯ ರಾಷ್ಟ್ರೀಯ ಅಧ್ಯಕ್ಷರಾದ ರಾಜರತನ ಅಂಬೇಡ್ಕರ್ ಅವರು ಈಗಾಗಲೇ ರಿಜರ್ವೇಶನ್ ಮಾಡಿಕೊಂಡಿದ್ದಾರೆ. ಅವರು ಜಿಲ್ಲೆಗೆ ಆಗಮಿಸುತ್ತಿರುವುದು ನಮ್ಮೆಲ್ಲರ ಹೆಮ್ಮೆ ಎಂದು ಹೇಳಿದರು.

ಇದೇ ವೇಳೆ ಪ್ರಮುಖರಾದ ಪ್ರದೀಪ್ ಜಂಜೀರೆ, ದೇವರಾಜ್ ಆರ್ಯ, ಕೃಷ್ಣ ನಾಟೇಕಾರ್, ಸಂಗಪ್ಪಾ ಚಿದ್ರಿ, ತುಕಾರಾಮ ಕರಾಟೆ, ಸಂತೋಷ ಕಾಂಬಳೆ, ಸುಜೀತ್ ಬಡಿಗೇರ್, ಯಲ್ಲೇಶ್ ಮಲ್ಕಾಪುರ, ಆನಂದ ಖಾಶೆಂಪೂರ್, ಸೂರ್ಯಕಾಂತ, ಓಂಪ್ರಕಾಶ್ ಕಾಂಬಳೆ, ರಾಜರತನ ಶಿಂಧೆ, ಸುರೇಶ ಮೋರೆ, ಭಾಗ್ಯಶಾಲ್ ಕಾಂಬಳೆ ಸೇರಿದಂತೆ ಹಲವರು ಪತ್ರಿಕಾ ಗೋಷ್ಟಿಯಲ್ಲಿದ್ದರು.

# ಕೃಷಿ ಪಂಪ್ ಸೆಟ್ ಗಳಿಗೆ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ : ಇಂಧನ ಸಚಿವ ಕೆ.ಜೆ. ಜಾರ್ಜ್

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಮಾ.10: ರಾಜ್ಯದ ರೈತರ ಕೃಷಿ ಪಂಪ್ ಸೆಟ್ ಗಳಿಗೆ ತಾಂತ್ರಿಕ ಸಾಧ್ಯತೆ ಇರುವ ವಿದ್ಯುತ್ ಉಪ ಕೇಂದ್ರಗಳಿಂದ ಹಗಲಿನ ವೇಳೆಯಲ್ಲಿಯೇ ನಿರಂತರ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ. ಉಳಿದ ಕಡೆ ಹಗಲು 4 ಗಂಟೆ ಹಾಗೂ ರಾತ್ರಿ 3 ಗಂಟೆಗಳ ಕಾಲ ಸೇರಿಸಿ ಪ್ರತಿ ದಿನ 7 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ತಿಳಿಸಿದರು.

ಇಂದು ವಿಧಾನ ಪರಿಷತ್ತಿನ ಪ್ರಶ್ನೋತ್ತರ ಕಲಾಪದ ವೇಳೆ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರ ಚುಕ್ಕೆ ರುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು. ರಾಜ್ಯದಲ್ಲಿ ಸದ್ಯ ವಿದ್ಯುತ್ ಗೆ ಯಾವುದೇ ಸಮಸ್ಯೆ ಇರುವುದಿಲ್ಲ. ರಾಜ್ಯದಲ್ಲಿ 2024–25ರಲ್ಲಿ ಅಂದಾಜಿಸಲಾದ ಬಳಕೆಯ ಬೇಡಿಕೆಯ ಪ್ರಮಾಣ 92087 ಮೆಗಾ ಯುನೀಟ್ ಇದ್ದು, 2024ನೇ ಏಪ್ರಿಲ್ ನಿಂದ 2024ನೇ ಡಿಸೆಂಬರ್ ಅಂತ್ಯದ ವರೆಗೆ (ಸರಾಸರಿ ದಿನವಹಿ ಬಳಕೆ) 235 ಮೆಗಾ ವ್ಯಾಟ್ ಯುನಿಟ್ ಗಳಾಗಿರುತ್ತದೆ. ರಾಜ್ಯವು ಈಗಾಗಲೇ 18,365 ಮೆಗಾ ವ್ಯಾಟ್‌ನ ಗರಿಷ್ಠ ಬೇಡಿಕೆಯನ್ನು ಪೂರೈಸಿದ್ದು, ಈ ಪ್ರಮಾಣವು 19000 ಮೆಗಾವ್ಯಾಟ್‌ಗೆ ಏರಿಕೆಯಾಗುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ನ್ನು ಪೂರೈಸಿಲಾಗುತ್ತಿದೆ. ರಾಜ್ಯದಲ್ಲಿ ಉತ್ಪಾದನೆಯು ಕಡಿಮಾದಲ್ಲಿ ಬ್ಯಾಂಕಿಂಗ್ ಸಿಸ್ಟಮ್‌ನಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ವಿದ್ಯುತ್‌ನ್ನು ಪಡೆದು ಬೇಡಿಕೆಯನ್ನು ಪೂರೈಸಲಾಗುತ್ತದೆ. ಈ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿದ್ದು, ರಾಜ್ಯದ ವಿದ್ಯುತ್ ಜಲಾಶಯಗಳಲ್ಲಿ ನೀರಿನ ಲಭ್ಯತೆಯೂ ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಉತ್ತಮವಾಗಿದೆ. ಬೇಸಿಗೆಯಲ್ಲಿ ಏರಿಕೆಯಾಗುವ ವಿದ್ಯುತ್ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡು ಕೊರತೆ ನೀಗಿಸಲು ವಿದ್ಯುತ್ ವಿನಿಮಯ ಕೇಂದ್ರಗಳಿಂದ ದಿನವಹಿ ಆಧಾರದ ಮೇಲೆ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಖರೀದಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಅರಣ್ಯ ಪ್ರದೇಶದ ಮೂಲಕ ಹಾದು ಹೋಗುವ ಕೃಷಿ ಫೀಡರ್ ಗಳಿಗೆ ಹಗಲಿನ ವೇಳೆಯಲ್ಲಿಯೇ 7 ಗಂಟೆಗಳ ಕಾಲ ನಿರಂತರವಾಗಿ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಅನಿವಾರ್ಯ ಸಂದರ್ಭಗಳಲ್ಲಿ ವಿದ್ಯುತ್ ಜಾಲದಲ್ಲಿ ಅಡಚಣೆಯಾದಾಗ ಮಾತ್ರ ಅಲ್ಪ ಪ್ರಮಾಣದಲ್ಲಿ ವಿದ್ಯುತ್ ಕಡಿತ ಮಾಡಲಾಗುತ್ತದೆ. ಎಂದು ತಿಳಿಸಿದರು.

## ಜಿಲ್ಲೆಗೆ ಚೊಂಬು ನೀಡಿದ ದಾಖಲೆಯ ಬಜೆಟ್: ಕರವೇ ಜಿಲ್ಲಾಧ್ಯಕ್ಷ ಭೀಮುನಾಯಕ ಆರೋಪ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಅತಿ ಹಿಂದುಳಿದ ಜಿಲ್ಲೆಗೆ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್ ನಲ್ಲಿಯೂ ಹಿಂದುಳಿಸಿದ್ದಲ್ಲದೇ ಯಾದಗಿರಿಗೆ ಚೊಂಬು ಕೊಟ್ಟಿದ್ದಾರೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಟಿ.ಎನ್. ಭೀಮುನಾಯಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಹೇಳಿಕೆ ನೀಡಿರುವ ಅವರು ಅತ್ಯಂತ ಹಿಂದುಳಿದ ಜಿಲ್ಲೆಗಳ ಪೈಕಿಯೇ ಅತಿ ಹಿಂದುಳಿದ ಮಹತ್ವಾಕಾಂಕ್ಷಿ ಜಿಲ್ಲೆಗೆ ಅಗತ್ಯವಿರುವ ಬೇಡಿಕೆಗಳನ್ನು ಪರಿಗಣಿಸಿ ಈಡೇರಿಸಬೇಕಾದ ಸಿಎಂ ದಿವ್ಯ ನಿರ್ಲಕ್ಷ್ಯ ತೋರಿದ್ದಾರೆ ಎಂದು ಆಪಾದಿಸಿದ್ದಾರೆ.

ಶೈಕ್ಷಣಿಕವಾಗಿ ಅತಿ ಹಿಂದುಳಿದಿರುವ ಜಿಲ್ಲೆಗೆ ಎಂಜಿನಿಯರಿಂಗ್ ಕಾಲೇಜು ಘೋಷಣೆಯಾಗುತ್ತದೆ ಎಂಬ ನಿರೀಕ್ಷೆ ಈ ಬಾರಿಯೂ ಹುಸಿಯಾಗಿದೆ. ಜಿಲ್ಲೆಯ ಜನಪ್ರತಿನಿಧಿಗಳು, ಶಾಸಕರು, ಸಚಿವರು, ಸಂಸದರು ಜಿಲ್ಲೆಯ ಬೇಡಿಕೆಗಳನ್ನು ಸಮರ್ಥವಾಗಿ ಮಂಡಿಸದೇ ನಿರ್ಲಕ್ಷ್ಯ ವಹಿಸಿದ್ದಾರೆ.

ನೆರೆಯ ಜಿಲ್ಲೆಯ ಶಾಸಕರು ಸರ್ಕಾರದ ಮೇಲೆ ಒತ್ತಡ ತಂದು ಕೆಲಸ ಮಾಡಿಸಿಕೊಂಡಿದ್ದರೆ ಜಿಲ್ಲೆಯಲ್ಲಿನ ಮೂವರು ಆಡಳಿತಾರೂಢ ಪಕ್ಷದ ಶಾಸಕರೇ ಇದ್ದರೂ ನಿರ್ಲಕ್ಷ್ಯ ಮಾಡಿದ್ದಾರೆ, ಅತ್ತ ಸರ್ಕಾರ ಜಿಲ್ಲೆಗೆ ಮಲತಾಯಿ ಧೋರಣೆ ಅನುಸರಿಸಿ ಅನ್ಯಾಯ ಮಾಡಿದೆ ಎಂದು ಆರೋಪಿಸಿದ್ದಾರೆ.

ಬಜೆಟ್ ನಲ್ಲಿ ಈಗಾಗಲೇ ಕಾರ್ಯಾರಂಭ ಮಾಡಿದ ಕೆಲಸಗಳನ್ನು ಮತ್ತೆ ತೋರಿಸಿ ಸಾಧನೆ ಎಂಬಂತೆ ಬಿಂಬಿಸಿರುವುದು ಅತ್ಯಂತ ಕಳಪೆ ಬಜೆಟ್ ಎನ್ನಲು ಸಾಕ್ಷಿಯಾಗಿದೆ. ಕೆಕೆಆರ್‌ಡಿಬಿಯಿಂದ ಆರಂಭವಾಗಿರುವ ಕೆಲಸಗಳು, ಈಗಾಗಲೇ ತಿಂಗಳುಗಳ ಹಿಂದೆಯೇ ಉದ್ಘಾಟನೆ ಮಾಡಿ ಹೋಗಿರುವ ನರ್ಸಿಂಗ್ ಕಾಲೇಜು ಕೊಟ್ಟಂತೆ ಬಿಂಬಿಸಿರುವುದು ತೀರ ಬಾಲಿಷ ಸಂಗತಿಯಾಗಿದೆ ಎಂದು ಅವರು ಟೀಕಿಸಿದ್ದಾರೆ.

## ಕಲ್ಯಾಣ ಕರ್ನಾಟಕ ಶಿಕ್ಷಣ ಮತ್ತು ಉದ್ಯೋಗ ಸಂವಿಧಾನದ 371 (ಜೆ) ಸಮರ್ಪಕ ಜಾರಿಗೆ ಅಧಿಕಾರಿಗಳು ಬದ್ಧರಾಗಬೇಕು - ಸಚಿವ ಖರ್ಗೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಮಾರ್ಚ್ 10–ಕಲ್ಯಾಣ ಕರ್ನಾಟಕ ಭಾಗದ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಸಂವಿಧಾನದ ಅನುಚ್ಛೇದ 371 (ಜೆ) ಅಡಿ ಶಿಕ್ಷಣ ಮತ್ತು ಉದ್ಯೋಗಕ್ಕೆ ಕಲ್ಪಿಸಿರುವ ಮೀಸಲಾತಿ ನಿಯಮಗಳ ಸಮರ್ಪಕ ಜಾರಿ ಮತ್ತು ಅನುಷ್ಠಾನಕ್ಕೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹೆಚ್ಚು ಆಸಕ್ತಿ ವಹಿಸಬೇಕು. ಈ ವಿಷಯದಲ್ಲಿ ಅನಾದರ, ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ವಹಿಸಲಾಗುವುದು. ಪ್ರಗತಿ ಪರಿಶೀಲನಾ ಸಭೆಗಳಿಗೆ ಇಲಾಖಾ ಮುಖ್ಯಸ್ಥರು ಹಾಗೂ ಕಾರ್ಯದರ್ಶಿಗಳಿಗಿಂತ ಮೇಲ್ಪಟ್ಟ ಜವಾಬ್ದಾರಿಯುತ ಅಧಿಕಾರಿಗಳು ಖುದ್ದಾಗಿ ಹಾಜರಾಗಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು 371 (ಜೆ) ಅಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ಮತ್ತು ಸಚಿವ ಸಂಪುಟ ಉಪಸಮಿತಿಯ ವರದಿಗಳ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಭಿವೃದ್ಧಿಯಲ್ಲಿ ತಾರತಮ್ಯ ಹೋಗಲಾಡಿಸುವ ಮಹತ್ವಾಕಾಂಕ್ಷೆಯೊಂದಿಗೆ ಸಂವಿಧಾನದ 371 (ಜೆ) ಅನುಚ್ಛೇದಕ್ಕೆ ತಿದ್ದುಪಡಿ ತಂದು ಕಲ್ಪಿಸಲಾಗಿರುವ ಸಂವಿಧಾನಾತ್ಮಕ ಹಕ್ಕು ಮತ್ತು ಸೌಕರ್ಯಗಳ ಜಾರಿಗೆ ಅಧಿಕಾರಿಗಳು ಅನಾಸಕ್ತಿ ತೋರುತ್ತಿರುವುದನ್ನು ಗಮನಿಸಲಾಗುತ್ತಿದೆ. ಅನೇಕ ಬಾರಿ ನೆನಪೋಲೆ, ಸುತ್ತೋಲೆ ಕಳುಹಿಸಿದರೂ ಕೆಲ ಇಲಾಖೆಗಳ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸದೇ ನಿರ್ಲಕ್ಷಿಸುತ್ತಿರುವುದನ್ನು ಸಚಿವ ಸಂಪುಟ ಉಪಸಮಿತಿ ಗಂಭೀರವಾಗಿ ಪರಿಗಣಿಸಿದೆ. ಇನ್ನು ಮುಂದೆ ಪ್ರತಿ 15 ದಿನಗಳಿಗೊಮ್ಮೆ ಪ್ರಗತಿ ಪರಿಶೀಲನೆ ಸಭೆಗಳನ್ನು ಆಯ್ದ ಇಲಾಖೆಗಳೊಂದಿಗೆ ನಡೆಸಲಾಗುವುದು. ಸಭೆಗೆ ಕಡ್ಡಾಯವಾಗಿ ಸರ್ಕಾರದ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರ ಹಂತದ ಅಧಿಕಾರಿಗಳು ಭಾಗವಹಿಸಬೇಕು. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುವ ಪೊಲೀಸ್ ಮತ್ತು ಇತರೆ ಇಲಾಖೆಗಳು ಕೂಡಲೇ ನೇಮಕಾತಿ ಆದೇಶಗಳನ್ನು ಅಭ್ಯರ್ಥಿಗಳಿಗೆ ನೀಡಿ ಸೇವೆಗೆ ಹಾಜರುಪಡಿಸಿಕೊಳ್ಳಬೇಕು. ಸ್ಥಳೀಯ ಮತ್ತು ಉಳಿಕೆ ಮಾತೃವೃಂದದ ಸಂಯುಕ್ತ ಜೇಷ್ಠತಾ ಪಟ್ಟಿಯನ್ನು ಎಲ್ಲಾ ಇಲಾಖೆಗಳು ಹೊರಡಿಸಬೇಕು. ಈ ವಿಷಯದಲ್ಲಿ ನ್ಯಾಯಲಯದ ಆದೇಶ ಸ್ಪಷ್ಟವಾಗಿದೆ. ಮಾಸಾಂತ್ಯದೊಳಗೆ ಆದೇಶ ಹೊರಡಿಸಿ ಗೊಂದಲ ನಿವಾರಿಸಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಸೂಚಿಸಿದರು.

ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದ ಹುದ್ದೆಗಳ ನೇಮಕಾತಿ ಹಾಗೂ ಮುಂಬಡ್ತಿಗೆ ಸಂಬಂಧಿಸಿದಂತೆ 2023 ರ ಸುತ್ತೋಲೆ ಮಾತ್ರ ಜಾರಿಯಲ್ಲಿದೆ. ಅದಕ್ಕೂ ಹಿಂದಿನ ಎಲ್ಲಾ ಹಳೆಯ ಆದೇಶಗಳನ್ನು ಹಿಂಪಡೆಯಲಾಗಿದೆ. ಅನಗತ್ಯವಾಗಿ ಸ್ಪಷ್ಟೀಕರಣ, ಮಾರ್ಗದರ್ಶನ ಕೋರಿ ಪತ್ರ ಬರೆದು ಕಾಲಹರಣ ಮಾಡಬಾರದು. ಶಾಲಾಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯೊಂದರಲ್ಲಿಯೇ ನೇರ ನೇಮಕಾತಿಗೆ ಸೇರಿದ ಸುಮಾರು 12 ಸಾವಿರ ಹಾಗೂ ಮುಂಬಡ್ತಿಗೆ ಮೀಸಲಿಟ್ಟ ಸುಮಾರು 9 ಸಾವಿರ ಹುದ್ದೆಗಳು ಖಾಲಿ ಇವೆ. ಈಗಾಗಲೇ 5267 ಶಿಕ್ಷಕರ ನೇಮಕಾತಿಗೆ ಕ್ರಮವಹಿಸಲಾಗುತ್ತಿದೆ. ಉಳಿದ 6 ಸಾವಿರ ಹುದ್ದೆಗಳಿಗೂ ನೇರ ನೇಮಕಾತಿ ಮಾಡಿಕೊಳ್ಳಬೇಕು. ಯಾವುದೇ ಇಲಾಖೆಯು ಕಲ್ಯಾಣ ಕರ್ನಾಟಕ ಭಾಗದ ಖಾಲಿ ಹುದ್ದೆಗಳ ನೇಮಕಾತಿಗೆ ಮುನ್ನ ಆರ್ಥಿಕ ಇಲಾಖೆಯ ಸಹಮತಿ ಪಡೆಯುವ ಅಗತ್ಯವಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶವೂ ಕೂಡ ಇದೆ. ಶಿಕ್ಷಣ, ಆರೋಗ್ಯ, ಪೊಲೀಸ್, ಸಾರಿಗೆ, ಇಂಧನ ಸೇರಿದಂತೆ ಅಧಿಕ ಸಂಖ್ಯೆಯಲ್ಲಿ ಖಾಲಿ ಹುದ್ದೆಗಳನ್ನು ಹೊಂದಿರುವ ಇಲಾಖೆಗಳು ನೇಮಕಾತಿಗೆ ತ್ವರಿತ ಕ್ರಮ ವಹಿಸಬೇಕು. ಕಲ್ಯಾಣ ಕರ್ನಾಟಕ ಭಾಗದ ನೇಮಕಾತಿ, ಮುಂಬಡ್ತಿಗೆ ಸಂಬಂಧಿಸಿದ ನ್ಯಾಯಾಲಯ ಪ್ರಕರಣಗಳು ತ್ವರಿತ ವಿಲೇವಾರಿಗೆ ಕಾನೂನು ಸಚಿವರು ಹಾಗೂ ಅಡ್ವೋಕೇಟ್ ಜನರಲ್ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಲಾಗುವುದು ಎಂದರು.

ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಸರ್ಕಾರವು ಕಲ್ಯಾಣ ಕರ್ನಾಟಕ ಭಾಗಕ್ಕೆ ಹೊಸ ಇಂಜಿನಿಯರಿಂಗ್ ಕಾಲೇಜುಗಳು, ವಸತಿ ಶಾಲೆ, ಹಾಸ್ಟೆಲ್‌ಗಳನ್ನು ಮಂಜೂರು ಮಾಡಿದೆ. ಅದಕ್ಕನುಗುಣವಾಗಿ ಹುದ್ದೆಗಳನ್ನು ಸೃಜಿಸಿ ನೇಮಕಾತಿಗೆ ಕ್ರಮವಹಿಸಬೇಕು. ಕಾಲಮಿತಿಯೊಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಅಗತ್ಯವಿರುವ ಎಲ್ಲಾ ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ಕ್ರಮವಹಿಸಬೇಕು. 371 (ಜೆ) ಅಡಿ ಹೊರಡಿಸಿರುವ ಆದೇಶಗಳ ಜಾರಿ ಮತ್ತು ಸಚಿವ ಸಂಪುಟ ಉಪಸಮಿತಿ ಸಭೆಗೆ ಗೈರು ಹಾಜರಾಗುವ ಇಲಾಖೆಗಳ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದರು.

ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಸೇರಿದಂತೆ ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಧಿಕಾರಿಗಳು, ಸರ್ಕಾರದ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು ಮತ್ತಿತರರು ಸಭೆಯಲ್ಲಿ ಹಾಜರಿದ್ದರು.

# ಜಾತ್ರೆಗಳಿಂದ ಸಾಮರಸ್ಯ ಮೂಡಿ, ಐಕ್ಯತೆಗೆ ನಾಂದಿ : ಗಜದಂಡ ಶ್ರೀ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಪ್ರಾಚೀನ ಕಾಲದಿಂದ ಈ ಭರತ ಭೂಮಿಯಲ್ಲಿ ಆಧ್ಯಾತ್ಮಿಕಕ್ಕೆ ಹೆಚ್ಚಿನ ಮಹತ್ವವಿದೆ, ಸಾವಿರಾರು ಮಠ–ಮಾನ್ಯಗಳು ಧಾರ್ಮಿಕ ಚಿಂತನೆಗಳನ್ನು ಸಮಾಜಕ್ಕೆ ನೀಡುವ ಜೊತೆಗೆ ಜಾಗೃತಿ ಮೂಡಿಸಿ, ತ್ರಿವಿಧ ದಾಸೋಹಗಳ ಮೂಲಕ ಪ್ರಗತಿಗೆ ಶ್ರಮಿಸಿವೆ, ಪರಿಣಾಮ ಜನರು ಇನ್ನೂ ಧಾರ್ಮಿಕ ಚಟುವಟಿಕೆಗಳನ್ನು ಆಚರಿಸಿಕೊಂಡು ಬರುತ್ತಿರುವ ಮೂಲಕ ಸಮಾಜದಲ್ಲಿ ಸಾಮರಸ್ಯ ಮೂಡಿ, ಐಕ್ಯತೆಗೆ ಶಕ್ತಿ ತುಂಬಿದೆ ಎಂದು ಗುಡಗುಂಟಿ ಅಮರೇಶ್ವರ ಕ್ಷೇತ್ರದ ಶ್ರೀಗಳಾದ ಗಜದಂಡ ಶಿವಾಚಾರ್ಯ ಮಹಾಸ್ವಾಮಿಜಿ ನುಡಿದರು.



ಇಲ್ಲಿಗೆ ಸಮೀಪದ ಸೂಗೂರ (ಎನ್) ಗ್ರಾಮದಲ್ಲಿ ಜರುಗಿದ ಶ್ರೀ ಭೋಜಲಿಂಗೇಶ್ವರ 30ನೇ ವರ್ಷದ ಜಾತ್ರಾ ಮಹೋತ್ಸವ ರಥೋತ್ಸವ ನಂತರ ನಡೆದ ಧರ್ಮ ಸಭೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಅವರು, ಸನಾತನ ಪರಂಪರೆಯಿಂದ ಕಂಡಂತೆ ಸ್ವಾತಂತ್ರ ಪೂರ್ವದಲ್ಲಿ ಬಾಲ ಗಂಗಾಧರ ತಿಲಕ ಅವರು ಗಣೇಶ ಚತುರ್ಥಿ ಉತ್ಸವ ಆರಂಭಿಸುವ ಮೂಲಕ ಜನರಲ್ಲಿ ಒಗ್ಗಟ್ಟು, ದೇಶಾಭಿಮಾನ ಮೂಡಿಸಿದರು.

ಆಯಾ ಕಾಲಕ್ಕೆ ಶರಣರು ತಮ್ಮ ಆಧ್ಯಾತ್ಮಿಕ ಆತ್ಮ ಜ್ಞಾನದ ಮೂಲಕ ಲೋಕವನ್ನು ಉದ್ಧಾರ ಮಾಡಿದ್ದಾರೆ, ಈ ಹಿಂದೆ ಕವಿರತ್ನ ಕಾಳಿದಾಸರಿಗೆ, ಸಾಹಿತ್ಯಪ್ರೀಯ ಭೋಜರಾಜ ಎಂಬ ಆಪ್ತರಿದ್ದರು, ಸಮಾಜಕ್ಕೆ ತಮ್ಮ ಬದುಕು ಅರ್ಪಿಸಿದ ಭೋಜಲಿಂಗೇಶ್ವರರಿಗೆ ಸಹಸ್ರಾರು ಭಕ್ತವೃಂದರಿದ್ದಾರೆ, ಅವರೇ ನಿಜವಾದ ಆಸ್ತಿಯಾಗಿದ್ದಾರೆ ಎಂದು ಹೇಳಿದರು.

ಈ ಪ್ರಪಂಚದಲ್ಲಿ ಎಲ್ಲದಕ್ಕಿಂತ ಮಿಗಿಲಾದದ್ದು ಆತ್ಮಜ್ಞಾನ, ನಿಜವಾದ ಸಾಧು–ಸಂತರು ಜನರಿಂದ ಯಾವುದೇ ಅಪೇಕ್ಷೆಗಳನ್ನು ಪಡೆಯದೇ ಸದಾ ಸಮಾಜದ ಬಗ್ಗೆ ಚಿಂತನೆ ಮಾಡಿ, ಮಾನವೀಯ ಮೌಲ್ಯಗಳನ್ನು ನೀಡಿ, ಅವರ ಕಷ್ಟ ಕಾರ್ಪಣ್ಯಗಳನ್ನು ದೂರ ಮಾಡಿದ್ದಾರೆ, ಪರಿಣಾಮ ಇನ್ನೂ ಗುರುಗಳ ಬಗ್ಗೆ ಭಕ್ತರಲ್ಲಿ ಹೆಚ್ಚು ಗೌರವ ಇರುವುದನ್ನು ಗಮನಿಸುತ್ತೇವೆ, ಭೋಜಲಿಂಗೇಶ್ವರರ ಕೃಪೆಯಿಂದ ಉತ್ತಮ ಮಳೆಯಾಗಿ ರೈತಾಪಿ ವರ್ಗದ ಸಂಕಷ್ಟಗಳು ದೂರವಾಗಿ ಎಲ್ಲರಿಗೂ ಶಾಂತಿ, ನೆಮ್ಮದಿ, ಬದಲಾವಣೆ ಸೃಷ್ಟಿಯಾಗಲಿ ಎಂದು ಹಾರೈಸಿದರು.

ಇಲ್ಲಿ ನಿರ್ಮಾಣ ಮಾಡುತ್ತಿರುವ ಭವ್ಯ ಮಂದಿರ ಎಲ್ಲರನ್ನೂ ಶ್ರದ್ಧಾ–ಭಕ್ತಿಯಿಂದ ಆಕರ್ಷಿಸುತ್ತಿದೆ, ಅದಕ್ಕೆಲ್ಲಾ ಕಾರಣ ನೀವೂ, ಇಲ್ಲಿ ಕೈಗೊಳ್ಳುವ ನಿರಂತರ ಸಮಾಜಮುಖಿ ಚಟುವಟಿಕೆಗಳಿಗೆ ಎಲ್ಲರೂ ಇನ್ನೂ ಮುಂದೆಯೂ ಅಗತ್ಯ ಸಹಾಯ ಸಹಕಾರ ನೀಡಿ, ಕ್ಷೇತ್ರದ ಬೆಳವಣಿಗೆಗೆ ಕಾರಣಿಭೂತರಾಗಿರಿ ಎಂದು ಸಲಹೆ ನೀಡಿದರು.

ಕಾಂಗ್ರೆಸ್ ಪಕ್ಷದ ಯುವ ಮುಖಂಡ ಮಾಣಿಕರಡ್ಡಿ ಕುರಕುಂದಿ ಮಾತನಾಡಿ, ಇಲ್ಲಿರುವ ಮಠ– ಮಾನ್ಯಗಳು ಹಲವಾರು ಕ್ಷೇತ್ರಗಳಲ್ಲಿ ಸರ್ಕಾರದಿಂದ ಮಾಡಲಾಗದಂತ ಮಹತ್ವದ ಕೆಲಸಗಳನ್ನು ಮಾಡಿ, ಜನಮನ್ನಣೆ ಪಡೆದಿವೆ, ಭೋಜಲಿಂಗೇಶ್ವರರ ಪವಾಡಗಳು ಅನೇಕ ಈ ಮಣ್ಣಿನ ಶಕ್ತಿ ದೊಡ್ಡದಿದೆ ಎಂದು ಹೇಳಿದರು.

ಇತ್ತೀಚೆಗೆ ಪ್ರಯಾಗರಾಜ್‌ನಲ್ಲಿ ನಡೆದ ಮಹಾಕುಂಭ –2025 ಧಾರ್ಮಿಕ ಉತ್ಸವ ಇಡೀ ವಿಶ್ವದ ಗಮನ ಸೆಳೆದು ನಾಸ್ತಿಕನನ್ನು ಆಸ್ತಿಕನನ್ನಾಗಿ ಮಾಡಿ, ವಿಶ್ವಕ್ಕೆ ಭಾರತೀಯ ಧಾರ್ಮಿಕ ಸಂಸ್ಕೃತಿ, ಆಚರಣೆಗಳನ್ನು, ಸಾಧು–ಸಂತರ ಸಂದೇಶಗಳನ್ನು ತಲುಪಿಸಿದೆ, ಅದರಲ್ಲೂ ವಿಶೇಷವಾಗಿ ಯುವಜನತೆ ಹೆಚ್ಚಿನ ಸಂಖ್ಯೆಯಲ್ಲಿ ತ್ರಿವೇಣಿ ಸಂಗಮಗೆ ಬೇಟಿ ನೀಡಿ, ಆಧ್ಯಾತ್ಮಿಕ ಒಲವು ಪಡೆದಿರುವುದು ಬದಲಾವಣೆಯ ಸಂಕೇತ ಎಂದರು.

ಇಂದು ನಾವೂ ನಿಸರ್ಗದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಎಚ್ಚರಿಕೆಯೊಂದಿಗೆ ಪರೋಪಕಾರಿಯಾಗಿ ಜೀವನ ನಡೆಸಿದಾಗ ಮಾತ್ರ ಸಾರ್ಥಕ ಬದುಕು ಸಾಧಿಸಬಹುದು ಎಂದು ಅಭಿಪ್ರಾಯಪಟ್ಟರು.

ದಿವ್ಯ ಸಾನಿಧ್ಯವನ್ನು ಗುಳೆದಗುಡ್ಡದ ಒಪ್ಪತ್ತೇಶ್ವರ ಮಠದ ಅಭಿನವ ಒಪ್ಪತ್ತೇಶ್ವರ ಮಹಾಸ್ವಾಮಿಜಿ ವಹಿಸಿ ಆಶೀರ್ವಚನ ನೀಡಿದರು, ದಿವ್ಯ ನೇತೃತ್ವವನ್ನು ಶ್ರೀಮಠದ ಪೀಠಾಧಿಪತಿಗಳಾದ ಹಿರಗಪ್ಪ ತಾತನವರು ವಹಿಸಿದರು.

ವೇದಿಕೆ ಮೇಲೆ ಖ್ಯಾತ ವೈಧ್ಯರಾದ ಡಾ. ರವಿಕುಮಾರ ರ‍್ಯಾಕಾ, ಸಿದ್ದಣ್ಣಗೌಡ ಕಾಡಂನೋರ, ಸಿದ್ರಾಮಯ್ಯ ಸ್ವಾಮಿ, ಗುರುಶಾಂತಯ್ಯ ಹುನಗುಂದ, ಮಹಾಂತೇಶ ಕೌಲಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಠದ ಭಕ್ತರಾದ ಬಸವರಾಜ ಹವಾಲ್ದಾರ, ಎಸ್.ಎಸ್ ಜುಗೇರಿ, ಶಿವನಗೌಡ ಪಾಟೀಲ್ ಆಶನಾಳ, ಹಣಮಂತ ಕಾವಲಿ, ಪ್ರಭು ಹೂಗಾರ, ವಿಶ್ವನಾಥರಡ್ಡಿ ಪಾಟೀಲ್ ಸುಗೂರ, ರಾಜು ಹತ್ತಿಕುಣಿ, ಗುತ್ತಿಗೆದಾರ ಮೋಹನ ರಾಠೋಡ, ಶರಣಗೌಡ ಬಿರಾದಾರ, ಮಲ್ಲಯ್ಯ ಕಸಬಿ, ಮಹಾಂತೇಶ ಗೌಡರ್ ಲಿಂಗಸೂಗೂರ, ಚನ್ನಕೇಶವಗೌಡ ಬಾಣತಿಹಾಳ, ಮಲ್ಲಪ್ಪ ಶಿವಪುರ, ಶ್ರೀಮತಿ ಶಾಂತಾ ಚಿಪ್ಪಾರ, ಸುರೇಶ ಕೋಟಿಮನಿ, ಸಿದ್ದಲಿಂಗರಡ್ಡಿ ಬಾಸರಡ್ಡಿ, ಮಲ್ಲಿಕಾರ್ಜುನ ರಾಮಸಮುದ್ರ, ದೇವಿಂದ್ರ ನರಬೋಳಿ, ಸುರೇಶ ದೇವಾಪೂರ, ಶರಣು ಬೋಳಾರಿ, ಸಿದ್ರಾಮರಡ್ಡಿ ಚಿನ್ನಾಕಾರ, ಮಲ್ಲಿಕಾರ್ಜುನ ಕಿವಡೇರ್ ಬಂದಳ್ಳಿ, ಹೊನ್ನಪ್ಪ ಮುಷ್ಠೂರ ಸೇರಿದಂತೆ ಸಹಸ್ರಾರು ಭಕ್ತರು ಉಪಸ್ಥಿತರಿದ್ದರು.

ಭೀಮರಡ್ಡಿ ಕುರಹಾಳ ಸ್ವಾಗತಿಸಿದರೇ, ಶಂಕರಗೌಡ ಪಾಟೀಲ್ ನಿರೂಪಿಸಿದರು. ಈರಣ್ಣ ಬಲಕಲ್ ಎಲ್‌ಐಸಿ ವಂದಿಸಿದರು,

## ಪ.ಜಾ,ಪ.ಪಂ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಿಂದ ನಗರದಲ್ಲಿನ ಬಡಾವಣೆಗೆ ಭೇಟಿ, ಸಮಸ್ಯೆ ಗಳ ಆಲಿಕೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಮಾ:10–ನಿಮ್ಮ ಸಮಸ್ಯೆಗಳಿಗೆ ಹಂತ, ಹಂತವಾಗಿ ಪರಿಹಾರ ನೀಡಲಾಗುವವುದು. ಸರ್ಕಾರ ಅನುದಾನ ಸೇರಿದಂತೆಯೇ ವಿವಿಧ ಯೋಜನೆಗಳು ಜಾರಿ ಮಾಡಿದೆ. ಅವುಗನ್ನು ಪಡೆದು ಆರ್ಥಿಕವಾಗಿ ಮುಂದೆ ಬನ್ನಿ, ಯಾವುದೇ ಕಾರಣಕ್ಕೂ ನಿಮ್ಮ ಮಕ್ಕಳನ್ನು ಶಿಕ್ಷಣದಿಂದ ವಂಚಿತರಾಗಿ ಮಾಡಬೇಡಿ ಎಂದು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷೆ ಪಲ್ಲವಿ ಜಿ. ಹೇಳಿದರು.

ಭಾನುವಾರ ಇಲ್ಲಿನ ವಾರ್ಡ ನಂ. 5ರ ಬೋಳಿವಾಡದ ಮೇದಾರ ಬಡಾವಣೆಗೆ ಭೇಟಿ ನೀಡಿದ ವೇಳೆ ಅಲ್ಲಿ ಸೇರಿದ್ದ ಮೇದಾರ ಸಮುದಾಯದ ಜನರನ್ನು ಉದ್ದೇಶಿಸಿ, ಶಾಲೆಯಲ್ಲಿ ಶಿಕ್ಷಕರು ಪಾಠ ಮಾಡಿದಂತೆಯೇ ಪಲ್ಲವಿ ಅವರು ಸುರ್ಧಿಘ ಮಾತುಗಳಿಂದ ಅನೇಕ ವಿಷಯಗಳು ತಿಳಿಸಿದರು.

ಅಕ್ಕಪಕ್ಕದ ಬಡಾವಣೆಗಳು ನೋಡಿ , ಅಲ್ಲಿ ಎಷ್ಟು ಸ್ವಚ್ಛತೆ ಇದೆ. ಮೂಲಭೂತ ಸೌಲಭ್ಯಗಳು ಇವೆ. ಅವರ ಮಕ್ಕಳು ಶಾಲೆ ತೊರೆದಿಲ್ಲ, ಆದರೇ ನೀವು ಯಾವುದೇ ಸೌಲಭ್ಯಗಳಿಲ್ಲದೆ ಅದು ಹೇಗೆ ಜೀವನ ನಡಸುತ್ತಿದ್ದಿರಿ? ಮಕ್ಕಳನ್ನು ಶಾಲೆ ಬಿಡಿಸಿ ನಿಮ್ಮ ಕುಲಕಸುಬಿ ಹಚ್ಚಿದ್ದಿರಿ. ಏಕೆ ಹೀಗೆ ಮಾಡಿದ್ದಿರಿ. ಈ ಸಂಬಂಧ ಇಲಾಖೆಗೆ ಹೋಗಿ ಅಲ್ಲಿ ಅಧಿಕಾರಿಗಳಿಗೆ ಭೇಟಿ ನೀಡಿದರೇ ನಿಮ್ಮ ಸೌಲಭ್ಯಗಳು ಮನೆ ಬಾಗಿಲಿಗೆ ಮುಟ್ಟಿಸುತ್ತಾರೆ. ನಗರಸಭೆ ಅಧ್ಯಕ್ಷೆ ಲಲಿತಾ ಅನಪುರ ಇಂದು ನಮ್ಮ ಜೊತೆ ನಿಮ್ಮ ಬಳಿಗೆ ಬಂದಿದ್ದಾರೆ. ಅವರಿಗೂ ಮೂಲಭೂತ ಸೌಲಭ್ಯಗಳ ಬಗ್ಗೆ ಹೇಳಿ ಮಾಡಿಕೊಡುತ್ತಾರೆ. ಅವರು ನಾನು ಅಭಿವೃದ್ಧಿ ವಿಷಯದಲ್ಲಿ ತಾರತಮ್ಯ ಮಾಡುವುದಿಲ್ಲ ಎಂದು ಮಾರ್ಮಿಕವಾಗಿ ಹೇಳಿದರು.

ನೀವು ನೀವೇ ಕಚ್ಚಾಡ ಬೇಡಿ, ಇದು ಮೊದಲೇ ಇಕ್ಕಟಾದ ಓಣಿ, ಇಲ್ಲಿ ಚರಂಡಿ ವ್ಯವಸ್ಥೆ ಇಲ್ಲ, ಮನೆ ಮುಂದೆ ಹರಿಯುವ ಕಲುಷಿತ ನೀರಿನ ಮುಂದೆ ಕುಳಿತು ಬುಟ್ಟಿ ಇತರೆ ವಸ್ತುಗಳು ತಯಾರಿಸುತ್ತಿದ್ದಿರಿ, ಇದರಿಂದ ನಿಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುವುದಿಲ್ಲವೇ? ಎಂದು ಕೇಳಿದ ಪಲ್ಲವಿ, ಅಲ್ಲಿಯೇ ಕುಳಿತಿದ್ದ ಸಂಜನಾ ಎಂಬ ಹುಡುಗಿ ಮಾತಾಡಿಸಿ, ಶಾಲೆ ಏಕೆ ಬಿಟ್ಟಿದ್ದಿ, ಯಾರು ಬಿಡಿಸಿದರು, ನಾಳೆಯಿಂದಲೇ ಶಾಲೆಗೆ ಹೋಗಬೇಕು, ಏನು ತಾಯಿ ಮಗಳಿಗೆ ಶಾಲೆ ಕಳುಹಿಸುತ್ತಿಯೋ ಇಲ್ಲವೋ ಎಂದು ಕೇಳಿದಾಗ ಅಯಿತು ಕಳುಹಿಸಿತ್ತಿನಿ ಎಂದು ಬತಾಯಿ ಹೇಳಿದರೂ ಸಮಾಧಾನವಾಗದ ಅವರು ಕೈಮೇಲೆ ಕೈ ಹಾಕಿಸಿಕೊಂಡು ಭರವಸೆ ಪಡೆದು ಮಾನವಿತೆಯೇ ಮೆರೆದರು.

ಈ ಮೇದಾರ ಬಡಾವಣೆಗೆ ಏನೇನು ಸೌಲಭ್ಯಗಳು ಬೇಕು ಅದೆಲ್ಲ ಮಡಿಕೊಡುವಂತೆಯೇ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ನಗರಸಭೆ ಅಧ್ಯಕ್ಷೆ ಲಲಿತಾ ಅನಪುರ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಚನ್ನಬಸಪ್ಪ ಸೇರಿದಂತೆಯೇ ಇತರರಿದ್ದರು. ಸಮಾಜದ ಮೂರು ಪ್ರಮುಖ ಬೇಡಿಕೆಗಳ ಮನವಿ ಸಲ್ಲಿಸಿದರು.

ರುದ್ರಭೂಮಿಗೆ ಜಾಗ ನೀಡಬೇಕು, ಸಮುದಾಯ ಭವನ ನಿರ್ಮಾಣವಾಗಬೇಕು ಮತ್ತು ಬಂಬು ಬಜಾರದ ವ್ಯವಸ್ಥೆ ಆಗಬೇಕೆಂದು ಸಮಾಜದ ಪ್ರಮುಖರು ಒತ್ತಾಯಿಸಿದರು.

## ವಾರಸುದಾರರ ಪತ್ತೆಗೆ ರೈಲ್ವೇ ಪೊಲೀಸರ ಮನವಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮಾ.10–ಲ್ಲಿನ ರೈಲ್ವೇ ಪೊಲೀಸ್ ಠಾಣೆಯ ವ್ಯಾಪ್ತಿಯ ಹನಮಾಪೂರ ಮತ್ತು ಮಟಮಾರಿ ರೈಲ್ವೇ ನಿಲ್ದಾಣಗಳ ಮದ್ಯೆ ರೈಲ್ವೆ ಕೀ.ಮೀ ನಂ;543/24–26ಡೌನ್‌ಲೈನ್‌ನಲ್ಲಿ ಮಾ.05ರಂದು ಯಾವುದೋ ಚಲಿಸುವ ರೈಲುಗಾಡಿಗೆ ಸುಮಾರು 50 ವರ್ಷದ ಅಪರಿಚಿತ ಗಂಡಸು ಮೃತಪಟ್ಟಿದ್ದು, ಈ ಕುರಿತು ರೈಲ್ವೇ ಪೊಲೀಸ್ ಠಾಣೆಯ ಯುಡಿಆರ್ ನಂ;15/2025 ಕಲಂ 194 ಬಿ.ಎನ್.ಎಸ್.ಎಸ್ ರೀತ್ಯಾ ಪ್ರಕರಣ ದಾಖಲಿಸಿಕೊಂಡು ವಾರಸುದಾರರ ಪತ್ತೆಗೆ ಕೋರಲಾಗಿದೆ.

ಮೃತನ ಚಹರೆ ಪಟ್ಟಿಯ ವಿವರ; ವಯಸ್ಸು ಸುಮಾರು 50 ವರ್ಷ, ಎತ್ತರ ಸುಮಾರು 5.4 ಅಡಿ, ಕಪ್ಪು ಮೈಬಣ್ಣ, ಸಾಧಾರಣ ಮೈಕಟ್ಟು, ದುಂಡು ಮುಖ, ಸಣ್ಣ ಕಿವಿ, ಉದ್ದ ಮೂಗು ತಲೆಯಲ್ಲಿ 2 ಇಂಚು ಕಪ್ಪು ಮತ್ತು ಬಿಳಿ ಮೀಶ್ರಿತ ಕೂದಲು ಇರುತ್ತದೆ. ಒಂದು ತಿಳಿ ನೀಲಿ ಬಣ್ಣದ ಜುಬ್ಬಾ ಟೈಲರ್ ಮಾರ್ಕ ಇರುವುದಿಲ್ಲಾ, ಒಂದು ಬಿಳಿ ಬಣ್ಣದ ಪಂಚೆ, ಒಂದು ನಾಸಿ ಬಣ್ಣದ ಚಡ್ಡಿ, ಒಂದು ಬಿಳಿ ಮತ್ತು ಚಾಕ್ಲೇಟ್ ಬಣ್ಣದ ಟಾವೇಲ್ ಒಂದು ಹರಿದು ಚಿಂದಿಯಾದ 100ರೂ ನೋಟು ಇರುತ್ತದೆ.

ಈ ಮೃತನ ವಾರಸುದಾರರು ಪತ್ತೆಯಾದಲ್ಲಿ ಅಥವಾ ಈ ಮೃತನ ಹೋಲಿಕೆಯ ಗಂಡಸು ಕಾಣೆಯಾದ ಪ್ರಕರಣ ದಾಖಲಾಗಿದ್ದಲ್ಲಿ ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ದೂ.ನಂ: 08532–231716 ಅಥವಾ ಮೊ.ನಂ:9480802111 ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080–22871291ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರು ರೈಲ್ವೇ ಪೊಲೀಸ ಠಾಣೆಯ ತನಿಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೆಸ್ಕಾಂ ಗ್ರಾಮೀಣ; ಇಂದು ವಿದ್ಯುತ್ ವ್ಯತ್ಯಯ

ರಾಯಚೂರು ಮಾ.10– ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ 110/11 ಕೆವಿ ವಡವಟ್ಟಿ ಉಪ ಕೇಂದ್ರದ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡ ಪ್ರಯುಕ್ತ ಮಾ.11ರ ಬೆಳಿಗ್ಗೆ 9ಗಂಟೆಯಿಂದ ಸಂಜೆ 4ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದ್ವಿತೀಯ ಪಿಯುಸಿ ಪರೀಕ್ಷೆ; 177 ವಿದ್ಯಾರ್ಥಿಗಳು ಗೈರು ಹಾಜರಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮಾ.10– ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ 2025ರ ಮಾ.10ರ ಸೋಮವಾರ ನಡೆದ ದ್ವಿತೀಯ ಪಿಯುಸಿ–01ರ ಲೆಕ್ಕಶಾಸ್ತ್ರ ವಿಷಯದ ಪರೀಕ್ಷೆಯಲ್ಲಿ ಒಟ್ಟು 177 ವಿದ್ಯಾರ್ಥಿಗಳು ಗೈರು ಹಾಜರಿಯಾಗಿದ್ದಾರೆ.

ಜಿಲ್ಲೆಯ 49 ಕೇಂದ್ರಗಳಲ್ಲಿ ಲೆಕ್ಕಶಾಸ್ತ್ರ ವಿಷಯದಲ್ಲಿ ಒಟ್ಟು 4072 ನೋಂದಣೆಯಾಗಿದ್ದು, 3886 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿಯಾಗಿದ್ದಾರೆ. 177 ವಿದ್ಯಾರ್ಥಿಗಳು ಗೈರು ಹಾಜರಿಯಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸದೃಢ, ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ಮಾದಕ ವಸ್ತುಗಳಿಂದ ದೂರವಿರಿ: ಐಜಿಪಿ ಲೋಕೇಶ್ ಕುಮಾರ್




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.09–ಕರ್ನಾಟಕ ರಾಜ್ಯಪೊಲೀಸ್ ರನ್–2025 ಕಾರ್ಯಕ್ರಮಅಂಗವಾಗಿಬಳ್ಳಾರಿ ಜಿಲ್ಲಾ ಪೊಲೀಸ್ ವತಿಯಿಂದ 'ನಮ್ಮೆಲ್ಲರಸದೃಡತೆಮತ್ತುಡಗ್ಸ್ ಮುಕ್ತಕರ್ನಾಟಕನಿರ್ಮಾಣ' ಎಂಬ ಧ್ಯೇಯವಾಕ್ಯದೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ನಗರದ ಕನಕ ದುರ್ಗಮ್ಮ ದೇವಸ್ಥಾನ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ5ಕೆಪೊಲೀಸ್‌ರನ್ ಕಾರ್ಯಕ್ರಮಕ್ಕೆಬಳ್ಳಾರಿವಲಯ ಪೊಲೀಸ್‌ಮಹಾನಿರೀಕ್ಷಕರಾದ ಬಿ.ಎಸ್.ಲೋಕೇಶ್ ಕುಮಾರ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಸ್ಥ, ಸದೃಢ ಮತ್ತು ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ಯುವ ಸಮುದಾಯವು ಮಾದಕ ವಸ್ತುಗಳಿಂದ ದೂರವಿರಬೇಕು ಎಂದು ಕರೆ ನೀಡಿದರು. ಸಾರ್ವಜನಿಕರು ರಸ್ತೆ ಸುರಕ್ಷತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ವಾಹನ ಚಾಲನೆಯಲ್ಲಿ ತಮ್ಮ ಸುರಕ್ಷತೆಗಾಗಿ ಹೆಲ್ಮೆಟ್ ಮತ್ತು ಸೀಟ್‌ಬೆಲ್ಟ್‌ತಪ್ಪದೇಧರಿಸಬೇಕು. ಸೈಬರ್‌ವಂಚಕರಿಂದಸುರಕ್ಷತೆ–ಯ ಅರಿವು ಹೊಂದಬೇಕು ಎಂದು ಸಲಹೆ ನೀಡಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ,ಪ್ರತಿಯೊಬ್ಬರುಸದೃಡ ಆರೋಗ್ಯ ಕಾಪಾಡಿಕೊಳ್ಳಲು ದಿನನಿತ್ಯ ನಿಯಮಿತವಾಗಿ ದೈಹಿಕ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕು ಎಂದರು.

ಜಿಲ್ಲಾಪೊಲೀಸ್‌ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮೆಲರ ಸದೃಢತೆ ಹಾಗೂ ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು 5ಕೆ ಪೊಲೀಸ್ ರನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಬಳ್ಳಾರಿ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಹೆಚ್.ಸೂರ್ಯವಂಶಿ,ಹೆಚ್ಚುವರಿ ಪೊಲೀಸ್‌ವರಿಷ್ಠಾಧಿಕಾರಿಗಳಾದ ಕೆ.ಪಿ ರವಿಕುಮಾರ್, ನವೀನ್ ಕುಮಾರ್, ಎಸ್.ಬಿ.ಐ ಬಳ್ಳಾರಿ ಪ್ರಾದೇಶೀಕಮುಖ್ಯವ್ಯವಸ್ಥಾಪಕ ಇರ್ಷಾದ್ ಆಲಂ ಸೇರಿದಂತೆ ಜಿಲ್ಲಾ ಪೊಲೀಸ್ ಇಲಾಖೆಯ ಅಧಿಕಾರಿಗಳು,ನಿವೃತ್ತಯೋಧರು, ಅಥ್ಲೆಟ್ಸ್, ವಿವಿಧ ಕಾಲೇಜಿನ ವಿದ್ಯಾರ್ಥಿ–ವಿದ್ಯಾರ್ಥಿನಿಯರು, ಸಾರ್ವಜನಿಕರು ಸೇರಿದಂತೆ ರಾಜ್ಯದವಿವಿಧಜಿಲ್ಲೆಗಳಿಂದಲೂ ಸ್ಪರ್ಧಿಗಳು ಭಾಗವಹಿಸಿದ್ದರು.

ಮ್ಯಾರಥಾನ್ ಓಟದಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಬಹುಮಾನ ಮತ್ತು ಟ್ರೋಫಿ ವಿತರಣೆ ಮಾಡಲಾಯಿತು.

*ಮಹಿಳೆಯರ ವಿಭಾಗ:*

ಪ್ರಥಮ–ಸಿರೀಷಾ(ಬಳ್ಳಾರಿ) ದ್ವಿತೀಯ–ವಿಜಯಲಕ್ಷ್ಮಿ (ಧಾರವಾಡ) ತೃತೀಯ–ಜಾಹಿದ(ಬಳ್ಳಾರಿ).

*ಪುರುಷರ ವಿಭಾಗ:*

ಪ್ರಥಮ–ಶಿವಾನಂದ.ಸಿ(ಬೆಳಗಾವಿ) ದ್ವಿತೀಯ–ರಾಜೇಶ್ ಕುಮಾರ್(ಬೆಂಗಳೂರು) ತೃತೀಯ–ಮಣಿಕಂಠ(ಧಾರವಾಡ).

ಬಳ್ಳಾರಿ ಪೊಲೀಸ್ 5ಕೆ ರನ್ ದುರುಗಮ್ಮ ದೇವಸ್ಥಾನದ ಆವರಣದಿಂದಪ್ರಾರಂಭಗೊಂಡು ಗಡಗಿ ಚೆನ್ನಪ್ಪ ವೃತ್ತ, ಹಳೇ ಡಿಸಿ ಕಚೇರಿ ಮುಂಭಾಗದಿಂದ ಹೆಚ್.ಆರ್.ಗವಿಯಪ್ಪ ವೃತ್ತ, ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಮಾರ್ಗವಾಗಿ ವಾಲ್ಮೀಕಿ ವೃತ್ತ (ಎಸ್.ಪಿ ಸರ್ಕಲ್), ತಾಳೂರು ರಸ್ತೆ ಕ್ರಾಸ್ ಮೂಲಕ ಮರಳಿ ಕನಕ ದುರ್ಗಮ್ಮ ದೇವಸ್ಥಾನದ ಆವರಣಕ್ಕೆ ತಲುಪಿ ಅಂತ್ಯಗೊಂಡಿತು.

# ಕರ್ನಾಟಕ ದಲಿತ ಸಂಘರ್ಷ ಸಮಿತಿಯ ನ್ಯೂತನ ಅಧ್ಯಕ್ಷರಾಗಿ ಆಯ್ಕೆ : ನಿಂಗಣ್ಣ ಕಟ್ಟಿಮನಿ



ಮಲ್ಲಮ್ಮ ನುಡಿ ವಾರ್ತೆ

ಹುಣಸಗಿ : ಪ್ರೊ. ಬಿ. ಕೃಷ್ಣಪ್ಪ ನವರು ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ(ರಿ) 47/74–75 ಜಿಲ್ಲಾ ಸಮಿತಿ ಯಾದಗಿರಿ ವತಿಯಿಂದ ಹುಣಸಗಿ ತಾಲೂಕಿನ ಪದಾಧಿಕಾರಿಗಳ ಆಯ್ಕೆ ಕುರಿತು ಪ್ರವಾಸಿ ಮಂದಿರದಲ್ಲಿ ಸಭೆ ಕರೆಯಲಾಯಿತು

ಈ ಸಭೆಯ ಅಧ್ಯಕ್ಷತೆಯನ್ನು ನಿಂಗಣ್ಣ ಎಂಗೋನಲ್, ಜಿಲ್ಲಾ ಸಂಚಾಲಕರು ಯಾದಗಿರಿ ಇವರು ವಹಿಸಿಕೊಂಡರು ಈ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಸಂಘಟನಾ ಸಂಚಾಲಕರಾದ ಊಖಬಡಿಗೇರ್ ಸರ್ ಹಾಗೂ ಸುರಪುರ ತಾಲೂಕ ಆಖಖ ಮುಖಂಡರಾದ ಭೀಮಣ್ಣ ಅಡ್ಡಡೊಡಗಿ ಹಾಗೂ ಹನುಮಂತ ದೊಡ್ಡಮನಿ ಇವರು ಈ ಸಭೆಯಲ್ಲಿ ಉಪಸ್ಥಿತರಿದ್ದರು ಹುಣಸಗಿ ತಾಲೂಕಿನ ಪ್ರವಾಸಿ ಮಂದಿರದಲ್ಲಿ ತಾಲೂಕಿನ ಕುಂದು ಕೊರತೆಗಳ ಬಗ್ಗೆ ಹಾಗೂ ಪದಾಧಿಕಾರಿಗಳ ಆಯ್ಕೆಯನ್ನು ಜಿಲ್ಲಾ ಸಂಚಾಲಕರ ನೇತೃತ್ವದಲ್ಲಿ ನೆರವೇರಿತು .

ಹುಣಸಗಿ ತಾಲೂಕಿನ ತಾಲೂಕ ಸಂಚಾಲಕರಾಗಿ ನಿಂಗಣ್ಣ ತಂದೆ ಬಾಗಪ್ಪ ಕಟ್ಟಿಮನಿ ಸಾ : ಕನ್ನಳ್ಳಿ ಇವರು ಆಯ್ಕೆಯಾಗಿದ್ದಾರೆ ಹಾಗೂ ಸಂಘಟನಾ ಸಂಚಾಲಕರಾಗಿ ಸುರೇಶ ತಂದೆ ಪರಮಣ್ಣ ಹಾದಿಮನಿ ಸಾ: ಕನ್ನಳ್ಳಿ , ಶರಣು ತಂದೆ ಮಲ್ಲಪ್ಪ ಕಟ್ಟಿಮನಿ ಸಾ : ಕನ್ನಳ್ಳಿ , ಶಿವಪ್ಪ ತಂದೆ ಬಸಪ್ಪ ಗುಡಿಮನಿ ಸಾ : ಕೂಡಲಗಿ , ಮಹಾಂತೇಶ ತಂದೆ ಶಿವಪ್ಪ ಬೈಚಬಾಳ ಹಾಗೂ , ರವಿ ತಂದೆ ರಾಯಪ್ಪ ಕೋಳಿಹಾಳ, ಶಿವಶರಣಪ್ಪ ತಂದೆ ತಿಪ್ಪಣ್ಣ ಜಾಲಹಳ್ಳಿ , ಹನುಮಂತ್ರಾಯ ದೊಡ್ಮನೆ , ಶೇಖರ್ ಸುರಪುರ , ಜೆಟ್ಟಪ್ಪ ಹಾದಿಮನಿ , ಪರಶುರಾಮ್ ಚಲವಾದಿ, ಪರಶುರಾಮ್ ಸುರಪುರ, ಜೆಟ್ಟಪ್ಪ ಕಚಕನೂರ

ಹುಣಸಗಿ ತಾಲೂಕಿನ ಪ್ರೊ. ಬಿ.ಕೃಷ್ಣಪ್ಪ ನವರು ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಆಯ್ಕೆಯಾದ ಪದಾಧಿಕಾರಿಗಳು ಹಾಗೂ ಹೊಸದಾಗಿ ಆಯ್ಕೆಯಾದ ತಾಲೂಕ ಪದಾಧಿಕಾರಿಗಳಿಗೆ ಸಂಘಟನೆಯ ಕುರಿತು ಸಂಘಟನೆಯ ಸಿದ್ಧಾಂತಗಳ ಕುರಿತು ಜಿಲ್ಲಾ ಸಂಚಾಲಕರು ಸಹ ವಿಸ್ತಾರವಾಗಿ ತಿಳಿ ಹೇಳಿದೆ.

# ಇಂದು ಉಚಿತ ಸಾಧನ ಸಲಕರಣೆಗಳ ವಿತರಣೆ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.10–ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಕೇಂದ್ರಸರ್ಕಾರದ ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ ಮಾ.11 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡರಂಗಮಂದಿರದಲ್ಲಿ ಹಿರಿಯ ನಾಗರಿಕರಿಗೆ ಉಚಿತ ಸಾಧನ ಸಲಕರಣೆಗಳ ವಿತರಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ವಸತಿ,ವಕ್ಫ್‌ಮತ್ತುಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರು ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ಸಚಿವರಾದ ಲಕ್ಷ್ಮೀ ಆರ್.ಹೆಬ್ಬಾಳ್ಕರ್ ಅವರು ಘನ ಉಪಸ್ಥಿತಿ ಇರುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಾಸಕರಾದ ಬಿ.ಎಂ.ನಾಗರಾಜ, ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್. ಆಂಜನೇಯಲು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್.ಕೆ.ಹೆಚ್., ಜಿಲ್ಲಾ ಅಂಗವಿಕಲರ ಹಾಗೂ ಹಿರಿಯನಾಗರಿಕರಸಬಲೀಕರಣ ಕಲ್ಯಾಣಾಧಿಕಾರಿ ಗೋವಿಂದಪ್ಪ. ಹೆಚ್.ಎಂ ಸೇರಿದಂತೆ ಜಿಲ್ಲಾ ವಿಕಲಚೇತನರ ಪುರ್ನವಸತಿ ಕೇಂದ್ರ, ವಿಕಲಚೇತನರು ಮತ್ತು ಹಿರಿಯ ನಾಗರಿಕರಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿರುವರು. .ಎಂದು ಪ್ರಕಟಣೆ ತಿಳಿಸಿದೆ.

# ಕೊಲಹಳ್ಳಿ ಗೋಣಿಬಸವೇಶ್ವರ ಜಾತ್ರೆಗೆ ಮೋರನಹಳ್ಳಿಯಿಂದ ಪಾದಯಾತ್ರೆ.



ದೇವಸ್ಥಾನದಲ್ಲಿ ವಿಶೇಷ ಪೂಜೆ ಅಭಿಷೇಕ

ಮಲ್ಲಮ ನುಡಿ ವಾರ್ತೆ

ಕೊಪ್ಪಳ:ತಾಲ್ಲೂಕಿನ ಮೋರನಹಳ್ಳಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಸೇವಾ ಯುವ ಬಳಗವು ಇಂದು ನಡೆಯುವ ಹರಪನಹಳ್ಳಿಯ ತಾಲ್ಲೂಕಿನ ಸುಕ್ಷೇತ್ರ ಕೂಲಹಳ್ಳಿಯ ಗೋಣಿ ಬಸವೇಶ್ವರ ಜಾತ್ರೆಗೆ ವಿಶೇಷ ಸಂಕಲ್ಪದೊಂದಿಗೆ ಪಾದಯಾತ್ರೆಯ ಕೈಗೊಂಡು ಇಂದು ನಡೆಯುವ ಜಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಮೋರನಹಳ್ಳಿಯಗೋಣಿಬಸವೇಶ್ವರ ಸಲ್ಲಿಸಿದ್ದಾರೆ. ಹಿರಿಯರಾದ ಷಣ್ಮುಖಪ್ಪ ಆಲೂರು ಪಾದಯಾತ್ರೆಗೆ ಚಾಲನೆ ನೀಡಿ ಶುಭ ಹಾರೈಸಿದ್ದಾರೆ.

ಬಸವರಾಜ,ಬನ್ನಿಕಟ್ಟಿ,ನಾಗರಾಜ ಚಿಲಗೋಡ್ರ, ಗೋಣೆಶ ಹೊರಪೇಟಿ,ಷಣ್ಮುಖಪ್ಪ,ವೆಂಕಟೇಶ, ಪತ್ರೆಪ್ಪ,ಅಂದಪ್ಪಪರಸಪ್ಪ,ಚೇತನ ಮತ್ತಿತ್ತರ ಪಾದಯಾತ್ರಿಗಳು ಉಪಸ್ಥಿತಿ ಇದ್ದರು.

# ಭವಿಷ್ಯದಲ್ಲಿ ಕಿವುಡುತನ ತಡೆಗಟ್ಟಲು ತಪ್ಪದೇ ಶ್ರವಣ ಪರೀಕ್ಷೆ ಮಾಡಿಸಿ: ಡಾ.ಯಲ್ಲಾ ರಮೇಶ್‌ಬಾಬು



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.10–ಜನನದ ನಂತರ ಎಲ್ಲಾ ನವಜಾತ ಶಿಶುಗಳಿಗೆ ತಿಂಗಳಲ್ಲಿ ಎರಡು ಬಾರಿ ಕಡ್ಡಾಯವಾಗಿ ಶ್ರವಣ ಪರೀಕ್ಷೆ ಮಾಡಿಸಬೇಕು. ಈ ಮೂಲಕ ಆರಂಭದಲ್ಲಿಯೇ ಶ್ರವಣದೋಷದ ಚಿಕಿತ್ಸೆಗೆ ಸಹಕಾರಿಯಾಗುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆಸ್ಪತ್ರೆ ಹಾಗೂ ಕಿವಿ, ಮೂಗು, ಗಂಟಲು ವಿಭಾಗ ಇವರ ಸಹಯೋಗದಲ್ಲಿ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಿಶ್ವ ಶ್ರವಣ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭವಿಷ್ಯದಲ್ಲಿಮಗುಶ್ರವಣತೊಂದರೆಯಿಂದ ಹೊರಬರಲುಜನನನಂತರದಲ್ಲಿತಿಂಗಳಿಗೊಮ್ಮೆ ಕಡ್ಡಾಯವಾಗಿ ತಪಾಸಣೆ ಮಾಡಿಸಬೇಕು. ಜಿಲ್ಲಾ ಆಸ್ಪತ್ರೆಯಲ್ಲಿ ಶ್ರವಣದೋಷದ ಚಿಕಿತ್ಸೆ ಇದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಈಗಾಗಲೇ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ 14 ಜನರಿಗೆ ಕನಿಷ್ಠ 10 ಲಕ್ಷ ವೆಚ್ಚವಾಗುವ ಕಾಕ್ಲಿಯರ್ ಇನ್‌ಪ್ಲಾಂಟ್, 400 ಜನರಿಗೆ ಶ್ರವಣಸಾಧನ, 5240 ನವಜಾತ ಶಿಶುಗಳ ಶ್ರವಣ ಪರೀಕ್ಷೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

*ಕಿವುಡತನಕ್ಕೆ ಕಾರಣಗಳು:*

ನವಜಾತ ಶಿಶುಗಳಲ್ಲಿ ಸಾಮಾನ್ಯವಾಗಿ ಕೌಟಂಬಿಕ ಹಿನ್ನೆಲೆ, ಗರ್ಭಾವಸ್ಥೆಯಲ್ಲಿನ ಸೋಂಕು, ದಿನ ತುಂಬುವ ಮುನ್ನ ಜನಸಿದ್ದು, ಜನನದ ಸಮಯದಲ್ಲಿ ಆಮ್ಲಜನಕದ ಕೊರತೆ, ಜನನದ ನಂತರ ತೀವ್ರ ಕಾಮಾಲೆಯಿಂದ ಕಿವುಡುತನ ಕಂಡುಬರುತ್ತದೆ.

ಮಕ್ಕಳು ಮತ್ತು ವಯಸ್ಕರಲ್ಲಿ ಮೆನಿಂಜೈಟಿಸ್, ದಡಾರ, ಗದಗಟ್ಟು ಅಥವಾ ಕಿವಿಯ ಸೋಂಕುಗಳು, ಕೆಲವು ಔಷಧಿಗಳನ್ನು ಬಳಸುವುದರಿಂದ, ತಲೆ ಅಥವಾ ಕಿವಿಗೆ ಗಾಯ, ಯಾವುದೇ ಸನ್ನಿವೇಶದಲ್ಲಿ ಜೋರಾಗಿ ಶಬ್ದಗಳಿಗೆ ಒಳಗೊಳ್ಳುವುದು, ಅಸುರಕ್ಷಿತ ಮಟ್ಟದಲ್ಲಿ ವೈಯಕ್ತಿಕ ಆಡಿಯೋ ಸಾಧನಗಳ ಮೂಲಕ ಕೇಳುತ್ತಿದ್ದರೆ, ಕಿವಿಯ ಮೇಣ ಅಥವಾ ಬೇಡದ ವಸ್ತುವನ್ನು ಕಿವಿಯಲ್ಲಿ ಹಾಕಿಕೊಂಡಾಗ ಕಿವುಡುತನ ಉಂಟಾಗುತ್ತದೆ.

ಹಿರಿಯ ನಾಗರಿಕರಲ್ಲಿ ಸಾಮಾನ್ಯ ವಯಸ್ಸಾದ ಪ್ರಕ್ರಿಯೆ, ಯಾವುದೇ ಸನ್ನಿವೇಶದಲ್ಲಿ ಜೋರಾದ ಶಬ್ಧಗಳಿಗೆ ಒಳಗೊಳ್ಳುವುದು, ತೀವ್ರ ರಕ್ತದೊತ್ತಡ, ಮಧುಮೇಹ, ಕೆಲವು ಔಷಧಿಗಳನ್ನು ಬಳಸುವುದರಿಂದ ಕಿವುಡುತನ ಉಂಟಾಗುತ್ತದೆ ಎಂದು ಡಿಹೆಚ್‌ಒ ತಿಳಿಸಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಮಾತನಾಡಿ, ಮಕ್ಕಳು ಮತ್ತು ವಯಸ್ಕರು ಒಳಗೊಂಡು ಕಿವಿಯೊಳಗೆ ಯಾವುದೇ ವಸ್ತುಗಳನ್ನು ಹಾಕಬಾರದು, ಗದ್ದಲದ ಸ್ಥಳಗಳಲ್ಲಿ ಕಿವಿ ಕವಚ ಬಳಸಬೇಕು, ಕಿವಿಯಲ್ಲಿ ತೊಂದರೆ ಕಂಡುಬಂದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು. ಅನಗತ್ಯವಾಗಿ ತೆಗೆದುಕೊಳ್ಳುವ ಔಷಧಿಗಳು ಕಿವಿಯ ಮೇಲೆ ಪರಿಣಾಮ ಬೀಳುವುದೇ ಎಂಬುದರ ಕುರಿತು ವೈದ್ಯರಿಂದ ಖಚಿತಪಡಿಸಿಕೊಳ್ಳಬೇಕು. ನಿಯಮಿತವಾಗಿ ಕಿವಿಯ ಪರೀಕ್ಷೆ ಮಾಡಿಸಿಕೊಳ್ಳಬೇಕು. ಸೂಚಿಸಿದ ಶ್ರವಣ ಯಂತ್ರಗಳನ್ನೇ ಬಳಸಬೇಕು ಎಂದು ಹೇಳಿದರು.

ಮಗುವಿಗೆ ಕಿವಿ ನೋವು, ಕಿವಿ ಸೋರುವುದು ಅಥವಾ ಕಿವಿ ಮುಚ್ಚಿದೆ ಎಂದು ಕಂಡುಬಂದರೆ ತಕ್ಷಣ ಮಗುವನ್ನು ವೈದ್ಯರ ಬಳಿ ಪರೀಕ್ಷಿಸಬೇಕು. ಮುಖ್ಯವಾಗಿ ಮಕ್ಕಳನ್ನು ಕೊಳಕು ನೀರಿನಲ್ಲಿ ಈಜಲು ಬಿಡಬಾರದು, ಮಗುವಿನ ಕಿವಿಯ ಮೇಲೆ ಹೊಡೆಯಬಾರದು, ಜೋರಾದ ಶಬ್ಧದಿಂದ ಮಗುವನ್ನು ದೂರವಿರಿಸಬೇಕು ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಜಿಲ್ಲಾ ಶ್ರವಣದೋಷ ನಿವಾರಣಾ ಕಾರ್ಯಕ್ರಮ ಅಧಿಕಾರಿ ಡಾ.ಪೂರ್ಣಿಮ ಕಟ್ಟಿಮನಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಶ್ರವಣದೋಷದಿಂದ ಬಳಲುತ್ತಿದ್ದ ಮಕ್ಕಳಿಗೆ ಶ್ರವಣ ಸಾಧನಗಳನ್ನು ಅಳವಡಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರ ಕುಮಾರ್, ಸ್ಥಾನಿಕ ವೈದ್ಯಾಧಿಕಾರಿ ಡಾ.ವಿಶ್ವನಾಥ್ ಕಿನ್ನಾಳ್, ಇಎನ್‌ಟಿ ತಜ್ಞ ವೈದ್ಯರಾದ ಡಾ.ಅನಿಲ್ ರೆಡ್ಡಿ, ಡಾ.ವಿನಯ್, ಶುಶ್ರೂಷಣಾ ಅಧೀಕ್ಷಕರಾದ ವಿಮಲಾಕ್ಷಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡಾ.ವಿಶಾಲಾಕ್ಷಿ, ಡಾ.ಸುರೇಶ್ ಕುಮಾರ್, ಸಹಾಯಕ ಆಡಳಿತ ಅಧಿಕಾರಿ ಗುಮಾಸ್ತೆ ದೇಸಾಯಿ ಸೇರಿದಂತೆ ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿ ಹಾಗೂ ಶ್ರವಣ ಸಾಧನ ಪಡೆದ ಫಲಾನುಭವಿಗಳು ಉಪಸ್ಥಿತರಿದ್ದರು.

# ಮಾ.15 ರಂದು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ಕಾರ್ಯಾಗಾರ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.10–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ 2024–25 ರ ಮಾರ್ಗಸೂಚಿ ಅನ್ವಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ವಿವಿಧ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ಮಾ.15 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ದೃಶ್ಯ ಮತ್ತು ಮುದ್ರಣ ಮಾಧ್ಯಮ ಪ್ರತಿನಿಧಿಗಳಿಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ತಿಳಿಸಿದ್ದಾರೆ.

# ಡಾ.ಸೋಮಶೇಖರಯ್ಯ ಗಾನಕೋಗಿಲೆ ಪ್ರಶಸ್ತಿಗೆ ಭಾಜನ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ:ತಾಲೂಕಿನ ಮಿಣಜಗಿ ಗ್ರಾಮದ ನಿವಾಸಿ, ಖ್ಯಾತ ಸಾಹಿತಿ, ಶಿಕ್ಷಣ ಪ್ರೇಮಿ ಹಾಗೂ ಸಂಗೀತಗಾರರಾದ ಡಾ.ಸೋಮಶೇಖರಯ್ಯ ಹಿರೇಮಠ ಇವರು ಕರ್ನಾಟಕ ರಾಜ್ಯ ಬರಹಗಾರರ ಸಂಘ ( ರಿ) ಹೂವಿನ ಹಡಗಲಿ ಇವರು ಕೊಡಮಾಡುವ ರಾಷ್ಟಮಟ್ಟದ ಗಾನಕೋಗಿಲೆ –2025 ಪ್ರಶಸ್ತಿಗೆ ಭಾಜನರಾಗಿದ್ದಾರೆ. ಡಾ.ಸೋಮಶೇಖರಯ್ಯ ಹಿರೇಮಠ ಅವರು ಸಾಹಿತ್ಯ, ಸಂಗೀತ, ಶಿಕ್ಷಣ ಹಾಗೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಶ್ರೀಯುತರು ಪ್ರಸಕ್ತ ತಾಳಿಕೋಟಿ ಪಟ್ಟಣದ ಪ್ರತಿಷ್ಠಿತ ವೀರಶೈವ ವಿದ್ಯಾವರ್ಧಕ ಸಂಘದ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ದಿನಾಂಕ 16–3– 2025 ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶಿವಮೊಗ್ಗ ಇವರ ಪ್ರಯೋಜಕತ್ವದಲ್ಲಿ ಶಿವಮೊಗ್ಗದ ಬಿ.ಎಚ್. ರಸ್ತೆಯಲ್ಲಿರುವ ಕರ್ನಾಟಕ ಸಂಘ ಸಭಾ ಭವನದಲ್ಲಿ ನಡೆಯಲಿರುವ ರಾಷ್ಟಮಟ್ಟದ ಕನ್ನಡ ನುಡಿ ವೈಭವ–2025 ರ ಕಾರ್ಯಕ್ರಮದಲ್ಲಿ ಅವರಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು.

ಅಭಿನಂದನೆ: ತಾಲೂಕ ಬೇಡ ಜಂಗಮ ಸಮಾಜದ ಗೌರವ ಸದಸ್ಯರು ಹಾಗೂ ಸಮಾಜದ ಏಳಿಗೆಗಾಗಿ ಹಗಲಿರುಳು ಶ್ರಮಿಸುತ್ತಿರುವ ಖ್ಯಾತ ಸಾಹಿತಿಗಳಾದ ಡಾ.ಸೋಮಶೇಖರಯ್ಯ ಹಿರೇಮಠ ಇವರು ಈ ಪ್ರಶಸ್ತಿಗೆ ಭಾಜನರಾಗಿರುವುದಕ್ಕೆ ಅವರನ್ನು ತಾಲೂಕ ಬೇಡ ಜಂಗಮ ಸಮಾಜದ ಗೌರವ ಅಧ್ಯಕ್ಷರು, ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಅಭಿನಂದಿಸಿದ್ದಾರೆ.

# ಕೆಂಭಾವಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಉಚಿತ ಆರೋಗ್ಯ ಶಿಬಿರ ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ

ಕೆಂಭಾವಿ:ಜನ ಔಷಧಿ ದಿನಾಚರಣೆ ಅಂಗವಾಗಿ ಕೆಂಭಾವಿಯ ಸಮುದಾಯ ಆರೋಗ್ಯ ಕೇಂದ್ರ ಆವರಣದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಇಂದು ಉದ್ಘಾಟಿಸಲಾಗಿದೆ. ಸುರಪುರ ತಾಲ್ಲೂಕು ವೈದ್ಯಾಧಿಕಾರಿಗಳು ರಾಜ ವೆಂಕಟಪ್ಪ ನಾಯಕ್ ಅವರು ಶಿಬಿರವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ, ಊರಿನ ಪ್ರಮುಖರಾದ ರವಿ ಸೊನ್ನದ್, ಶರಣಪ್ಪ, ಪುರಸಭೆಯ ಸದಸ್ಯರು ಮತ್ತು ಪುರಸಭೆಯ ಅಧ್ಯಕ್ಷರಾದ ರೈಮನ್ ಪಟೇಲ್ ಉಪಸ್ಥಿತರಿದ್ದರು. ಈ ಉಚಿತ ಆರೋಗ್ಯ ಶಿಬಿರದ ಪ್ರಾರಂಭವು ಗ್ರಾಮಸ್ಥರಿಗೆ ಮೂಲಭೂತ ಆರೋಗ್ಯ ಸೇವೆಗಳನ್ನು ತಲುಪಿಸಲು ಮಹತ್ವಪೂರ್ಣ ಹಂತವಾಗಿದೆ. ಈ ಶಿಬಿರದಲ್ಲಿ ವೈದ್ಯಕೀಯ ಪರೀಕ್ಷೆಗಳು, ಉಚಿತ ಔಷಧಿ ವಿತರಣೆ, ಹಾಗೂ ಆರೋಗ್ಯ ಸಂಬಂಧಿ ಸಲಹೆಗಳು ನೀಡಲಾದವು.

ರಾಜ ವೆಂಕಟಪ್ಪ ನಾಯಕ್ ಅವರು ತಮ್ಮ ಭಾಷಣದಲ್ಲಿ, "ಜನರ ಆರೋಗ್ಯ ನಮ್ಮ ಮೂಲಭೂತ ಕಾಳಜಿಯಾಗಿದೆ. ಈ ಹಂಗೆ ನಾವು ಗ್ರಾಮೀಣ ಪ್ರದೇಶಗಳಲ್ಲಿ ತ್ವರಿತ ಹಾಗೂ ಸರ್ವಾಂಗೀಣ ಆರೋಗ್ಯ ಸೇವೆಗಳನ್ನು ತಲುಪಿಸು ಮುನ್ನ, ಜನರ ಒಳಗೊಂಡ ಸುದೀರ್ಘ ಆರೋಗ್ಯ ಸಮಸ್ಯೆಗಳ ಪರಿಹಾರಕ್ಕೆ ಕೆಲಸ ಮಾಡುತ್ತೇವೆ" ಎಂದು ಹೇಳಿದರು.

ಈ ಕಾರ್ಯಕ್ರಮವು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಪ್ರಮುಖ ಹೆಜ್ಜೆಯಾಗಿದ್ದು, ಸಾರ್ವಜನಿಕರ ಆರೋಗೆಹಿತ್ತಿನ ಮೆಟ್ಟಿಲಿಗೆ ಒಂದು ಶಕ್ತಿ ವೃದ್ಧಿಸುವ ಯೋಜನೆಯಾಗಿ ಪರಿಗಣಿಸಲಾಗಿದೆ. ಪುರಸಭೆಯ ಅಧ್ಯಕ್ಷರಾದ ರೈಮನ್ ಪಟೇಲ್ ಅವರು ಈ ಕಾರ್ಯಕ್ರಮದ ಮಹತ್ವವನ್ನು ಪ್ರತಿಪಾದಿಸಿ, "ನಾವು ಸಮುದಾಯದ ಎಲ್ಲಾ ಸದಸ್ಯರಿಗಾಗಿ ಹೆಚ್ಚಿನ ಆರೋಗ್ಯ ಸೇವೆಗಳನ್ನು ಒದಗಿಸಲು ಸದಾ ಸಿದ್ಧವಿದ್ದೇವೆ" ಎಂದರು.

# ಡಾ.ಬಿ.ಆರ್,ಅಂಬೇಡ್ಕರ ಪ್ರತಿಮೆ ಸ್ಥಾಪನೆಗೆ ಅಡಿಗಲ್ಲು.

## ಮೂರ್ತಿ ನಿರ್ಮಾಣದ ಕಟ್ಟೆಗೆ 10 ಲಕ್ಷ,ರೂ ಪ್ರಸ್ತಾವನೆ– ಸಚಿವ ದರ್ಶನಾಪುರ,




ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಮಾಹಾನ ಗಣ್ಯ ಪುರುಷರ ಪ್ರತಿಮೆ ಸ್ಥಾಪನೆ ಮಾಡಬೇಕಾದಲ್ಲಿಮುಂದೆಯಾವುದೆ ತೊಡಕುಗಳು ಉಂಟಾಗದಂತೆ ಕಾನೂನು ನೀಯಮಗಳ ಮುಖಾಂತರ ಮಾಡುವ ಸದುದ್ದೇಶಗಳಿಂದ 14 ತಿಂಗಳ ಕಾಲಕಾಯಬೇಕಾಯಿತು,ರಾಜ್ಯದ ಸಮಾಜ ಕಲ್ಯಾಣ ಮಂತ್ರಿಗಳಾದ ಡಾ.ಎಚ್,ಸಿ,ಮಾಹಾದೇವಪ್ಪನವರ ಮತ್ತು ಸಾರಿಗೆ ಸಚಿವರಿಗೆ ಬೇಟ್ಟಿಯಾಗಿ ಚರ್ಚೆ ನಡೆಯುತ್ತಲೆ ಸಾಗಿತ್ತು,ಸಚಿವ ಸಂಪುಟದಲ್ಲಿ ಅನುಮೋಧನೆ ಮಾಡುವದರ ಮುಖಾಂತರ ರಾಜ್ಯದಲ್ಲಿ ಮಾದರಿಯಾಗಿ ಕಾನುನಾತ್ಮಕವಾಗಿ ಮೂರ್ತಿ ಸ್ಥಾಪನೆಗೆ ಅನೂಕೂಲವಾಗಿದೆ, ದಲಿತಪರ ಸಂಘಟನೆಗಳ ಮುಖಂಡರ ಸತತಪ್ರಯತ್ನಗಳು ಈ ಕಾರ್ಯಕ್ಕೆ ಶ್ಲಾಘನೀಯ, ಮುಂದಿನ ದಿನಗಳಲ್ಲಿ ಪ್ರತಿಮೆ ಸ್ಥಾಪನೆಗೆಕಟ್ಟೆನಿರ್ಮಾಣಕ್ಕಾಗಿ10 ಲಕ್ಷ,ರೂಪ್ರಸ್ತಾವನೆಕಳಿಸಲಾಗಿದೆ ಎಂದು ಸಣ್ಣ ಕೈಗಾರಿಕಾ ಸಾರ್ವಜನಿಕ ಉಧ್ಯಮಗಳ ಮಂತ್ರಿಗಳಾದಶರಣಬಸ್ಸಪ್ಪಗೌಡ ದರ್ಶನಾಪುರ ತಿಳಿಸಿದರು, ಅವರು ನಗರದ ಹೃದಯ ಭಾಗದಲ್ಲಿರುವ ಹಳೆ ಬಸ್ ನಿಲ್ದಾಣದ ಅವರಣದಲ್ಲಿ ವಿಶ್ವ ರತ್ನ ಡಾ,ಬಾಬಾಸಾಹೇಬ್ ಅಂಬೇಡ್ಕರವರ ಪ್ರತಿಮೆ ಸ್ಥಾಪನೆಗೆಅಡಿಗಲ್ಲುನೇರವೇರಿಸಿ ಮಾತನಾಡಿದರು,ಮುಂದುವರೆದು ಮಾತನಾಡಿದ ಅವರು, ಡಾ, ಬಾಬಾಸಾಹೇಬರು ಸರ್ವರ ನಾಯಕರುಅವರನ್ನುಪ್ರತಿಯೊಬ್ಬರು ಮನವರಿಕೆ ಮಾಡಿಕೊಳ್ಳಬೇಕು, ಸರ್ಕಾರದ ಸೌಲಭ್ಯಗಳನ್ನು ಸಮರ್ಪಕವಾಗಿ ಕಡೆಯ ವ್ಯಕ್ತಿಗೂ ಮುಟ್ಟಿಸುವ ಕಾರ್ಯ ದಲಿಪರ ಸಂಘಟನೆಗಳು ಮಾಡಬೇಕು ಸೌಲಭ್ಯ ಪಡೆದುಕೊಂಡವರೇ ಪುನಃ ತೆಗೆದುಕೊಳ್ಳುವದು ಬೇಡ! ದುರ್ಭಲರ ಮನೆಗೂ ಸರ್ಕಾರದ ಯೋಜನೆಗಳು ಮುಟ್ಟುವಲ್ಲಿ ಸಂಘಟನೆಗಳ ಕಾರ್ಯ ಅವಶ್ಯಕವಾಗಿದೆ ಎಂದು ಅವರು ಕರೆ ನಿಡಿದರು, ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ,ಹಿರಿಯ ಕಾಂಗ್ರೆಸ್ ದುರೀಣರಾದ ಚಂದ್ರಶೇಖರ ಆರಬೋಳರವರು ಮಾತನಾಡಿ, ಸಚಿವ ದರ್ಶನಾಪುರವರು ಪ್ರಗತಿಪರ ಚಿಂತಕರವಾಗಿದ್ದಾರೆ, ಅವರಿಗೆ ಸಹಕಾರ ನೀಡಿ ನಮ್ಮ ಕ್ಷೇತ್ರವನ್ನು ಪ್ರಗತಿಯತ್ತ ಮುಟ್ಟಿಸುವಲ್ಲಿನಮ್ಮ ಪಾತ್ರಗಳು ಅವ್ಯಕವಾಗಿದೆ, ಎಂದರು, ಕಾಂಗ್ರಸ್ ಮುಖಂಡರಾದ ಶರಣಪ್ಪ ಸಲಾದಪುರ ಮಾತನಾಡಿ,ಮುಂದಿನದಿನಗಳಲ್ಲಿ ಜಗಜ್ಯೋತಿ ಬಸವೇಶ್ವರವರ ಜಯಂತಿಯನ್ನುಸರ್ವಸಮಾಜದ ಒಗ್ಗೂಡಿಕೆಯಿಂದ ಮಾಡಿ ನಾಡಿನಲ್ಲಿ ಶರಣರು ಸಂತರು ಮಾಡಿದ ಮಾಹಾತ್ಕಾರ್ಯಗಳ ಕುರಿತು ಯುವ ಪೀಳಿಗೆಗೆ ಮನವರಿಕೆ ಮಾಡಬೇಕಾಗಿದೆ ಎಂದರು, ರಾಜ್ಯ ರೈತ ಸಂಘದ ವರೀಷ್ಠರಾದ ಪಚ್ಯ ನಂಜುಂಡಸ್ವಾಮೀಯವರುಮತ್ತು ಡಾ,ಶರಣು ಗದ್ದುಗೆ, ಹಿರಿಯ ವಕೀಲರಾದ ಆರ್,ಚೆನ್ನಬಸ್ಸು ,ಮಾತನಾಡಿದರು,ವೇದಿಕೆಯಲ್ಲಿ ಸಿದ್ದಲಿಂಗಣ್ಣ ಆನೆಗುಂದಿ, ಬಸವರಾಜಪ್ಪಗೌಡ ತಂಗಡಗಿ, ಬಸವರಾಪ್ಪಗೌಡ ಹೆರುಂಡಿ, ದೇವಿಂದ್ರಪ್ಪ ಗೌಡಗೇರಾ, ಅಯ್ಯಣ್ಣ ಕನ್ಯಾಕೊಳೂರ, ಗೌಡಪ್ಪಗೌಡ ಆಲ್ದಾಳ. ಈರಣಗೌಡ ಮಲ್ಲಬಾದಿ, ಸೈಯದ್ ಮುಸ್ತಾಫ ಡಾ, ಭೀಮಣ್ಣ ಮೇಟಿ, ಧರ್ಬಾನ, ಗೀರೆಪ್ಪಗೌಡ ಬಾಣಿತಿಹಾಳ, ಸಣ್ಣ ನಿಂಗಣ್ಣ ನಾಯ್ಕೊಡಿ, ಸೈಯದ್ ಮುಸ್ತಾಫ ದರ್ಭಾನ,,ಸೈಯಿದ್ ಖಾದ್ರಿ, ಶಾಂತಪ್ಪ ಕಟ್ಟಿಮನಿ, ಅಪ್ಪಣ್ಣದಶವಂತ,ಶಿವುಕುಮಾರ ತಳವಾರ, ಆಸೀನರಾಗಿದ್ದರು, ಈ ಕಾರ್ಯಕ್ರಮದಲ್ಲಿ ದಲಿತ ಮುಖಂಡರಾದಮಲ್ಲಿಖಾರ್ಜುನ ಪೂಜಾರಿ ಪ್ರಸ್ತಾವಿಕವಾಗಿ ಮಾತನಾಡಿದರು, ದಲಿತ ಮುಖಂಡರಾದ ನೀಲಕಂಠ ಬಡಿಗೇರವರು ಸ್ವಾಗತಿಸಿದರು, ಶ್ರೀಶೈಲ್ ಹೋಸಮನಿ, ಕಾರ್ಯಕ್ರಮ ನೀರೂಪಿಸಿದರು, ದಲಿತ ಮುಖಂಡರಾದ ನಾಗಣ್ಣ ಬಡಿಗೇರ, ಶಿವಪುತ್ರ ಜವಳಿ,ಮಾನಸಿಂಗ್ ಚೌಹಾಣ್, ಗುಂಡಪ್ಪತುಂಬಗಿ,ಬಸವರಾಜ ಅರುಣಿ, ರುದ್ರಪ್ಪ ಹುಲಿಮನಿ, ಸೋಪಣ್ಣ ದರಿಯಾಪುರ, ಭೀಮರಾಯ ಹೋಸಮನಿ, ರಾಯಪ್ಪಸಾಲಿಮನಿ,ಮಾನಯ್ಯ ಹೋಸಮನಿ, ಮಲ್ಲಪ್ಪ ಬೀರನೂರ, ಮಾಹಾದೇವ ದಿಗ್ಗಿ, ಮರೆಪ್ಪ ಜಾಲಿಮೆಂಚಿ, ಶುಭಾಸ ತಳವಾರ, ಮಾನಯ್ಯ ಹತ್ತಿಗೂಡೂರ, ಹೊನ್ನಪ್ಪ ಗಂಗನಾಳ,ಜಯರಡ್ಡಿಹೋಸಮನಿ, ಚಂದ್ರಶೇಖರ ಗುತ್ತೆದಾರ, ಗುರುನಾಥ ಬಾಣತಿಹಾಳ ಸೇರಿದಂತೆ ಅನೇಕ ಸಮಾಜದ ಗಣ್ಯರು ಹಿರಿಯರು ದಲಿತಪರ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು,

# ಸೇಡಂ, ಮಾ.12 ರಂದು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಆಚರಣೆ




ಮಲ್ಲಮ್ಮ ನುಡಿ ವಾರ್ತೆ

ಸೇಡಂ : ಮಾ,10. ತಾಲೂಕಿನ ಹೃದಯಬಾಗದ ಹಲಕರ್ಟಿ ಓಣಿಯಲ್ಲಿ ಶ್ರೀಮದ್ ಜಗದ್ಗುರು ರೇಣುಕಭಗವತ್ಪಾದಂಗಳವರ 47 ನೇ ಜಯಂತಿ ಉತ್ಸವ ಹಾಗೂ ಧಾರ್ಮಿಕ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ

ಸ್ವಸ್ತಿಶ್ರೀ ವಿಜಯಭೋದಯ ಶ್ರೀ ಮನ್ನುಪ ಶಾಲಿವಾಹನ ಶಕೆ 1946 ಕ್ರೋಧಿನಾಮ ಸಂವತ್ಸರ ಮಿತಿ ಪಾಲ್ಗುಣ ಶುದ್ದ 13 ರೊಜ ಬುಧವಾರ ದಿನಾಂಕ 12–03–2025 ರಂದು ಶ್ರೀಮದ್ ಜಗದ್ಗುರು ವೀರಶೈವ ಮಹಾಮತ ಸಂಸ್ಥಾಪಕರು ಪ್ರಥಮಗಣ ನಾಯಕರು ಸಕಲ ಮಾನವ ಕುಲಕೋಟಿ ಉದ್ಧಾರಕರು ಶ್ರೀ ಗುರು ಸಾರ್ವಭೌಮರಾದ ಶ್ರೀಶ್ರೀಶ್ರೀ 1008 ಜಗದ್ಗುರು ರೇಣುಕಾಚಾರ್ಯ ಜಯಂತಿ ಉತ್ಸವವನ್ನುಶ್ರೀರೇವಣಾಸಿದ್ದೇಶ್ವರ ದೇವಸ್ಥಾನದಲ್ಲಿ ನೆರವೇರಿಸಲಿದ್ದು.

ಸಕಲಸದ್ಭಕ್ತರುಈಕಾರ್ಯಕ್ರಮಕ್ಕೆ ಆಗಮಿಸಿ

ಶ್ರೀಗುರುಕೃಪೆಗೆಪಾತ್ರರಾಗಬೇಕೆಂದು ವಿನಂತಿ

ಬುಧವಾರ ದಿನಾಂಕ 12–03–2025 ರಂದು ಬೆಳಿಗ್ಗೆ 7–15ಕ್ಕೆ ಮೂಲ ಕತೃ ಶ್ರೀ ಜಗದ್ಗುರು ರೇಣುಕಾರ್ಯರ ಗದ್ದುಗೆಗೆ ರುದ್ರಾಭಿಷೇಕ

ಬೆಳಿಗ್ಗೆ 10–30ಕ್ಕೆ

ಉಮೇಶಪಾಟೀಲ್ ಯಾಕಾಪೂರ ಇವರಿಂದ

ಜಂಗಮರಿಗೆಪ್ರಸಾದ ಶೆಟ್ಟಿಗೌಡ ಪರಿವಾರದವರಿಂದ

ಮಧ್ಯಾಹ್ನ3–00ಕ್ಕೆ ಶ್ರೀಮದ್ ಜಗದ್ಗುರು ರೇಣುಕಾಚಾರ್ಯರ ತೊಟ್ಟಿಲು ಕಾರ್ಯಕ್ರಮ ಅಕ್ಕನ ಬಳಗದ ಮಾತೆಯರಿಂದ

ಶ್ರೀಮದ್ ಜಗದ್ಗುರು ರೇವಣಸಿದ್ದೇಶ್ವರ ದೇವರ ಭಾವಚಿತ್ರದ ಭವ್ಯ ಮೆರವಣಿಗೆ ಹಲಕರ್ಟಿ ಓಣಿ ಮುಖಾಂತರ ಶ್ರೀ ಕೊತ್ತಲ ಬಸವೇಶ್ವರ ದೇವಾಲಯದವರೆಗೆಸಾಂ.5–30ಕ್ಕೆ. ಸಮಾರೋಪ ಸಮಾರಂಭ.ಸ್ಥಳ : ಶ್ರೀ ಕೊತ್ತಲ ಬಸವೇಶ್ವರ ದೇವಾಲಯ, ಸೇಡಂ

ದಿವ್ಯ ಸಾನಿಧ್ಯ :

ಪೂಜ್ಯಶ್ರೀ ಷ.ಬ್ರ: ಶಿವಶಂಕರ ಶಿವಾಚಾರ್ಯರು, ಶಿವಶಂಕರ ಮಹಾಂತ ಮಠ ಸೇಡಂ

ಪೂಜ್ಯ ಶ್ರೀ ಷ.ಬ್ರ. ಡಾ। ತ್ರಿಮೂರ್ತಿ ಶಿವಾಚಾರ್ಯರು ಮಹಾಂತೇಶ್ವರಮಠ ತೊಟ್ನಳ್ಳಿ ಸಂಗಾವಿ.

ಪೂಜ್ಯ ಶ್ರೀ ಷ॥ ಬ್ರ॥ ಅಭಿನವ ಪರ್ವತೇಶ್ವರ ಶಿವಾಚಾರ್ಯರು ಬೆಳಗುಂಪಾ ಪೂಜ್ಯಶ್ರೀ ಮ.ನಿ.ಪ್ರ ಪಂಚಾಕ್ಷರ ಮಹಾಸ್ವಾಮಿಗಳು ಹಾಲಪ್ಪಯ್ಯ ವಿರಕ್ತಮಠ ಸೇಡಂ

ನೇತೃತ್ವ:

ಪೂಜ್ಯ ಶ್ರೀ ಸದಾಶಿವ ಮಹಾಸ್ವಾಮಿಗಳು ಶ್ರೀ ಕೊ.ಬ. ದೇವಾಲಯ, ಸೇಡಂ

ಮುಖ್ಯ ಅತಿಥಿಗಳು:

ಡಾ.ಶರಣಪ್ರಕಾಶ ಪಾಟೀಲ್ ಮಾನ್ಯ ವೈದ್ಯಕೀಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು,

ಉದ್ಘಾಟಕರು:

ರಾಜಕುಮಾರ ಪಾಟೀಲ ತೆಲ್ಕೂರ್ ಮಾಜಿ ಶಾಸಕರು, ಸೇಡಂ

ಅಧ್ಯಕ್ಷತೆ: ಶ್ರೀಮತಿ ಶ್ರೀಯಾಂಕ ಧನಶ್ರೀ ತಹಸೀಲ್ದಾರರು, ಸೇಡಂ

ವೀರೇಂದ್ರನಾಗಿಂದ್ರಪ್ಪರುದನುರ ಅಧ್ಯಕ್ಷರು, ರೇಣುಕಾಚಾರ್ಯ ಜಯಂತಿ ಉತ್ಸವ ಸಮಿತಿ, ಸೇಡಂ ಮಹೇಶಚಂದ್ರಶೇಖರಯಳಮನಿ ಪ್ರಧಾನ ಕಾರ್ಯದರ್ಶಿಗಳು ರೇಣುಕಾಚಾರ್ಯಜಯಂತಿಉತ್ಸವ ಸಮಿತಿ, ಸೇಡಂ ರಾಜಶೇಖರ ನೀಲಂಗಿ ಅ.ಭಾ.ವಿ.ಮ.ಸಭಾ ತಾಲೂಕಾ ಘಟಕದ ಅಧ್ಯಕ್ಷರು, ಸೇಡಂ

ಸಾಧಕರಿಗೆ ಸನ್ಮಾನ :

ಸಿದ್ದಪ್ಪಾಯಿನ್‌ರಂಜೋಳ,ಶರಣಬಸ್ಸಪ್ಪ ಹಾಗರಗಿ ವಕೀಲರು, ರಾಜೇಶ ಪ್ರಸಾದ ಚಂದಾಪೂರ, ಶರಣು ಆವಂಟಿ ಮಳಖೇಡ, ಶ್ರೀಮತಿ ಶಾಕಾಂಬರಿ ಬೊಮ್ಮನಹಳ್ಳಿ, ಕುಮಾರಿ ಕೃತಿ ಗುಂಡಪ್ಪ ಅಲ್ಲೂರ, ಕಾರ್ಯಕ್ರಮದ ನಂತರ ಪ್ರಸಾದ ವಿತರಣೆ ಸ್ಥಳ : ಶ್ರೀ ಕೊತ್ತಲ ಬಸವೇಶ್ವರ ದೇವಾಲಯ ಸೇಡಂ

ಸರ್ವರಿಗೂ ಆದರದ ಸುಸ್ವಾಗತ

ಶ್ರೀರೇವಣಸಿದ್ದೇಶ್ವರದೇವಾಲಯ ಅಖಿಲ ಭಾರತ ವೀರಶೈವ ಚಾರಿಟೇಬಲ್ ಮತ್ತು ವೆಲ್ ಫೇರ್ ಟ್ರಸ್ಟ್ ಹಾಗೂ ರೇಣುಕಾ ಜಯಂತಿ ಉತ್ಸವ ಸಮಿತಿ, ಸೇಡಂ ಮಹಾಸಭಾ ತಾಲೂಕ ಘಟಕ, ನಗರ ಘಟಕ. ಯುವ ಘಟಕ, ಮಹಿಳಾ ಘಟಕ, ಹಾಗೂ

ವೀರಶೈವ ಶೈಕ್ಷಣಿಕ ಹಾಗೂ ಕಲ್ಯಾಣ ಅಭಿವೃದ್ಧಿ ಟ್ರಸ್ಟ, ಸೇಡಂ ರವರು ಸರ್ವರಿಗೂ ಆದರದ ಸ್ವಾಗತ ಕೊರಿರುತ್ತಾರೆ ಎಂದು ಮಹೇಶ ಎಳಮನಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಉತ್ಸವದ ಪ್ರಧಾನ ಕಾರ್ಯದರ್ಶಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಈ ವಿಷಯ ತಿಳಿಸಿದರು ದೇವಸ್ಥಾನದ ಕೋಶಾಧ್ಯಕ್ಷ ಶಂಕ್ರಪ್ಪ ಕೊಸಗಿ. ಶಿವಶಂಕರಪ್ಪ ಬಿಡಪ. ನಾಗೇಂದ್ರಪ್ಪ ಡೊಳ್ಳಾ. ಶಿವಕುಮಾರಕೇರಿಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಸಂಸ್ಕಾರಯುತ ಶಿಕ್ಷಣ ಅತ್ಯವ್ಯಶಕ ಸಂಸದ ಸಾಗರಖಂಡ್ರೆ



ಮಲ್ಲಮ್ಮ ನುಡಿ ವಾರ್ತೆ

> ಗ್ರಾಮೀಣ ಪರಿಸರದಲ್ಲಿ, ಗುಣಾತ್ಮಕ ಮತ್ತು ತುಲಾನಾತ್ಮಕ ಶಿಕ್ಷಣ ನೀಡುವಲ್ಲಿ ಮಹಾತ್ಮಾಗಾಂಧಿ ಪ್ರೌಢಶಾಲೆಯ ಶಿಕ್ಷಕರು ಶ್ರಮಿಸುತ್ತಿರುವುದು ಸಂತಸದ ಸಂಗತಿ. ಶಿಕ್ಷಣ ಸಂಸ್ಥೆಗೆ ನಮ್ಮಿಂದ ಬೇಕಾದ ಸಹಾಯ ಮಾಡಲು ನಾನು ಸದಾ ಸಿದ್ದ
>
> **–ಸಾಗರ ಖಂಡ್ರೆ, ಸಂಸದರು ಬೀದರ.**

ಭಾಲ್ಕಿ: ಇಂದಿನ ಮಕ್ಕಳಿಗೆ ಸಂಸ್ಕಾರಯುತಶಿಕ್ಷಣಅತ್ಯವಶ್ಯಕವಾಗಿದೆ ಎಂದು ಬೀದರ ಸಂಸದ ಸಾಗರ ಈಶ್ವರ ಖಂಡ್ರೆ ಅಭಿಪ್ರಾಯಪಟ್ಟರು.

ತಾಲೂಕಿನ ಮಹಾತ್ಮಾಗಾಂಧಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ 41ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಬೆಳೆಯುವ ಪೈರು ಮೊಳಕೆಯಲ್ಲಿ ಎನ್ನುವಂತೆ ಮಕ್ಕಳ ಗುಣಮಟ್ಟ ವಿದ್ಯಾರ್ಥಿಗಳಿದ್ದಾಗಲೇ ತಿಳಿಯುವುದು. ಹೀಗಾಗಿ ನಮ್ಮಲ್ಲಿ ಸಂಸ್ಕಾರಯುತ ಶಿಕ್ಷಣ ನೀಡುವುದು ಅತ್ಯವಶ್ಯಕವಾಗಿದೆ. ತಂದೆ, ತಾಯಿ, ಗುರು, ಹಿರಿಯರನ್ನು ಪ್ರೀತಿಸುವ ಶಿಕ್ಷಣ ನಮ್ಮದಾಗಬೇಕು. ಪಾಶ್ಚಿಮಾತ್ಯ ಸಂಸ್ಕೃತಿ ನಮ್ಮನ್ನು ಹಾಳು ಮಾಡುತ್ತಲಿದೆ. ಮೊಬೈಲ್ ಗೀಳಿನಿಂದ ವಿದ್ಯಾರ್ಥಿಗಳು ದೂರ ಬರಬೇಕು. ಶೈಕ್ಷಣಿಕವಾಗಿ ಮಾತ್ರ ಮೊಬೈಲ್ ಬಳಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ್ ಮಾತನಾಡಿ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಇದು ತಪಸ್ಸಿನ ಕಾಲ, ತಮ್ಮ ಎಲ್ಲಾ ಚಟುವಟಿಕೆಗಳನ್ನು ಬದಿಗೊತ್ತಿ ಓದಿನಕಡೆ ಗಮನ ಹರಿಸಬೇಕು. ಇದು ಸ್ಪರ್ಧಾತ್ಮಕ ಯುಗ, ಇಲ್ಲಿ ನಾವು ಎಲ್ಲರಕ್ಕಿಂತಲೂ ಮುಂದೆ ಬರುವ ಸಾಹಸ ಮಾಡಬೇಕಿದೆ. ಹೀಗಾಗಿ ಪ್ರತಿಯೊಬ್ಬರೂ ಪ್ರತಿಶತ ಅಂಕಕ್ಕಾಗಿ ಹಾತೊರಯೆಬೇಕು ಎಂದು ಹೇಳಿದರು.

ಕೆಎಲ್‌ಇ ಸಂಸ್ಥೆಯ ಆಡಳಿತಾಧಿಕಾರಿ ಕ್ರಾಂತಿ ಕಲವಾಡಿಕರ್ ಮಾತನಾಡಿ, ಮಹಾತ್ಮಾಗಾಂಧಿ ಪ್ರೌಢಶಾಲೆಯಲ್ಲಿ ಪ್ರತಿವರ್ಷ ಉತ್ತಮ ಫಲಿತಾಂಶ ದೊರೆಯುತ್ತಲಿದೆ. ಗ್ರಾಮೀಣ ಭಾಗದಲ್ಲಿ ಗುಣಾತ್ಮಕ ಕಲಿಕೆಗಾಗಿ ನಮ್ಮ ಶಿಕ್ಷಕರು ಶ್ರಮಪಡುತ್ತಲಿದ್ದಾರೆ ಎಂದು ಹೇಳಿದರು. ಕೆಎಲ್‌ಇ ಸಂಸ್ಥೆಯ ಅಧ್ಯಕ್ಷೆ ಮೋಜಾಬಾಯಿ ಕಲವಾಡಿಕರ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಶಿಕ್ಷಕ ಕಿರಣಕುಮಾರ ಭಾಟಸಾಂಗವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕರ್ನಾಟಕ ರಾಜ್ಯ ಪ್ರೌಢಶಾಲೆ ಸಹ ಶಿಕ್ಷಕ ಸಂಘದ ಅಧ್ಯಕ್ಷ ದತ್ತು ಕಾಟಕರ ವಿದ್ಯಾರ್ಥಿಗಳ ಕಲಿಕಾ ಮಟ್ಟ ಸುಧಾರಿಸುವ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಸಂಜೀವಕುಮಾರ ಕಲವಾಡಿದರ, ಕಾರ್ಯದರ್ಶಿ ಚಿರಂಜೀವ ಕಲವಾಡಿಕರ್, ಇಸಿಓ ಮಲ್ಲಿಕಾರ್ಜುನ ಕನ್ನಾಳೆ, ಸಹದೇವ.ಜಿ, ಯುವ ಮುಖಂಡ ಭರತ ಸಿದ್ದಾ, ಪ್ರಕಾಶ ಬಿರಾದಾರ, ಗೋವಿಂದರಾವ ಬಿರಾದಾರ, ದತ್ತಾತ್ರಿ ಬಿರಾದಾರ, ರಾಮರಾವ ತೋರಣೆ, ಅರತಿ ಥಮಕೆ, ಆನಂದ ಖಂಡಗೊಂಡ, ಪ್ರವೀಣ ಸಿಂಧೆ, ಓಂಝೋಡ್ ಬಿರಾದಾರ, ಪ್ರದೀಪ ಜೊಳದಪಕೆ, ವಿಜಯಕುಮಾರ ಗುತ್ತೇದಾರ ಉಪಸ್ಥಿತರಿದ್ದರು.

# ಗೋಗಲ್ ಮ್ಯಾಪ್ ಬಳಿಸಿ ಕಳ್ಳತನ ಮಾಡುತ್ತಿದ್ದ ಖದೀಮರು ಅರೆಸ್ಟ್.!



ಕಲಬುರಗಿ:ಗೋಗಲ್ ಮ್ಯಾಪ್ ಬಳಿಸಿ ಸೋಲಾರ್ ಪ್ಲ್ಯಾಂಟ್ ಗೆ ಬಳಸುತ್ತಿದ್ದ ಕಾಪರ್ ವೈರ್ ಕಳ್ಳತನ ಮಾಡ್ತಿದ್ದ ಇಬ್ಬರು ಖತರ್ನಾಕ್ ಅಂತರರಾಜ್ಯ ಖದೀಮರನ್ನು ಬಂಧಿಸುವಲ್ಲಿ ಕಲಬುರಗಿ ಪೋಲಿಸರು ಯಶಸ್ವಿಯಾಗಿದ್ದಾರೆ.

ತೆಲಂಗಾಣ ಮೂಲದ ಪೋಲಾ ನಾಗೇಶ್ ಮತ್ತು ಯರಕುಲಿ ರಮೇಶ್ ಬಂಧಿತ ಆರೋಪಿಗಳಾಗಿದ್ದು, ಚಿತ್ತಾಪುರ ತಾಲೂಕಿನ ನಾಲವಾರ ಗ್ರಾಮದ ಹೊರವಲಯದಲ್ಲಿ ಸೋಲಾರ್ ಪ್ಲಾಂಟ್ ನಲ್ಲಿ 7 ಸಾವಿರ ಮೀಟರ್ ಕಾಪರ್ ವೈರ್ ಕದ್ದು ಎಸ್ಕೇಪ್ ಆಗಿದ್ದರು. ಈ ಕುರಿತು ಪ್ರಕರಣ ದಾಖಲಿಸಿ ಕೊಂಡ ವಾಡಿ ಪೋಲಿಸರು ಕಾರ್ಯಚರಣೆ ನಡೆಸಿ ಆರೋಪಿಗಳ ಎಡೆಮುರಿ ಕಟ್ಟುವಲ್ಲಿ ಸಫಲರಾಗಿದ್ದಾರೆ

ಈ ಇಬ್ಬರು ಖದೀಮರು ಗೂಗಲ್ ಮ್ಯಾಪ್ ಮೂಲಕ ಸೋಲಾರ ಪ್ಲ್ಯಾಂಟ್ ಸರ್ಚ್ ಮಾಡಿ, ಗೂಗಲ್ ಮ್ಯಾಪ್ ಮೂಲಕ ಸ್ಥಳಕ್ಕೆ ಹೋಗಿ ಬೆಲೆ ಬಾಳೋ ಕಾಪರ್ ವೈರ್ ಕಳ್ಳತನ ಮಾಡಿ ಮಾರಾಟ ಮಾಡ್ತಿದ್ದರು. ಈ ಹಿಂದೆ ಸೇಡಂ ಠಾಣಾ ವ್ಯಾಪ್ತಿಯಲ್ಲೂ ಇದೆ ಗ್ಯಾಂಗ್ ಕಳ್ಳತನ ಮಾಡಿರುವುದು ವಿಚಾರಣೆ ವೇಳೆ ಬಯಲಾಗಿದೆ.

ಕೊನೆಗೂ ಇಬ್ಬರು ಖದೀಮರನ್ನ ಬಂಧಿಸುವಲ್ಲಿ ವಾಡಿ ಠಾಣೆ ಪೊಲೀಸರು ಯಶಸ್ವಿಯಾಗಿದ್ದು, ಬಂಧಿತರಿಂದ 6 ಲಕ್ಷ 6 ಸಾವಿರ ಮೌಲ್ಯದ ವಸ್ತು ಜಪ್ತಿ ಮಾಡಿಕೊಳ್ಳಲಾಗಿದೆ ಎಸ್ ಪಿ ಅಡ್ಡೂರು ಶ್ರೀನಿವಾಸಲು ತಿಳಿಸಿದ್ದಾರೆ.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಜನ ಕಲ್ಯಾಣ:ರಾಘವೇಂದ್ರ ಗೌಡ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಶ್ರೀಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನಡೆದ ಬಂದ ದಾರಿ, ಪ್ರಗತಿ ಬಂದು ಸ್ವ ಸಹಾಯ ಸಂಘಗಳ ಬ್ಯಾಂಕಿನ ಅಚ್ಚುಕಟ್ಟಾದ ವ್ಯವಹಾರ, ಸದಸ್ಯರಿಯ ಲಾಭಾಂಶ, ಜನ ಮಂಗಳ ಕಾರ್ಯಕ್ರಮ, ಮೂಲಕ ಜನರ ಕಲ್ಯಾಣ ಮಾಡುವ ಪ್ರಯತ್ನ ಹಾಗೂ ಸಂಘಗಳ ನಿರ್ವಹಣೆ ಅಚ್ಚುಕಟ್ಟಾಗಿ ಮಾಡುತ್ತಿವೆ ಎಂದು ಯುವಜನಾಧಿಕಾರಿಯವರು ಶ್ರೀಯುತ ರಾಘವೇಂದ್ರ ಗೌಡ ಹೇಳಿದರು.

ಪಟ್ಟಣದ ಬಸವ ಕಲ್ಯಾಣ ಮಂಟಪದಲ್ಲಿ ರವಿವಾರ ಕಮಲನಗರ ವಲಯದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆವತಿಯಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಸದ್ರಿ ರಾಘವೇಂದ್ರ ಗೌಡ ಜ್ಯೋತಿಬೆಳೆ ಸಮುದ್ರ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿ ಮಾತನಾಡಿದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರು ಮಡಿವಾಳಪ್ಪ ಮುರ್ಕೆ ಮಾತನಾಡಿ, ಶುದ್ಧಗಂಗಾ ಘಟಕ, ಮಧ್ಯವರ್ಜಿನ ಶಿಬಿರ, ಕೆರೆ ಕಾಮಗಾರಿ , ನಿರ್ಗತಿಕರಿಗೆ ಮಾಶಾಸನ ಹಾಗೂ ವಾಸ್ತಲ್ಯ ಮನೆ ರಚನೆ, ರೈತರಿಗೆ ಕೃಷಿ ಕಾರ್ಯಕ್ರಮ, ಹೈನುಗಾರಿಕೆ ಕಾರ್ಯಕ್ರಮ, ಬೀದರ್ ಮಾದರಿಯ ಹೈನುಗಾರಿಕೆ, 10 ಹಲವು ಕಾರ್ಯಕ್ರಮ ಬಗ್ಗೆ ಹೇಳಿದರು.

ಮಹಿಳೆಯರ ಸಬಲೀಕರಣ, ಪ್ರಗತಿ ಬಂದ ಸ್ವ ಸಹಾಯ ಸಂಘಗಳ ನಿರ್ವಹಣೆ, ಮಹಿಳೆಯರ ಸ್ವಉದ್ಯೋಗ ಇತ್ಯಾದಿ ಬಗ್ಗೆ ಕಮಲನಗರ ಗ್ರಾಮ ಪಂಚಾಯತ್ ಅಧ್ಯಕ್ಷರು ಶ್ರೀಮತಿ ಸುಸಲಬಾಯಿ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಉತ್ತಮ ಸಾಧನೆ ಮಾಡಿರುವ ಸಂಘಗಳಿಗೆ ಚೆಕ್ ನೀಡಲಾಯಿತು.

ಕಾರ್ಯಕ್ರಮದಲ್ಲಿ ಒಕ್ಕೂಟ–ದ ಪದಾಧಿಕಾರಿಯವರು ಕೃಷಿ ಮೇಲ್ವಿಚಾರಕರು ಬಸವರಾಜ್, ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಶ್ರೀಮತಿ ಸಂಗೀತ, ತಾಲೂಕ ನೋಡಲ್ ಅಧಿಕಾರಿ ಮಹದೇವಪ್ಪ, ವಲಯದ ಸೇವಾ ಪ್ರತಿದಿಯವರು ಹಾಗೂ ಸಿಎಸ್‌ಸಿ ಸೇವಾದಾರರು ಮತ್ತು ಪ್ರಗತಿ ಬಂದು ಸ್ವಸಹಾಯ ಸಂಘದ ಸರ್ವ ಸದಸ್ಯರು ಉಪಸ್ಥಿತರಿದ್ದರು.

# ವಿಮಾನ ಸೇವೆ ಪುನರರಾಂಭ ಜನರಿಗೆ ಅನುಕೂಲ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಗಡಿ ಜಿಲ್ಲೆಯಲ್ಲಿ ವಿಮಾನ ಸೇವೆ ಪುನರರಾಂಭಕ್ಕೆ ಶ್ರಮ ವಹಿಸಿದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರನ್ನು ನಮ್ಮ ಕರ್ನಾಟಕ ಸೇನೆ ಪದಾಧಿಕಾರಿಗಳು ಸನ್ಮಾನಿಸಿ, ಕೃತಜ್ಞತೆ ಸಲ್ಲಿಸಿದರು.

ಪಟ್ಟಣದ ಜಿಲ್ಲಾ ಉಸ್ತುವಾರಿ ಸಚಿವರ ನಿವಾಸದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಗಣೇಶ ಪಾಟೀಲ್ ನೇತೃತ್ವದಲ್ಲಿ ಸಚಿವ ಈಶ್ವರ ಖಂಡ್ರೆ ಅವರನ್ನು ಸನ್ಮಾನಿಸಲಾಯಿತು.

ನಂತರ ಸಂಘಟನೆ ಅಧ್ಯಕ್ಷ ಗಣೇಶ ಪಾಟೀಲ್ ಮಾತನಾಡಿ, ಗಡಿ ಜಿಲ್ಲೆಯಲ್ಲಿ ವರ್ಷದಿಂದ ನನೆಗುದಿಗೆ ಬಿದ್ದಿದ್ದ ವಿಮಾನ ಸೇವೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಸಂಸದ ಸಾಗರ ಖಂಡ್ರೆ ಅವರ ಪ್ರಯತ್ನ ದಿಂದ ಇದೇ ಏ.15 ರಿಂದ ಪುನರಾರಂಭಗೊಳ್ಳುತ್ತಿದೆ.

ಜತೆಗೆ ವಿಮಾನ ಹಾರಾಟ ಸಮಯವೂ ಬದಲಾವಣೆ ಮಾಡಲಾಗಿದೆ. ಇದರಿಂದ ಗಡಿ ಜಿಲ್ಲೆಯ ಜನರಿಗೆ ಅನುಕೂಲ ಆಗಲಿದೆ.&ಟಿಭಿ;

ಸರಕಾರದ ವಿವಿಧ ಯೋಜನೆಗಳಿಂದ ಅನುದಾನ ಹೊಂದಿಸಿ ವಿಮಾನ ಸೇವೆ ಪುನರರಾಂಭಿಸಲು ಅನುಮತಿ ಕೊಡಿಸಿದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಸಂಸದ ಸಾಗರ ಖಂಡ್ರೆ ಅವರನ್ನು ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸೇನೆ ಜಿಲ್ಲಾ ಉಪಾಧ್ಯಕ್ಷ ರಾಜಕುಮಾರ ಪಾಟೀಲ್, ಪ್ರಧಾನ ಕಾರ್ಯದರ್ಶಿ ಸಂಜು ಯಾದವ, ಸಂಘಟನಾ ಕಾರ್ಯದರ್ಶಿ ಗಿರೀಶ ಬಿರಾದರ ಲೋಕೇಶ ಪಾಟೀಲ್, ತಾಲೂಕು ಅಧ್ಯಕ್ಷ ಬಸವರಾಜ ಕಾರಬಾರಿ, ಔರದ ತಾಲೂಕು ಅಧ್ಯಕ್ಷ ಬಾಲಾಜಿ ದಾಮ, ಪ್ರಮುಖರಾದ ಜಗದೀಶ್ ಪಾಟೀಲ್ ಕಾಶೀನಾಥ ಚಳಕಾಪೂರೆ, ಭದ್ರಯ್ಯ ಸ್ವಾಮಿ ಮಹೇಶ ರಾಚೋಟೆ, ಸಂಗಮೇಶ್ ಮಾರ್ಗೆ ಪ್ರದೀಪ ಗೋಖಲೆ, ಹರೀಶ ಡೊಳ್ಳೆ, ರಾಹುಲ, ಶೈಲೇಶ ಕರಂಜೆ ಸೇರಿದಂತೆ ಹಲವರು ಇದ್ದರು.

# ನಂದಿ ರಥಯಾತ್ರೆಗೆ ಭವ್ಯ ಸ್ವಾಗತ



ಮಲ್ಲಮ್ಮನುಡಿವಾರ್ತೆ

ಹುಣಸೂರು: ಮಾ.10:–ರಾಜ್ಯಾದ್ಯಂತ ಸಂಚರಿಸುತ್ತಿರುವನಂದಿ ರಥಯಾತ್ರೆಯನ್ನು ನಿನ್ನೆ ತಾಲ್ಲೂಕಿನ ಗಾವಡಗೆರೆ ಮಠದ ಶ್ರೀ ನಟರಾಜಸ್ವಾಮಿಗಳು, ಮಾದಳ್ಳಿ ಮಠದ ಶ್ರೀ ಶಾಂಭ ಶಿವನಂದಸ್ವಾಮಿಗಳು ಮತ್ತು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ರಥಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ನಗರದ ವಿಶ್ವೇಶ್ವರಯ್ಯ ಸರ್ಕಲ್ ಬಳಿ ಸ್ವಾಗತ ಕೋರಿದರು. ಈ ಸಂದರ್ಭದಲ್ಲಿ ನಗರಸಭಾ ಸದಸ್ಯರುಗಳಾದ ವಿವೇಕಾನಂದ, ಶ್ರೀನಾಥ್, ಹಿರಿಯ ವಕೀಲ ಬಿ.ಎಸ್. ಯೋಗಾನಂದ, ಗ್ಯಾರೆಂಟಿ ಯೋಜನೆಯ ತಾಲೂಕು ಅಧ್ಯಕ್ಷ ರಾಘು, ಮುಖಂಡರುಗಳಾದ ಅನಿಲ್, ದಾಸ್ ಸೇರಿದಂತೆ ನೂರಾರು ಮಂದಿ ಭಕ್ತರು ಉಪಸ್ಥಿತರಿದ್ದರು.


ಕರ್ನಾಟಕ ಸರ್ಕಾರ. ಗ್ಯಾರಂಟಿ ಸರ್ಕಾರ
ಗೃಹ ಜ್ಯೋತಿ
ಪ್ರತಿ ಮನೆಗೆ
200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಬೆವಿಕಂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ವಿದ್ಯುತ್ ಬಿಲ್/ ELECTRICITY BILL
GSTN No.: 29AACCB1412G1Z5
BESCOM
O/o. AEE(Ele.) N7 - KURUBARAHALLI
Account Details
ಆರ್.ಆರ್. ಸಂಖ್ಯೆ/ RR Nos N3EH4536
ಖಾತೆ ಸಂಖ್ಯೆ/Acc.ID 5107756000
ಮಾ.ಓ. ಸಂಕೇತ/MR Code 14002768
ವೈಯಕ್ತಿಕ ವಿವರಗಳು/Personal Details
ಹೆಸರು ಮತ್ತು ವಿಳಾಸ/Name and Address
ಸಂಪರ್ಕದ ವಿವರಗಳು/Connection Details
ಜಕಾತಿ/Tariff 1LT2A
ಮಂ. ಪ್ರಮಾಣ/Sanc Load 3KW + 0HP
ಗೃಹ ಜ್ಯೋತಿ/GJS Reg Date 27-06-2023
ಸರಾಸರಿ/Average [FY22-23] 57.17
ಅರ್ಹ/Entitlement Units 63.0
ಬಿಲ್ ವಿವರ/Billing Details
ಬಿಲ್ಲಿಂಗ್ ಅವಧಿ/Billing Period 10/10/2023 to 10/11/2023
ರೀಡಿಂಗ್ ದಿನಾಂಕ/Rdng Date 10-11-2023
ಬಿಲ್ ಸಂಖ್ಯೆ/Bill No. 43133023B100092
ಬಳಕೆಯ ವಿವರ/Consumption Detail
ಇಂದಿನ ಮಾಪನ/Pres Rdg. 6312
ಹಿಂದಿನ ಮಾಪನ/Prev Rdg. 6252
ಮಾಪನ ಸ್ಥಿರಾಂಕ/Constant 1
ಬಳಕೆ/Consumption Units 60
ಸರಾಸರಿ/Average 60
ದಾಖಲಿತ ಬೇಡಿಕೆ/Recorded MD 1.7KW
ಪವರ್ ಫ್ಯಾಕ್ಟರ್/Power Factor 1.0
ಸಂ. ಪ್ರಮಾಣ/Connected Load 0.0KW
ಅರ್ಹ ಯೂನಿಟ್/Eligible for subsidy 60
ಪಾವತಿ ಯೂನಿಟ್/Units chargeable 0
ಬಳಸಿದ ಯೂನಿಟ್ ಬಿಲ್ ಮೊತ್ತ/Bill for Consumed Unit
ನಿಗದಿತ ಶುಲ್ಕ/Fixed Charges (Unit, Rate, Amount) 3.0KW 110 330.00
ವಿದ್ಯುತ್ ಶುಲ್ಕ/Energy Charges (Unit, Rate, Amount) 60 4.75 285.00
ಇಂಧನ ಹೊಂದಾಣಿಕೆ ಶುಲ್ಕ/FPPCA (Unit, Rate, Amt) 60 0.35 21.00
ತೆರಿಗೆ/Tax @ 9% 25.65
ಉಪ ಮೊತ್ತ-1/Sub-Total-1 661.65
ಗೃಹ ಜ್ಯೋತಿ ಅನುದಾನ/Gruha Jyothi Subsidy by GoK
ನಿಗದಿತ ಶುಲ್ಕ/Fixed Charges (Unit, Rate, Amount) 3.0KW 110 330.00
ವಿದ್ಯುತ್ ಶುಲ್ಕ/Energy Charges (Unit, Rate, Amount) 60 4.75 285.00
ಇಂಧನ ಹೊಂದಾಣಿಕೆ ಶುಲ್ಕ/FPPCA (Unit, Rate, Amt) 60 0.35 21.00
ತೆರಿಗೆ/Tax @ 9% 25.65
ಉಪ ಮೊತ್ತ-2/Sub-Total-2 661.65
ಬಿಲ್ ಮೊತ್ತ/Bill Amount (1-2) ₹ 0.0
Additional Charges
ಪಿ.ಎಫ್. ದಂಡ/PF Penalty 0.00
ಹೆ.ಲೋ. ದಂಡ/MD Penalty 0.00
ಬಡ್ಡಿ/Interest 0.00
ಇತರೇ/Others 0.00
ಡೆಬಿಟ್ or ಕ್ರೆಡಿಟ್/Debit or Credit 0.00
ಪ್ರಸ್ತುತ ಬೇಡಿಕೆ/Cur. Demand Payable ₹0.00
ಬಾಕಿ/Arrears 0.00
ಪಾವತಿಯ ಮೊತ್ತ/Net Payable ₹ 0.00
ಪಾವತಿಗೆ ಕಡೆಯ ದಿನಾಂಕ/Due Date 24/11/2023
5107756000#0 10/11/2023 10:45
For any billing related clarification call 1912 / Call Subdivision
ಗ್ರಾಹಕರ ಆರ್‌ಆರ್ ಸಂಖ್ಯೆ
ಗೃಹ ಜ್ಯೋತಿ ಅರ್ಹತೆಯ ವಿವರಗಳು
ಉಚಿತ ಮತ್ತು ಬಿಲ್ ಮಾಡಬಹುದಾದ ಯೂನಿಟ್ ವಿವರಗಳು
ಅರ್ಹವಾದ ಯೂನಿಟ್ ವಿವರಗಳು
ವಿದ್ಯುತ್‌ನ ಒಟ್ಟು ಬಿಲ್ ಮೊತ್ತ
ಗೃಹ ಜ್ಯೋತಿ ಸಬ್ಸಿಡಿ ಮೊತ್ತ
ಪಾವತಿ ಮಾಡಬೇಕಾದ ಬಿಲ್ ಮೊತ್ತ ರೂ. 0.00
ನೋಂದಣಿಯಾದ ಒಟ್ಟು ಸಂಖ್ಯೆ 1.65 ಕೋಟಿ
ಫಲಾನುಭವಿಗಳ ಒಟ್ಟು ಸಂಖ್ಯೆ 1.59 ಕೋಟಿ
ಒಟ್ಟು ಸಬ್ಸಿಡಿ ಮೊತ್ತ ರೂ.4,400/- ಕೋಟಿ
96% ಫಲಾನುಭವಿಗಳು - ಕರ್ನಾಟಕದಾದ್ಯಂತ
ನೋಂದಣಿಗೆ ಯಾವುದೇ ಅಂತಿಮ ದಿನಾಂಕ ಇರುವುದಿಲ್ಲ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ಪ್ರಗತಿಪರ ಮತ್ತು ಸುಸ್ಥಿರ ನಾಯಕತ್ವದಡಿಯಲ್ಲಿ ಜನತೆಗೆ ಸುಭದ್ರ ಬದುಕು ಕಟ್ಟಿಕೊಟ್ಟ 'ಕರ್ನಾಟಕ ಮಾದರಿ ಸರ್ಕಾರ'
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಪ್ರತಿನಿತ್ಯ 62 ಲಕ್ಷ ಮಹಿಳಾ ಪ್ರಯಾಣಿಕರು. ಇದುವರೆಗೆ 136 ಕೋಟಿ ಟ್ರಿಪ್
ಗೃಹಲಕ್ಷ್ಮಿ ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
1.09 ಕೋಟಿ ಖಾತೆಗಳಿಗೆ ನಗದು ವರ್ಗಾವಣೆ
ಜ್ಯೋತಿ ಯೋಜನೆಗೆ
ಸನ್ಮಾನ್ಯ ಮುಖ್ಯಮಂತ್ರಿ, ಶ್ರೀ ಸಿದ್ದರಾಮಯ್ಯನವರು ಮತ್ತು ಮಾನ್ಯ ಉಪ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ರವರು ಗೃಹ ಜ್ಯೋತಿ ಗ್ಯಾರಂಟಿ ಯೋಜನೆಗೆ ಚಾಲನೆ ನೀಡುತ್ತಿರುವುದು.
3.99 ಕೋಟಿ ಫಲಾನುಭವಿಗಳಿಗೆ 3751 ಕೋಟಿ ರೂ. ವರ್ಗಾವಣೆ
ಅನ್ನಭಾಗ್ಯ ಬಡವರಿಗೆ ಪ್ರತಿ ತಿಂಗಳು 10 kg 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170
4.5 ಲಕ್ಷ ಯುವ ಜನರಿಗೆ ನೆರವಾಗುವ ನಿರೀಕ್ಷೆ
ಯುವನಿಧಿ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ ₹1500 ಡಿಪ್ಲೋಮಾ ಪದವೀಧರರಿಗೆ
ನುಡಿದಂತೆ ನಡೆದಿದ್ದೇವೆ...
ಕರ್ನಾಟಕದಲ್ಲಿ 96% ಗೂ ಹೆಚ್ಚಿನ ಜನರು ಒಂದು ಅಥವಾ ಹೆಚ್ಚು ಗ್ಯಾರಂಟಿ ಯೋಜನೆಗಳ ಅನುಕೂಲವನ್ನು ಪಡೆಯುತ್ತಿರುವರು.
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka https://dipr.karnataka.gov.in/
ಕರ್ನಾಟಕ ವಾರ್ತೆ
ಗಡಿಭಾಗದ ಹಾಗೂ ವಿಶೇಷ ಮಾಧ್ಯಮ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು